ದುಡಿವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

Blog: janashakthi.wordpress.com e-mail : js_weekly@yahoo.com

ಸಂಪುಟ 6 ಸಂಚಿಕೆ 11

ಮಾರ್ಚ್ 11, 2012

ಪುಟ 16

ರೂ. 5/-







ಫೆಬ್ರವರಿ 28


ದೇಶವ್ಯಾಪಿ ಮಹಾಮುಷ್ಕರ

ಮಹಾ ಯಶಸ್ವಿ

ಆಳುವವರಿಗೆ ದುಡಿಯುವ ವರ್ಗದ ಎಚ್ಚರಿಕೆ

ಬಿಜೆಪಿ ಪಕ್ಷದ ಚಿಂತನ-ಮಂಥನವೆಂಬ ಪ್ರಹಸನ





ಮಹಿಳಾ ದಿನಾಚರಣೆ:

ವಿಮೋಚನೆಗೆ ಹೋರಾಟದ ಸಂಕಲ್ಪ

ಜಾರುದಾರಿಯಲ್ಲಿ ಭಾರತದ ವಿದೇಶಾಂಗ ಧೋರಣೆ


ಬೆಂಗಳೂರಿನಲ್ಲಿ ಬೃಹತ್ ರ್‍ಯಾಲಿ

ರಾಜ್ಯ ಬಜೆಟ್‌ನಲ್ಲಿ ಕೃಷಿ ಕೂಲಿಕಾರರಿಗೆ ನ್ಯಾಯಯುತ ಪಾಲು ಕೊಡಲು ಆಗ್ರಹ

ಹೆಚ್ಚಾಗಿ ದಲಿತರು, ಹಿಂದುಳಿದವರು ಇರುವ ಮತ್ತು ಕಡು ಬಡವರೂ ಆದ ಶ್ರಮ ಜೀವಿ ಕೃಷಿ ಕೂಲಿಕಾರರನ್ನು ಕೇಂದ್ರ ಸರ್ಕಾರವಾಗಲಿ ರಾಜ್ಯ ಸರ್ಕಾರವಾಗಲಿ ಮನುಷ್ಯರೆಂದೇ ಪರಿಗಣಿಸಿಲ್ಲವೆಂದು ತೋರುತ್ತದೆ. ಏಕೆಂದರೆ ಬಜೆಟ್ ಮಂಡನೆಯ ಸಂದರ್ಭದಲ್ಲಿ ಈ ವಿಭಾಗದ ಸಮಸ್ಯೆಗಳ ಕುರಿತು ಗಮನವೇ ಸರ್ಕಾರಗಳಿಗೆ ಇರುವುದಿಲ್ಲ. ಈ ಧೋರಣೆಯನ್ನು ಖಂಡಿಸಿ ಬಜೆಟ್‌ಗೆ ಮುಂಚಿತವಾಗಿಯೇ ಸರ್ಕಾರಗಳ ಗಮನ ಸೆಳೆಯುವ ನಿಟ್ಟಿನಲ್ಲಿ ನಡೆಯಿತು ರಾಜ್ಯ ಮಟ್ಟದ ರ್‍ಯಾಲಿ.


ಮೆರವಣಿಗೆ


ಸುನೀತ್ ಭೋಪ್ರಾ


ಹನನ್‌ಮುಲ್ಲಾ

ಕಳೆದ ವರ್ಷದ ಬಜೆಟ್ಟನ್ನು ರೈತಪರ ಬಜೆಟ್, ಕೃಷಿಪರ ಬಜೆಟ್ ಎಂದು ಘೋಷಿಸಿದರೂ ಕೂಡ ಇಡೀ ಬಜೆಟ್ನಲ್ಲಿ ಎಲ್ಲಿಯೂ ಕೃಷಿಕೂಲಿಕಾರರ ಹೆಸರಿನ ಪ್ರಸ್ತಾಪ ಕೂಡ ಇಲ್ಲ. ಈ ವರ್ಷ ಕಳೆದ ವರ್ಷದಂತೆ ಮಾಡದೇ ಕೃಷಿ ಕೂಲಿಕಾರರ ಸಮಸ್ಯೆಗಳನ್ನು ಹಾಗೂ ಬೇಡಿಕೆಗಳನ್ನು ಪರಿಗಣಿಸಿ ಅವರಿಗೆ ಅವರ ನ್ಯಾಯಯುತ ಪಾಲನ್ನು ಕೊಡಬೇಕೆಂದು ಆಗ್ರಹಿಸಿ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ನೇತೃತ್ವದಲ್ಲಿ ಬೆಂಗಳೂರು ನಗರದಲ್ಲಿ ಫೆಬ್ರವರಿ 27, 2012 ರಂದು ರಾಜ್ಯ ಮಟ್ಟದ ರ್‍ಯಾಲಿ ನಡೆಸಲಾಯಿತು. ನಗರದ ರೈಲ್ವೇ ನಿಲ್ದಾಣದಿಂದ ಬೆಳಿಗ್ಗೆ ಮೆರವಣಿಗೆ ಹೊರಟು ಸ್ವಾತ್ರಂತ್ರ್ಯ ಉದ್ಯಾನವನದ ಬಳಿಯ ಕಾಳಿದಾಸ ಮಾರ್ಗದಲ್ಲಿ ಬಹಿರಂಗ ಸಭೆ ನಡೆಸಲಾಯಿತು. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ ಸಾವಿರಾರು ಜನ / ಕೂಲಿಕಾರರು ಪಾಲ್ಗೊಂಡಿದ್ದರು.

ಬಹಿರಂಗ ಸಭೆಯನ್ನುದ್ದೇಶಿಸಿ ಸಂಘಟನೆಯ ಅಖಿಲ ಭಾರತ ಸಹ ಕಾರ್ಯದರ್ಶಿ ಸುನಿತ್ ಭೋಪ್ರಾರವರು ಮಾತನಾಡಿ ನಮ್ಮ ದೇಶದಲ್ಲಿ ಪ್ರಾಣಿಗಳನ್ನು ರಕ್ಷಿಸಲು ಕಾನೂನು, ಮರ–ಗಿಡಗಳನ್ನು ರಕ್ಷಿಸಲು ಕಾನೂನುಗಳು ಇವೆ, ಆದರೆ ಸ್ವಾತಂತ್ರ್ಯ ಬಂದು 64 ವರ್ಷಗಳು ಕಳೆದರೂ ಕೃಷಿ ಕೂಲಿಕಾರರನ್ನು ರಕ್ಷಿಸುವ ಒಂದೇ ಒಂದು ಕೇಂದ್ರೀಯ ಶಾಸನ ಇಲ್ಲ. ದೇಶದಲ್ಲಿ ಶೇ.46ರಷ್ಟು ಕೂಲಿಕಾರರು ಇದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಸುಮಾರು ಶೇ.50ರಷ್ಟು ಕೂಲಿಕಾರರು ಕೂಲಿಕಾರರಾಗಿದ್ದಾರೆ. ಅವರ ಶ್ರಮ ಇಲ್ಲದಿದ್ದರೆ, ಕೃಷಿ ನಡೆಯುವುದಿಲ್ಲ, ಬೆಳೆ ಬೆಳೆಯುವುದಿಲ್ಲ ಹಾಗಿದ್ದರೂ ಕೂಡ, ಅವರ ಬೇಡಿಕೆ ಸಮಸ್ಯೆಗಳು ಲೆಕ್ಕಕ್ಕೆ ಇಲ್ಲ. ಬಜೆಟಿಗೆ ಮುಂಚೆ ಕೈಗಾರಿಕೋದ್ಯಮಿಗಳು, ವ್ಯಾಪಾರಸ್ಥರು, ಮುಂತಾದ ಶ್ರೀಮಂತ ಜನರನ್ನು ಕರೆದು ಮಾತನಾಡುವ ಕೇಂದ್ರ ರಾಜ್ಯ ಸರ್ಕಾರಗಳು ಕೃಷಿ ಕೂಲಿಕಾರರನ್ನು ಗಣನೆಗೇ ತೆಗೆದುಕೊಳ್ಳುವುದಿಲ್ಲ ಎಂದರೆ ಅದನ್ನು ಒಪ್ಪುವುದು ಸಾಧ್ಯವಿಲ್ಲ. ಬೆಂಗಳೂರಿನಲ್ಲಿ ಫೆಬ್ರವರಿ 26–27ರಂದು ನಡೆದ ಅಖಿಲ ಭಾರತ ಕೃಷಿಕೂಲಿಕಾರರ ಸಂಘಟನೆಯ ಕೇಂದ್ರ ಕಾರ್ಯಕಾರಿ ಸಭೆಯಲ್ಲಿ ಈ ಕುರಿತು ಚರ್ಚಿಸಿ ರಾಷ್ಟ್ರವ್ಯಾಪಿ ಹೋರಾಟ ತೀವ್ರಗೊಳಿಸಬೇಕೆಂದು ನಿರ್ಧರಿಸಲಾಗಿದೆ ಎಂದರು.

ಬಗರ್ ಹುಕುಂ ಸಕ್ರಮಗೊಳಿಸಿ, ಕೂಲಿ ಹೆಚ್ಚಿಸಿ

ಕೃಷಿಕೂಲಿಕಾರರನ್ನು ಬೆಂಬಲಿಸಿ ಮಾತನಾಡಿದ ಮಾಜಿ ಶಾಸಕರು, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಗಳಾದ ಜಿ.ವಿ. ಶ್ರೀರಾಮರೆಡ್ಡಿರವರು ಕರ್ನಾಟಕ ರಾಜ್ಯದಲ್ಲಿ ಗಂಭೀರ ಪರಿಸ್ಥಿತಿ ಇದೆ. ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕನಿಷ್ಠ 130 ರೂ. ಕೂಲಿಯನ್ನು ಕೊಡಲೇಬೇಕು. ನಿಜವಾಗಿಯೂ ಕೃಷಿ ಕೆಲಸವನ್ನು ಮಾಡುವ ಕೃಷಿ ಕೂಲಿಕಾರರಿಗೆ ಭೂಮಿ ಇಲ್ಲ. ಅವರಿಗೆ ಭೂಮಿ ಒದಗಿಸಬೇಕು, ಬಗರ್‌ಹುಕುಂ ಭೂಮಿಯನ್ನು ಸಕ್ರಮಗೊಳಿಸಬೇಕೆಂದು ಆಗ್ರಹಿಸಿದರು.

ಬರಲಿ ಕೇಂದ್ರೀಯ ಶಾಸನ ಸಿಗಲಿ ವಾಸಕ್ಕೆ ನಿವೇಶನ

ಮಾಜಿ ಸಂಸದರು ಹಾಗೂ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘಟನೆಯ ಅಖಿಲ ಭಾರತ ಸಹ ಕಾರ್ಯದರ್ಶಿಗಳಾದ ಹನನ್ ಮುಲ್ಲಾರವರು ಮಾತನಾಡಿ ಉದಾರೀಕರಣ, ಜಾಗತೀಕರಣಗಳು ಶ್ರೀಮಂತರ ಪರವಾಗಿವೆ, ಇದರಿಂದ ರೈತರ ಆತ್ಮಹತ್ಯೆಗಳ ಜೊತೆಗೆ ಕೃಷಿಕೂಲಿಕಾರರ ಆತ್ಮಹತ್ಯೆಗಳು ಜರುಗುತ್ತಿವೆ. ಕೃಷಿಕೂಲಿಕಾರರ ರಕ್ಷಣೆಗೆ ಕೇಂದ್ರೀಯ ಶಾಸನ ಹಾಗೂ ರಾಜ್ಯದಲ್ಲಿ ಸೂಕ್ತ ಕಾನೂನು ರೂಪಿಸಬೇಕು, ಕೂಲಿಕಾರರಿಗೆ ಉಚಿತ ನಿವೇಶನ–ಮನೆಯನ್ನು ಕೊಡಬೇಕೆಂದು ಆಗ್ರಹಿಸಿದರು. ಸಂಘಟನೆಯ ರಾಜ್ಯ ಉಪಾಧ್ಯಕ್ಷರಾದ ಜಿ.ಎನ್.ನಾಗರಾಜ್‌ರವರು ಮಾತನಾಡಿ ಕೇರಳ ರಾಜ್ಯದಲ್ಲಿ ಕೃಷಿ ಕೂಲಿಕಾರರಿಗೆ ದಿನಕ್ಕೆ 250ರಿಂದ 300ರವರೆಗೆ ಕೂಲಿ ಇದೆ. ನಿವೃತ್ತಿ ವೇತನದ ಸೌಲಭ್ಯವು ಇದೆ. ರಾಜ್ಯದಲ್ಲಿಯೂ ಕೂಲಿ ಹೆಚ್ಚಳ ಹಾಗೂ ನಿವೃತ್ತಿ ವೇತನ ಜಾರಿಗೆ ಕ್ರಮವಹಿಸಬೇಕೆಂದು ಆಗ್ರಹಿಸಿದರು.

ಉದ್ಯೋಗ ಖಾತ್ರಿಯಾಗಲಿ ಭ್ರಷ್ಟಾಚಾರ ನಿಲ್ಲಲಿ

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಕೃಷಿ ಕೂಲಿಕಾರರ ಸಂಘಟನೆಯ ರಾಜ್ಯಾಧ್ಯಕ್ಷರಾದ ನಿತ್ಯಾನಂದಸ್ವಾಮಿ ಮಾತನಾಡಿ, ಕರ್ನಾಟಕ ರಾಜ್ಯದಲ್ಲಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದ್ದು, ಈ ಭ್ರಷ್ಟಾಚಾರವನ್ನು ನಿಯಂತ್ರಿಸಬೇಕು, ಕೆಲಸ ಸಿಗದ ದಿನಗಳಿಗೆ ನಿರುದ್ಯೋಗ ಭತ್ಯೆ ನೀಡಬೇಕು, ಎಪಿಎಲ್–ಬಿಪಿಎಲ್ ರೇಷನ್ ಕಾರ್ಡ್ ಎನ್ನದೇ ಎಲ್ಲರಿಗೂ ಬಿಪಿಎಲ್ ರೇಷನ್ ಕಾರ್ಡ್ ನೀಡಬೇಕೆಂದು ಆಗ್ರಹಿಸಿದರು.

ದೇವೇಂದ್ರಪ್ಪ ಕುಟುಂಬದ ಪುನರ್ವಸತಿ ವ್ಯವಸ್ಥೆ ಪ್ರಶ್ನೆ

ಗುಲ್ಬರ್ಗಾ ಜಿಲ್ಲೆ ಚಿತ್ತಾಪುರ ತಾಲ್ಲೂಕಿನ ಕಾಳಗಿ ಗ್ರಾಮದಲ್ಲಿ ಉದ್ಯೋಗ ಖಾತ್ರಿ ವೇತನ ಬಿಡುಗಡೆಯಾಗದೇ ನೊಂದು ಆತ್ಮಹತ್ಯೆ ಮಾಡಿಕೊಂಡ ಬಡ ಕೂಲಿಕಾರ ದೇವೀಂದ್ರಪ್ಪನ ಪತ್ನಿ ಮತ್ತು ಕುಟುಂಬದವರು ಬಹಿರಂಗ ಸಭೆಯ ವೇದಿಕೆಯ ಮುಂಭಾಗದಲ್ಲಿ ಹಾಜರಿದ್ದರು. ಸರ್ಕಾರವು ಈ ಕುಟುಂಬಕ್ಕೆ 2 ಲಕ್ಷ ಪರಿಹಾರ ಕೊಡಬೇಕು, ಕುಟುಂಬದ ಸದಸ್ಯರಿಗೆ ಸರ್ಕಾರಿ ಉದ್ಯೋಗ ನೀಡಬೇಕು, ಮಕ್ಕಳ ಶಿಕ್ಷಣದ ಜವಾಬ್ದಾರಿಯನ್ನು ಸರ್ಕಾರವೇ ವಹಿಸಿಕೊಳ್ಳಬೇಕೆಂದು ಸಭೆಯಲ್ಲಿ ಆಗ್ರಹಿಸಲಾಯಿತು.

ತುರ್ತು ಪರಿಹಾರ

ಸಂಘಟನೆಯ ವತಿಯಿಂದ ತಾತ್ಕಾಲಿಕ ಪರಿಹಾರವಾಗಿ 5,000 ರೂಪಾಯಿಗಳನ್ನು ಸ್ಥಳದಲ್ಲೇ ನೀಡಲಾಯಿತು. ಮತ್ತು ಕೃಷಿಕೂಲಿಕಾರ ಸಂಘಟನೆ ಇರುವ ಎಲ್ಲ ತಾಲ್ಲೂಕು ಸಮಿತಿಗಳಿಂದಲೂ ಕನಿಷ್ಟ 2000 ರೂಪಾಯಿಗಳ ಪರಿಹಾರವನ್ನು ಸಂಗ್ರಹಿಸಿಕೊಡಬೇಕೆಂಬ ನಿರ್ಧಾರವನ್ನು ಬಹಿರಂಗ ಸಭೆಯಲ್ಲಿ ಘೋಷಿಸಲಾಯಿತು. ಆರಂಭದಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾರವರು ಸ್ವಾಗತಿಸಿದರು. ಕೊನೆಯಲ್ಲಿ ಸಂಘಟನೆಯ ನಿಯೋಗ ಮುಖ್ಯಮಂತ್ರಿಗಳ ಕಛೇರಿಗೆ ತೆರಳಿ ಬೇಡಿಕೆಗಳಿಗೆ ಸಂಬಂಧಿಸಿ ಮನವಿಯನ್ನು ಅರ್ಪಿಸಿತು.





ಸಂಪಾದಕೀಯ

ಸಾರ್ವತ್ರಿಕ ಮುಷ್ಕರ: ಮೊಳಗಿದ ಕಹಳೆ

ದೇಶದ ಹನ್ನೊಂದು ಪ್ರಮುಖ ಕಾರ್ಮಿಕ ಸಂಘಟನೆಗಳು ಕರೆ ನೀಡಿದ್ದ ಹಾಗೂ ವಿವಿಧ ಸಾಮೂಹಿಕ ಸಂಘಟನೆಗಳು ಅಲ್ಲದೇ ಎಡ ಪಕ್ಷಗಳು ಬೆಂಬಲಿಸಿದ ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ಅತ್ಯಭೂತಪೂರ್ವವಾಗಿ ಯಶಸ್ವಿಗೊಂಡಿರುವುದು ಐತಿಹಾಸಿಕವಾಗಿದೆ. ಕೇವಲ ತಮ್ಮ ಬೇಡಿಕೆಗಳಿಗಾಗಿಯೇ ಸೀಮಿತಗೊಳ್ಳದೇ ಇಡೀ ಜನತೆಯ, ದೇಶದ ಭವಿಷ್ಯದ ಉಳಿವಿಗಾಗಿ ವಿಶಾಲವಾದ, ಐಕ್ಯ ಚಳುವಳಿ ಸಾರಿದ ದುಡಿಯುವ ವರ್ಗ ಮತ್ತು ಅದರ ಸಂಘಟನೆಗಳು ಅಭಿನಂದನಾರ್ಹರು.

ಉದಾರೀಕರಣ, ಜಾಗತೀಕರಣದ ವಿನಾಶಕಾರಿ ಆರ್ಥಿಕ ನೀತಿಗಳ ವಿರುದ್ಧ ಎಲ್ಲೆಡೆ ಮೂಡುತ್ತಿರುವ ವರ್ಗ ಜಾಗೃತಿ ಹಾಗೂ ಬೆಳೆಯುತ್ತಿರುವ ಪ್ರತಿರೋಧದ ಸಂಕೇತವಾಗಿದೆ ಈ ಮುಷ್ಕರದ ಯಶಸ್ಸು. ದೇಶದ ಬಹುತೇಕ ಎಲ್ಲಾ ಸಾರ್ವಜನಿಕ ವಲಯದ ಕೈಗಾರಿಕೆಗಳು, ಹಣಕಾಸು ಸಂಸ್ಥೆಗಳು ಮಾತ್ರವಲ್ಲ ಸಂಘಟಿತ, ಅಸಂಘಟಿತ ವಲಯದ ಹತ್ತಾರು ಕೋಟಿ ದುಡಿಯುವ ಜನತೆ ಈ ಮಹಾ ಸಂಗ್ರಾಮದಲ್ಲಿ ದುಮುಕಿದ್ದಾರೆ. ಇದನ್ನು ಜನತೆಯೂ ಬೆಂಬಲಿಸಿದ್ದರಿಂದ ಅದು ಕೇವಲ ಮುಷ್ಕರವಷ್ಟೇ ಆಗದೇ ವ್ಯಾಪಕವಾಗಿ ಬಂದ್ ಸ್ವರೂಪಕ್ಕೇ ತಿರುಗಿ ರಾಜಕೀಯ ಮಹತ್ವವನ್ನು ಪಡೆದು ಕೇಂದ್ರ–ರಾಜ್ಯ ಸರ್ಕಾರಗಳ ವಿರುದ್ಧ ಜನತೆಯಲ್ಲಿ ಹೆಪ್ಪುಗಟ್ಟಿರುವ ಅತೃಪ್ತಿಯನ್ನು ತೋರಿಸಿತು. ಕರ್ನಾಟಕದಲ್ಲಿಯೂ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಪೂರ್ಣ ಬಂದ್ ಮಾಡಿ ಪ್ರತಿಕ್ರಿಯಿಸಿದ್ದು ಜನತೆ ಕೇಂದ್ರದ ಯುಪಿಎ ಮತ್ತು ರಾಜ್ಯದ ಬಿಜೆಪಿ ಸರ್ಕಾರಗಳ ವಿರುದ್ಧ ತಮ್ಮ ಅಸಹನೆ ತೋರಿಸಲು ದೊರೆತ ಅವಕಾಶವಾಗಿದೆ.

ಈ ಮುಷ್ಕರದಲ್ಲಿ ಯಾವುದೇ ಜಾತಿ, ಮತ ಧರ್ಮಗಳು, ಅಷ್ಟೇಕೆ ವಿಭಿನ್ನ ರಾಜಕೀಯ ಒಲವುಗಳನ್ನು ಮೀರಿ ವಿಶಾಲ ಐಕ್ಯತೆ ಮೂಡಿದೆ. ಜಾಗತೀಕರಣ, ಉದಾರೀಕರಣ, ಖಾಸಗೀಕರಣದ ನೀತಿಗಳ ವಿರುದ್ಧ ಕೇವಲ ಭಾರತದಲ್ಲಿ ಮಾತ್ರವಲ್ಲ ವಿಶ್ವದಾದ್ಯಂತ ಭಾರೀ ಪ್ರತಿರೋಧದ ಜನಾಂದೋಲನಗಳು ನಡೆಯುತ್ತಲಿವೆ. ಇದರಿಂದಾಗಿ ಆ ದೇಶಗಳಲ್ಲಿ ಆಳುವ ಜನವಿರೋಧಿ ಸರ್ಕಾರಗಳು ಪತನವಾಗಿ, ಚುನಾವಣೆಗಳಲ್ಲಿ ಸೋತು ಹೊಸ ಬದಲಾವಣೆಗಳು ಬಂದಿರುವುದನ್ನು ಎಲ್ಲರೂ ಗಮನಿಸಬೇಕು. ನಮ್ಮ ದೇಶದಲ್ಲಿಯೂ ಈ ಮುಷ್ಕರ ಅಂತಹ ಪರಿವರ್ತನೆ ತರುವಲ್ಲಿ ಸಕಾರಾತ್ಮಕವಾದ ಪಾತ್ರವನ್ನು ವಹಿಸಬಲ್ಲದು.

ಈ ಮುಷ್ಕರದಲ್ಲಿ ಎತ್ತಲಾದ ಬೆಲೆ ಏರಿಕೆ ನಿಯಂತ್ರಣ, ಸಾರ್ವತ್ರಿಕ ಪಡಿತರ ವ್ಯವಸ್ಥೆ ಬಲ ಪಡಿಸುವುದು, ಕನಿಷ್ಠ ಕೂಲಿ ನಿಗದಿ, ಗುತ್ತಿಗೆ ಪದ್ಧತಿ ಶೋಷಣೆ ಬಗ್ಗೆ, ಕಾರ್ಮಿಕ ಕಾನೂನುಗಳ ಜಾರಿ, ಅಸಂಘಟಿತರ ಬವಣೆ, ಕೆಲಸದ ಅಭದ್ರತೆ, ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಬಂಡವಾಳ ಹೂಡಿಕೆ ವಿರೋಧಿಸಿ ಮುಂತಾದ ಬೇಡಿಕೆಗಳು ಎಲ್ಲರಿಗೂ ಸಂಬಂಧಿಸಿದ್ದು. ಇಂತಹ ಕನಿಷ್ಠ ಬೇಡಿಕೆಗಳನ್ನು ಎತ್ತಿದಾಗ, ಪರಿಹಾರದ ಪರ್ಯಾಯದ ಮಾರ್ಗಗಳನ್ನು ಸೂಚಿಸಿದಾಗಲೂ ಸರ್ಕಾರ ತಿರಸ್ಕರಿಸುತ್ತಲೇ ಬಂದಿದೆ. ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರಕಾರ, ದೇಶದ ಬೆನ್ನೆಲುಬಾದ, ಸಾರ್ವಭೌಮ ದೇಶದ ಪ್ರಜೆಗಳಾದ ಶ್ರಮಜೀವಿಗಳ ಹಿತಗಳಿಗಿಂತ, ಸ್ವದೇಶಿ–ವಿದೇಶಿ ಬಂಡವಾಳಗಾರರ ಹಿತ ಕಾಯುವುದನ್ನೇ ಪರಮೋಚ್ಛ ಕರ್ತವ್ಯವನ್ನಾಗಿರಿಸಿ ಕೊಂಡಿದೆ. ಈಗಲೂ ಸರ್ಕಾರವು ಹಣದುಬ್ಬರ ಇಳಿದಿದೆಯೆಂದೂ, ಬೆಲೆ ಏರಿಕೆಯೇ ಇಲ್ಲ ಎನ್ನುವಂತಹ ಹುಸಿ ಪ್ರಚಾರದಲ್ಲಿ ತೊಡಗಿರುವುದು ಖಂಡನೀಯ, ಇಂತಹ ದುಡಿಯುವ ವರ್ಗಗಳ ವಿರೋಧಿ ನಿಲುಮೆಗಳಿಂದಾಗಿಯೇ ದೇಶಾದ್ಯಂತ ಮುಷ್ಕರವನ್ನು ವಿಫಲಗೊಳಿಸಲು ಯತ್ನಿಸಲಾಗಿದೆ. ವಿಶೇಷವಾಗಿ ಪ. ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ಸರ್ಕಾರ ಕಾರ್ಮಿಕರ ಮೇಲೆ, ಎಡ ಶಕ್ತಿಗಳ ಮೇಲೆ ಕಗ್ಗೊಲೆಯಂತಹ ನೇರ ಧಾಳಿಗಳನ್ನೇ ನಡೆಸಿತು. ಹಾಗೇ ವಿವಿಧ ರಾಜ್ಯಗಳಲ್ಲಿಯೂ ಇಂತಹುದೇ ಪ್ರಯತ್ನಗಳನ್ನು ಆಳುವ ವರ್ಗಗಳು ನಡೆಸಿವೆ, ಇಷ್ಟಾದರೂ ಜನತೆ ದಬ್ಬಾಳಿಕೆಗಳನ್ನೆದುರಿಸಿ ಮುಷ್ಕರ ಯಶಸ್ವಿ ಮಾಡಿದ್ದಾರೆ.

ಈ ಅಭೂತ ಪೂರ್ವ ಪ್ರತಿಕ್ರಿಯೆಯಿಂದ ಆಳುವ ಸರ್ಕಾರಗಳು ಇನ್ನಾದರೂ ತಿದ್ದಿಕೊಳ್ಳಬೇಕು, ಇದು ಜನತೆ ಬಾರಿಸಿದ ಎಚ್ಚರಿಕೆಯ ಗಂಟೆ. ಇದೇ ಹೊತ್ತಿನಲ್ಲಿ, ಈಗ ಬೆಳೆದು ಬರುತ್ತಿರುವ ಐಕ್ಯತೆಯನ್ನು ಇನ್ನಷ್ಟು ಬಲಗೊಳಿಸಿ, ಮುಂದಕ್ಕೊಯ್ಯಬೇಕು. ಮುಂದಿನ ದಿನಗಳು ಮತ್ತಷ್ಟು ಮಹಾ ಸಂಗ್ರಾಮಗಳನ್ನು ಕಾಣಲಿವೆ.


ಅಲ್ಲದೇ ಈ ಬೇಡಿಕೆ, ಮುಷ್ಕರದ ಪ್ರತಿಕ್ರಿಯೆಗಳ ಹಿಂದಿನ ಆರ್ಥಿಕ,ರಾಜಕೀಯ ,ಸಾಮಾಜಿಕ ಕಾರಣಗಳನ್ನು ಅರಿತು. ಅದು ಪ್ರಜಾಸತ್ತಾತ್ಮಕ ರಾಜಕೀಯ ಆಂದೋಲನವಾಗಿ ದೇಶದಲ್ಲಿ ಮೂಲಭೂತ ಪರಿವರ್ತನೆ ತರುವಂತಾಗಬೇಕು. ದಿವಾಳಿಖೋರ ಆರ್ಥಿಕ, ರಾಜಕೀಯ ನೀತಿಗಳ ವಿಷಯದಲ್ಲಿ ಕಾಂಗ್ರೆಸ್, ಬಿಜೆಪಿ ಪಕ್ಷಗಳು ಒಂದೇ ನಾಣ್ಯದ ಎರಡು ಮುಖಗಳು ಎಂಬ ಅರಿವು ವ್ಯಾಪಕವಾಗಬೇಕು. ಇಲ್ಲವಾದಲ್ಲಿ ಯುಪಿಎ ಸರ್ಕಾರದ ವಿರುದ್ಧದ ಅತೃಪ್ತಿ ಅದಕ್ಕಿಂತಲೂ ಅಪಾಯಕಾರಿಯಾದ ಕೋಮುವಾದಿಗಳಿಗೆ ಬಲ ತರುವಂತಾಗಬಾರದು. ಈ ಸನ್ನಿವೇಶದಲ್ಲಿ ಎಡ, ಪ್ರಜಾಸತ್ತಾತ್ಮಕ, ಜಾತ್ಯಾತೀತ ಶಕ್ತಿಗಳನ್ನು ಬಲಗೊಳಿಸುವ ನಿಟ್ಟಿನಲ್ಲಿ ರಾಜಕೀಯ ಆಂದೋಲನವೂ ಸಾಗಬೇಕು.

ಇಲ್ಲಿ ಕದನ ವಿರಾಮ ಎಂಬುದು ಎಲ್ಲಿಂದ ಬಂತು?

'ನಾನು ಪಕ್ಷ ಬಿಡುವುದಿಲ್ಲ, ಮತ್ತೆ ಮುಖ್ಯಮಂತ್ರಿಯನ್ನಾಗಿಸಿಯೆಂದು ಅಂಗಲಾಚುವುದೂ ಇಲ್ಲ'. ಹೀಗೆಂದು ಹೇಳಿ ಹಲವಾರು ಊಹಾ ಪೋಹಗಳಿಗೆ ಸಣ್ಣದೊಂದು 'ಬ್ರೇಕ್' ಕೊಟ್ಟದ್ದು ಸರ್ವಾಕಾಂಕ್ಷಿ ಯಡಿಯೂರಪ್ಪನವರೇ ! ಅವರ ಈ ಮಾತಿನಿಂದ ಏನನ್ನು ಗ್ರಹಿಸಬೇಕು ?. ಅವರು ಪಕ್ಷದ ಶಿಸ್ತಿನ ಸಿಪಾಯಿಯೆಂದೇ ? ನಿರ್ಮೋಹಿಯೆಂದೇ ? ಇಲ್ಲವೇ ಸ್ವಾಭಿಮಾನಿಯೆಂದೇ ಅಥವಾ ನಖಶಿಖಾಂತ ಕುದಿಯುತ್ತಿರುವ ಕೋಪ. ಹತಾಶೆಯ ಪ್ರತೀಕವೆಂದೇ ?.

ದಿವಾಳಿ

ಹಾಗೆ ನೋಡಿದರೆ ಬಿಜೆಪಿ ಪಕ್ಷದಲ್ಲಿ ಯಾರಾದರೂ ಸಿದ್ಧಾಂತ, ಸಂಘಟನಾ ಶಿಸ್ತು, ಸಮರ್ಪಣಾ ಮನೋಭಾವವನ್ನು ಎತ್ತಿ ಹಿಡಿವ ಮುಂಚೂಣಿ ನಾಯಕರೇನಾದರೂ ಇದ್ದಾರೆಯೇ ಎಂದರೆ ಕತ್ತಲೆಯಲ್ಲಿ. ಕರಿಬೆಕ್ಕನ್ನು ಬರಿಗಣ್ಣಲ್ಲೇ ಹುಡುಕುವ ಪರಿಯಾದೀತು?. ಒಬ್ಬಿಬ್ಬ ನಾಯಕರಲ್ಲ ಬಿಡಿ, ಇಡೀ ಪಕ್ಷವೇ ಇಂದು ಸರ್ವಮುಖಿಯಾಗಿ ದಿವಾಳಿಯೆದ್ದು ಹೋಗಿದೆ. ಅದರ ರಾಜಕೀಯ–ನೈತಿಕ ಅಧಃಪತನವನ್ನು ಸರಿಪಡಿಸಲಾಗದಷ್ಟು ಕಾರ್ಪೋರೇಟ್ ಸಂಸ್ಕೃತಿಯಲ್ಲಿ ಮುಳುಗೆದ್ದಿದೆ. 'ಕಿವಿ ಹಿಂಡಿ ನೀತಿ ಹೇಳುವ'(?)ವೆಂಬ ಸಂಘವೇ ಅಂತಹ ಸಂಸ್ಕೃತಿಯ ಪ್ರಸಾರ ಕೇಂದ್ರವಾಗಿ ಬಿಟ್ಟಿದೆ. ಇನ್ನು ಯಡಿಯೂರಪ್ಪನವರಿಂದ ಅಂತಹದ್ದನ್ನು ನಿರೀಕ್ಷಿಸಲಾದರೂ ಹೇಗೆ ಸಾಧ್ಯ ?.



ಚಿಂತನ ಮಂಥನದ ಸೋಗಲಾಡಿತನ


ಒಂದಂತೂ ನಿಜ !. ಇದೇ ಫೆಬ್ರವರಿ 27, ಯಡಿಯೂರಪ್ಪನವರ 70ನೇ ಹುಟ್ಟುಹಬ್ಬದಂದು ಏನಾದರೂ ಹೊಸ ಬೆಳವಣಿಗೆ ಆಗಬಹುದೆಂಬ ನಿರೀಕ್ಷೆಯಂತೂ ಜನರಲ್ಲಿ ಇದ್ದೇ ಇತ್ತು. ಕೇವಲ ನಾಲ್ಕು ದಿನಗಳ ಕೆಳಗೆ ಬಿಜೆಪಿಯ ಅಧ್ಯಕ್ಷ ಗಡ್ಕರಿ ಬೆಂಗಳೂರಿನಲ್ಲಿ ತಮ್ಮ ಶಾಸಕರು, ಸಚಿವರು, ನಾಯಕರಿಗೆ ನೀತಿ ಪಾಠ ಹೇಳುವ 'ಚಿಂತನ–ಮಂಥನ'ವೆಂಬ ಸೋಗಲಾಡಿತನದ ಸಭೆಗೆಂದು ಬಂದಾಗ ...
ತೂಕದ ಮನುಷ್ಯ ಯಾವುದ್ಯಾವುದೊ...
ಮೂಲೆಯಲ್ಲಿದ್ದ (ಭಂಡ) ಧೈರ್ಯವನ್ನೆಲ್ಲ...
ಒಟ್ಟುಗೂಡಿಸಿ ಗುಟುರು ಹಾಕಿ ಎರಡು ದಿನಗ...
ಸಭೆಯನ್ನೂ ಎರಡೇ ಗಂಟೆಗಳಲ್ಲಿ ಮುಗಿ...
ಮತ್ತೇ ತಿರುಗಿಯೂ ನೋಡದೇ ದೆಹಲಿ...
ಹಾರಿಬಿಟ್ಟನಲ್ಲ !. 'ಹೋಗುವವರಿದ್ದರೆ ಹೊರಟ...
ಹೋಗಲಿ, ನಾಳೆ ಬದಲು ಇಂದೇ ಹೋಗಲಿ...
ಎಂದು ಭಿನ್ನಮತೀಯರಿಗೆ ಹೇಳಿದ್ದು ಅದ...
ಸಿ.ಎಂ. ಕುರ್ಚಿ ತನಗೆ ಈಗಲೇ ಬಿಟ...
ಕೊಡಲೇಬೇಕೆಂದು ಸದಾನಂದಗೌಡರಿಗೆ ಗಂಟ...
ಬಿದ್ದ, ಇಲ್ಲವಾದರೆ ತೆಕ್ಕೆಗೂ ಮೀರಿದಷ್ಟು ಶಾಸ...
ಬೆಂಬಲಿಗರೊಂದಿಗೆ ಬಿಜೆಪಿ ಬಿಡುವ ಧಮ...
ಹಾಕುತ್ತಿದ್ದ ಮಾಜಿ. ಸಿ.ಎಂ...
ಯಡಿಯೂರಪ್ಪ ಅಂಡ...
ಕಂಪನಿಯನ್ನೂ ಉದ್ದೇಶಿಸಿಯೇ...

ಓಹ್ ಹೈಕಮಾಂಡ್‌ಗೆ ಎ...
ಧೈರ್ಯ, ಏನ್ ಖಡಕ್ ಅಂ...
ಭಾವಿಸುವ ಪ್ರಮೇಯವೇ ಇ...
ಯಡಿಯೂರಪ್ಪ ಮತ್ತು ಅವ...
ಸಂಪುಟ ನಡೆಸಿದ ಎಲ್ಲಾ ಭ್ರ...
ಹಗರಣ ಅಕ್ರಮಗಳ ಫಲಾನುಭವಿಗಳಾಗಿರು...
ಬಿಜೆಪಿ ಹೈಕಮಾಂಡ್ 'ಮಾಜಿ ಸಿ.ಎಂ.' ಮೇ...
ಗಧಾ ಪ್ರಹಾರ ಮಾಡಿ, ಸರಿದಾರಿಗೆ ತರುತ್ತ...
ಎನ್ನುವುದನ್ನೂ ನಂಬಲಾದರೂ ಹೇಗೆ ಸಾಧ್ಯ...
ಸ್ವತಃ. ಅದರ ಹೈಕಮಾಂಡ್ ಒಡೆದ...
ದುರ್ಬಲವಾಗಿ ಹೋಗಿರುವಾಗ ?!.

ಒಳಗಿದ್ದೆ ಸಾಧಿಸುವ ತಂತ್ರ

ಗಡ್ಕರಿಯವರ ಇಂತಹ ಹೇಳಿಕೆಯಿಂ...
ಸಹಜವಾಗಿ ಕುದಿಯುತ್ತಿದ್ದ ಈ ಬಣ, ತಕ್ಷಣ...
ಪಕ್ಷ ಬಿಡುವ, ಪರ್ಯಾಯ ಸರಕಾರ ಮಾಡು...
ಇಲ್ಲವೇ ಸರ್ಕಾರ ಬೀಳಿಸಿ ಚುನಾವಣ...
ಹೋಗುವ ತೀರ್ಮಾನಕ್ಕೆ ಬರಲಿಲ್ಲ ಎಂಬು...
ಇಂದಿನ ವಿಶೇಷ. ಚುನಾವಣೆಗೆ ಹೋಗ...
ಬಹಳಷ್ಟು ಬೆಂಬಲಿಗರು ಸಿದ್ಧರಿಲ್ಲ. (ಕೊ...
ಸೆಕೆಂಡ್‌ನಲ್ಲೂ ಅಧಿಕಾರ ಅನುಭವಿಸುವ ಆ...
ಇದನ್ನೂ ಒಳಗೊಂಡು ನಿಧಾನ...
ಯಡಿಯೂರಪ್ಪನವರ ಬೆಂಬಲಿಗರ ಸಂಖ್ಯೆ...

ಪುಟ 4 ಕ್ಕೆ...



ಅಂತರ್ರಾಷ್ಟ್ರೀಯ ಮಹಿಳಾ ದಿನಾಚರಣೆ...

ಪುಟ 16 ರಿಂದ

ವರ್ಷ ತನಿಖೆಗೆ ಕೈಗೆತ್ತಿಕೊಳ್ಳಲಾಗುತ್ತದೆ. ವಿಚಾರಣೆಗೊಳಪಡಿಸಿದ ಪ್ರತಿ ಇಬ್ಬರಲ್ಲಿ ಒಬ್ಬರನ್ನು ಶಿಕ್ಷಿಸಿದರೂ, ಲೈಂಗಿಕ ಕಿರುಕುಳ ಪ್ರಕರಣದಲ್ಲಿ ಅತಿ ಹೆಚ್ಚು ಜನರಿಗೆ ಶಿಕ್ಷೆ ವಿಧಿಸಬೇಕಾಗುತ್ತದೆ. ಆದರೆ ವಾಸ್ತವ ಸ್ಥಿತಿ ಹಾಗಿಲ್ಲ. ಆದರೆ ಮಹಿಳೆಯರ ವಿರುದ್ಧದ ಎಲ್ಲಾ ಅಪರಾಧಗಳ ಪೈಕಿ ಲೈಂಗಿಕ ಕಿರುಕುಳ ಅತಿ ಸಾಧಾರಣ ಅಪರಾಧವಾಗಿದ್ದು ಗರಿಷ್ಠ ಶಿಕ್ಷೆ ಒಂದು ವರ್ಷದ ಜೈಲು ವಾಸ ಅಥವಾ ದಂಡ ಅಥವಾ ಅವರೆಡೂ ಆಗಿರುತ್ತದೆ. ಮಹಿಳೆಯರ ವಿರುದ್ಧದ ಇತರ ಅಪರಾಧ ಪ್ರಕರಣಗಳಲ್ಲಿ ಕೂಡ ಶಿಕ್ಷೆ ನೀಡಿಧ ಪ್ರಮಾಣ ಐ.ಪಿ.ಸಿ.ಯನ್ವಯ ಶಿಕ್ಷಾರ್ಹ ಅಪರಾಧಗಳಲ್ಲಿ ಶಿಕ್ಷೆ ನೀಡಿದ್ದರಲ್ಲಿ ಶೇಕಡ 35.8 ಕ್ಕಿಂತಲೂ ಕಡಿಮೆಯಾಗಿದೆ.

ಪ್ರತಿ ಕ್ಷೇತ್ರದಲ್ಲಿ ಇಂದಿಗೂ ಮಹಿಳೆಯರ ವೇತನ ಕಡಿಮೆ, ಪಾರ್ಟ್ ಟೈಂ ಕೆಲಸ ಮಾಡಬೇಕಾಗುತ್ತದೆ ಮತ್ತು ಆಕೆಗೆ ಉನ್ನತ ಹುದ್ದೆಗಳು ಸಿಗುವುದು ಕಡಿಮೆ.

ಮಕ್ಕಳು, ಅಡಿಗೆ ಮನೆ, ಧರ್ಮ ಬಹಳಷ್ಟು ಮಹಿಳೆಯರಿಗೆ ಅಡಗೂಲಜ್ಜಿಯ ಈ ಸೂತ್ರಗಳೇ ಇಂದಿಗೂ ಕೌಟುಂಬಿಕ ಸೂತ್ರವಾಗಿದೆ. ಇಂದು ನಾವು ದೇಶದ ಉನ್ನತ ಸ್ಥಾನಗಳಲ್ಲಿ ಕಾಣುತ್ತಿರುವ ಬಹುತೇಕ ಮಹಿಳೆಯರು ಶ್ರೀಮಂತ ಕುಟುಂಬಗಳಿಂದ ಬಂದವರು. ಅವರು ಭಾರತ ಮತ್ತು ವಿದೇಶಗಳ ಅತ್ಯುತ್ತಮ ಶಿಕ್ಷಣ ಸಂಸ್ಥೆಗಳಲ್ಲಿ ಕಲಿತವರು. ಇವರು ದೇಶದ ಅತ್ಯಂತ ಸಣ್ಣ ಸಣ್ಣ ವಿಭಾಗದವರು ಎನ್ನುವುದನ್ನು ಗಮನಿಸಬೇಕು. ಇವರಿಗೆ ಮಾತ್ರ ಜೀವನ ಅತಿ ಸುಂದರವಾದುದು.

ಆದರೆ ಬಹುಸಂಖ್ಯಾತ ಮಹಿಳೆಯರಿಗೆ ಜೀವನ ನರಕಸದೃಶವಾದುದು. ತಾರತಮ್ಯ, ದಬ್ಬಾಳಿಕೆ, ದೌರ್ಜನ್ಯ, ಹಿಂಸೆ ಅನುಭವಿಸುವುದು ಅವರ ನಿತ್ಯದ ಅನುಭವವಾಗಿದೆ.

2001 ರ ಜನಗಣತಿ ಪ್ರಕಾರ ದೇಶದಲ್ಲಿ ಕೆಲಸಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಪ್ರಮಾಣ ಶೇಕಡ 25.7. ಕೇಂದ್ರ ಸರಕಾರಿ ನೌಕರರಲ್ಲಿ ಮಹಿಳೆಯರ ಪ್ರಮಾಣ ಕೇವಲ ಶೇಕಡ 7.53. ಹಳ್ಳಿಗಾಡಿನಲ್ಲಿ ಮಹಿಳಾ ಕಾರ್ಮಿಕರು ಗಳಿಸುವ ವೇತನ ಪುರುಷಕಾರ್ಮಿಕರ ಕೂಲಿಗಿಂತ 20.38 ರೂಪಾಯಿ ಕಡಿಮೆಯಿರುತ್ತದೆ. ನಗರ ಪ್ರದೇಶಗಳಲ್ಲಿ ಈ ವ್ಯತ್ಯಾಸ ರೂ.31.23 (2004 ರಿಂದ 2005). ವಾಸ್ತವವಾಗಿ ಇದು 1999, 2000 ರಲ್ಲಿ ಆರಂಭದಲ್ಲಿ ಮಾಡಿದ ಲೆಕ್ಕಾಚಾರಕ್ಕಿಂತ ಇದು ಹೆಚ್ಚಾಗಿದೆ.

ಸಂಸತ್ತಿನಲ್ಲಿ ಮಹಿಳೆಯರ್ಥ ಪ್ರಾತಿನಿಧ್ಯದ ವಿಚಾರದಲ್ಲಿ ಭಾರತ 140 ದೇಶಗಳಲ್ಲಿ 99ನೇ ಸ್ಥಾನದಲ್ಲಿದೆ. ಲೋಕಸಭೆಯಲ್ಲಿ ಕೇವಲ ಶೇ.10.8 ರಾಜ್ಯಸಭೆಯಲ್ಲಿ ಶೇ.9. ಇದು ದೇಶದಲ್ಲಿ ಮಹಿಳೆಯರ ನಿಜ 'ಅಸ್ತಿತ್ವ'ವಾಗಿದೆ. ಈ ಅತಿಸಣ್ಣ ವಿಭಾಗವನ್ನು ಕೂಡ ಅವರ ಲಿಂಗದ ಆಧಾರದಲ್ಲಿ ಗುರುತಿಸಲಾಗುತ್ತದೆಯೇ ಹೊರತು ಅವರ ಸಾಮರ್ಥ್ಯದ ಆಧಾರದ ಮೇಲಲ್ಲ. ಭಾರತೀಯ ಇತಿಹಾಸದ 'ಬಲಿಷ್ಠ ಮಹಿಳೆ' ಪದೇ ಪದೇ "ನಾನು ಮಹಿಳಾ ಪ್ರಧಾನಿಯಲ್ಲ, ಪ್ರಧಾನಮಂತ್ರಿ ಅಷ್ಟೆ" ಎಂದು ಹೇಳಬೇಕಾದ ಸನ್ನಿವೇಶ ನಿರ್ಮಾಣವಾಗಿತ್ತು. ಏಷ್ಯಾ ಖಂಡದಲ್ಲಿ ಮುಸ್ಲಿಂ ಪ್ರಧಾನ ದೇಶಗಳಾದ ಬಾಂಗ್ಲಾದೇಶ, ಪಾಕಿಸ್ತಾನ, ಇಂಡೋನೇಷ್ಯಾ ಮತ್ತು ಮಲೇಶ್ಯಾದಲ್ಲಿ ಕೂಡ ಮಹಿಳೆಯರ ಸರಕಾರದ ಮುಖ್ಯಸ್ಥರಾಗಿದ್ದರೂ ಮಹಿಳೆಯರ ಸ್ಥಾನಮಾನಗಳಲ್ಲಿ ಹೆಚ್ಚಿನ ಬದಲಾವಣೆ ಆಗಿಲ್ಲ ಎನ್ನುವುದನ್ನು ಗಮನಿಸಬೇಕು.

ಮಹಿಳೆಯರ ಪ್ರಗತಿಯಾಗಿದೆ ಎಂದು ಹೇಳುವುದು ಬರೀ ಘೋಷಣೆಯಾಗುತ್ತದೆ ಎನ್ನುವುದು ಇದರಿಂದ ತಿಳಿಯುತ್ತದೆ. ವಾಸ್ತವವಾಗಿ ಇದು ಲಿಂಗತಾರತಮ್ಯದ ಪಿಡುಗಾಗಿದೆ. ದಬ್ಬಾಳಿಕೆ ಎಲ್ಲಿದೆ ಎಂದು ಕೇಳಲಾಗುತ್ತದೆ. ದೂರುಗಳನ್ನು ಹೇಳಿಕೊಳ್ಳಲು ಮಹಿಳೆಯರಿಗೆ ಉತ್ತಮ ಅವಕಾಶಗಳಿವೆ ಎಂದು ಹೇಳಲಾಗುತ್ತದೆ. ಕೆಲವರುಇದನ್ನೇ "ಜಾಗೃತ ಲಿಂಗ ಸಮಾನತೆ" (enlightened sexism) ಎಂದೂ ಬಣ್ಣಿಸುತ್ತಾರೆ. ರಾಜಕೀಯ ಮತ್ತು ಪಾಪ್ ಸಂಸ್ಕೃತಿಯ ನಡುವೆ ಎಲ್ಲವೂ ಚೆನ್ನಾಗಿದೆ ಎಂದೂ ಮಹಿಳೆಯರಿಗೆ ಹೇಳಲಾಗುತ್ತದೆ. ನಮ್ಮಲ್ಲಿ ಬಹಳಷ್ಟು ಮಂದಿ ಅದನ್ನೇ ನಂಬುತ್ತೇವೆ ಕೂಡ. ಮಹಿಳೆಯರ ವಿರುದ್ಧದ ದ್ವೇಷ, ಅಪರಾಧಗಳು ಒಂದು ಭ್ರಮೆಯಷ್ಟೆ, ನಿರ್ದಾಕ್ಷಿಣ್ಯವಾಗಿ ಎದುರಿಸುವ ಮೂಲಕ ಅದನ್ನು ನಿಭಾಯಿಸಬಹುದು ಎಂಬ ರೀತಿಯಲ್ಲಿ ನಾವು ವರ್ತಿಸುತ್ತಿದ್ದೇವೆ. ಇದು ಹೇಗಿದೆಯೆಂದರೆ ಮಹಿಳಾ ದ್ವೇಷ ಎನ್ನುವುದು ಒಂದು ವ್ಯವಸ್ಥಿತ ದಬ್ಬಾಳಿಕೆ ಎನ್ನುವುದಕ್ಕಿಂತ ತಂಟೆಕೋರ ಮಕ್ಕಳಿದ್ದಂತೆ ಎಂದು ಪರಿಭಾವಿಸಲಾಗುತ್ತಿದೆ.

ಡಜನ್‌ಗಟ್ಟಲೆ ಕಾನೂನುಗಳು

ಹೌದು. ಇಂದಿನ ಮಹಿಳೆಯರ ಸ್ಥಿತಿ ನಮ್ಮ ಮುತ್ತಜ್ಜಿಯರ ಸ್ಥಿತಿಗಿಂತ ಉತ್ತಮವಾಗಿದೆ. ಆದರೆ ಮಹಿಳೆಯರ ಮುನ್ನಡೆಯಲ್ಲಿ ಮೈಲಿಗಲ್ಲುಗಳು ಎಂದು ಆಗಿಂದಾಗ್ಗೆ ಪ್ರಸ್ತಾವಿಸಲಾಗುವ ಮತದಾನದ ಹಕ್ಕು, ಮನೆಯಾಚೆ ಹೋಗಿ ಕೆಲಸ ಮಾಡುವುದು, ಕೌಟುಂಬಿಕ ದೌರ್ಜನ್ಯವನ್ನು ಕಾನೂನು ಬಾಹಿರಗೊಳಿಸಿರುವುದು, ಲಿಂಗ ಸಮಾನತೆ ಸಾರುವ ಕಾನೂನುಗಳ ರಚನೆಯಾಗಿರುವುದು ಮೊದಲಾದವುಗಳಷ್ಟರಿಂದಲೇ ಮಹಿಳೆಯರ ಜೀವನದ ವಾಸ್ತವತೆಯನ್ನು ಬದಲಾಯಿಸುವುದಿಲ್ಲ.

ಮಹಿಳೆಯರ ಆಸ್ತಿ ಹಕ್ಕು ರಕ್ಷಣೆಗೆ ಸಂಬಂಧಿಸಿ ನಾಲ್ಕು ಕಾನೂನುಗಳಿವೆ. ದುಡಿಯುವ ಮಹಿಳೆಯರ ರಕ್ಷಣೆಗಾಗಿ 15 ಕಾನೂನುಗಳಿವೆ. ಮದುವೆಯಲ್ಲಿನ ಅನ್ಯಾಯ ತಡೆಯಲು ಹಾಗೂ ವರದಕ್ಷಿಣೆ ಸಂಬಂಧಿತ ಹಿಂಸೆ, ಕಿರುಕುಳ ತಡೆಯಲು ಎಂಟು ಕಾನೂನುಗಳಿವೆ. ಮಹಿಳೆಯರ ವಿರುದ್ಧದ ಅಪರಾಧಗಳು ಹಾಗೂ ಅವರ ಮೇಲಿನ ದಾಳಿಗಳನ್ನು ತಡೆಯಲು ಸಂಬಂಧಿಸಿ 14 ಕಾನೂನುಗಳಿವೆ. ಅಬ್ಬಬ್ಬಾ! ಎಷ್ಟೊಂದು ಕಾನೂನುಗಳು. ಇವೆಲ್ಲವನ್ನು ನೋಡಿದರೆ, ಸಂವಿಧಾನದ ಮುನ್ನುಡಿಯಲ್ಲಿ ಹೇಳಿರುವಂತೆ ಭಾರತ ಎಂದಿಗೋ 'ಸಮಾಜವಾದಿ' ದೇಶ ಆಗಿರಬೇಕಿತ್ತು. ಈ ಕಾನೂನು ಕಟ್ಟಳೆಗಳು ಮಹಿಳೆಯರ ಮೇಲಿನ ಅತ್ಯಾಚಾರ, ದೌರ್ಜನ್ಯ ದಬ್ಬಾಳಿಕೆಗಳನ್ನು ನಿಲ್ಲಿಸಲಾರವು.

ಮಹಿಳೆಯರು ಹೆಚ್ಚೆಚ್ಚು ವಿಶ್ವಾಸಾರ್ಹರು- ಲಂಚಕೋರರಲ್ಲಿ ಪುರುಷರೇ ಅಧಿಕ

ರಾಜಕೀಯ ಮತ್ತು ಸಾರ್ವಜನಿಕ ಜೀವನದಲ್ಲಿ ಮಹಿಳೆಯರು ಹೆಚ್ಚಾಗಿ ಪಾಲ್ಗೊಳ್ಳುವುದರಿಂದ ಸಮಾಜಕ್ಕೇ ಲಾಭ ಎನ್ನುವುದನ್ನು ಹಲವು ಅಧ್ಯಯನಗಳು ತೋರಿಸಿಕೊಟ್ಟಿವೆ. ಆದರೂ ಆ ರೀತಿ ಮಾಡಲು ಬಿಡುತ್ತಿಲ್ಲ. ಜಾಗತಿಕ ಭ್ರಷ್ಟಾಚಾರದ ಬಗ್ಗೆ ನಿಗಾಯಿಟ್ಟಿರುವ ಬರ್ಲಿನ್ ಮೂಲದ ಟ್ರಾನ್ಸ್‌ಫರೆನ್ಸಿ ಇಂಟರ್ ನ್ಯಾಷನಲ್ ಎಂಬ ಸರಕಾರೇತರ ಸಂಸ್ಥೆ ರೂಪಿಸಿರುವ ಜಾಗತಿಕ ಭ್ರಷ್ಟಾಚಾರ ಮಾಪಕ ಹೇಳುವ ಪ್ರಕಾರ ಮಹಿಳೆಯರಿಗಿಂತ ಪುರುಷರೇ ಹೆಚ್ಚಾಗಿ ಲಂಚ ತೆಗೆದುಕೊಳ್ಳುತ್ತಾರೆ. ವಿಶ್ವಬ್ಯಾಂಕ್‌ನ 1999ರ ಅಧ್ಯಯನ ವರದಿಯೊಂದರ ಪ್ರಕಾರ ಮಹಿಳೆಯರು ಹೆಚ್ಚಾಗಿ ವಿಶ್ವಾಸಾರ್ಹರು ಹಾಗೂ ಸಾರ್ವಜನಿಕ ಹಿತದ ರಕ್ಷಣೆಯಲ್ಲಿ ಪುರುಷರಿಗಿಂತ ಹೆಚ್ಚು ಕಾಳಜಿ ಹೊಂದಿದವರಾಗಿರುತ್ತಾರೆ. ಯುರೋಪ್, ಆಫ್ರಿಕಾ ಮತ್ತು ಏಷ್ಯಾಗಳ 150 ದೇಶಗಳ ಸಂಸತ್ತಿನಲ್ಲಿ ಹೆಚ್ಚಿನ ಮಹಿಳಾ ಪ್ರಾತಿನಿಧ್ಯ ಇರುವಲ್ಲೆಲ್ಲ ಭ್ರಷ್ಟಾಚಾರದ ಪ್ರಮಾಣ ಕಡಿಮೆಯಾಗಿದೆ ಎಂದೂ ಈ ಅಧ್ಯಯನ ತಿಳಿಸಿದೆ. ಅದೇ ರೀತಿ ಕೆಲಸಗಳಲ್ಲಿ ಹಾಗೂ ನೀತಿ ನಿರ್ಧಾರಕ ಸಮಿತಿಗಳಲ್ಲಿ ಹೆಚ್ಚು ಹೆಚ್ಚಾಗಿ ಮಹಿಳೆಯರನ್ನು ತೊಡಗಿಸುವುದು ಯಾರಿಗೂ ಇಷ್ಟವಿಲ್ಲ. ಓಹ್ ಮಹಿಳೆಯರನ್ನು ನಾವು ಕೆಲಸದಲ್ಲಿ ತೊಡಗಿಸುತ್ತೇವೆ. ಯಾಕೆಂದರೆ ಅವರಿಗೆ ಕಡಿಮೆ ಕೂಲಿ ಕೊಡಲು ಹಾಗೂ ಅವರನ್ನು ಹೆಚ್ಚಾಗಿ ಸುಲಿಗೆ ಮಾಡಲು ಎಂಬುದನ್ನೇ ಮರೆತಿದ್ದೆ. ಮಾಡಬೇಕಾದ ಕೆಲಸ ಬಹಳಷ್ಟಿದೆ. ಲಿಂಗ ನ್ಯಾಯದತ್ತ ಕಾಣಲು ನಮ್ಮ ಬಹುತೇಕ ಮಹಿಳೆಯರಿಗೆ ಅವಕಾಶವಿಲ್ಲ. ಅದಲ್ಲದೆ ಪ್ರತಿದಿನ ಬದುಕು ಸಾಗಿಸುವುದು ಅವರಿಗೆ ಅನಿವಾರ್ಯವಾಗಿದೆ. ಲಿಂಗ ತಾರತಮ್ಯ, ಜನಾಂಗವಾದ, ಬಡತನ ಮತ್ತು ಸಲಿಂಗಕಾಮಿಗಳ ದ್ವೇಷ ಮುಂತಾದ ಪಿಡುಗುಗಳ ಬಗ್ಗೆ ಚಿಂತಿಸಬೇಕಿಲ್ಲದ, ಒಳ್ಳೆಯ ಜೀವನ ಸಾಗಿಸುವ ಅವಕಾಶ ಉಳ್ಳಂತಹ ನಮ್ಮಂಥವರು ನಮ್ಮೆದುರಲ್ಲೇ ಸ್ತ್ರೀ ದ್ವೇಷದ ಕೃತ್ಯಗಳು ನಡೆಯುತ್ತಿರುವ ಬಗ್ಗೆ ಕಣ್ತೆರೆಯುವ ಹೊಣೆಗಾರಿಕೆ ಹೊಂದಿದ್ದೇವೆ. ಅದಾದ ಮೇಲೆ ಅದನ್ನು ತಡೆಯುವುದೂ ನಮ್ಮ ಕರ್ತವ್ಯ.

ಮಹಿಳಾ ದಿನಾಚರಣೆ ಕ್ಯಾಲೆಂಡರ್ ಮೇಲಿನ ಒಂದು ದಿನದಲ್ಲಿ ಅಥವಾ ಶುಭಾಶಯಗಳನ್ನು ಮತ್ತು ಉಡುಗೊರೆಗಳನ್ನು ವಿನಿಮಯ ಮಾಡಿಕೊಳ್ಳುವ ವಿಶೇಷ ದಿನವಲ್ಲ. ನಮ್ಮ ಸಂಕಲ್ಪವನ್ನು ಇನ್ನಷ್ಟು ಗಟ್ಟಿಗೊಳಿಸಬೇಕಾದ ದಿನವದು. ಸಮಾನತೆಗಾಗಿ ಹೋರಾಟ ನಡೆಸುವುದೇ ಆ ಸಂಕಲ್ಪ. ನೂರು ವರ್ಷಗಳು ಕಳೆದುಹೋಗಿವೆ. ಆದರೆ ಹೋರಾಟ ಮುಂದುವರಿಯುತ್ತದೆ. ನಾವು ವಿರಮಿಸಬಾರದು.

(ಮಾರ್ಚ್ 8, 2010 ರ ಮಹಿಳಾ ದಿನಾಚರಣೆ ಸಂದರ್ಭಕ್ಕೆ ಸಿದ್ಧವಾದ ಲೇಖನ)

ಕನ್ನಡಕ್ಕೆ : ವಿಶ್ವ

ಕದನ ವಿರಾಮ .....

ಪುಟ 3ರಿಂದ......

ಕುಸಿಯುತ್ತಿರುವುದಕ್ಕೂ, ಹೈಕಮಾಂಡ್, "ಧ್ವನಿ ಬದಲಾಯಿಸಿರುವ ಹಿನ್ನೆಲೆಯಲ್ಲಿಯೂ ಕಾದು ನೋಡುವ, ಪಕ್ಷದೊಳಗಿದ್ದೇ ವಿರೋಧಿಗಳಿಗೆ ಗುದ್ದು ಹಾಕುವ ತಂತ್ರವನ್ನೂ ಅನುಸರಿಸುತ್ತಿದ್ದಾರೆ.

ಹೇಗಾದರೂ ಯಡಿಯೂರಪ್ಪನನ್ನು ಮೂಲೆಗುಂಪು ಮಾಡಿ, ಮೇಲುಗೈ ಸಾಧಿಸಬೇಕೆಂದು ಜಾತಿ, ಮಠ, ಹಣದೊಂದಿಗೆ ಸ್ಪರ್ಧೆಗಿಳಿದ ಅನಂತಕುಮಾರ್–ಈಶ್ವರಪ್ಪನವರ ಗುಂಪಿಗೆ ಯಡಿಯೂರಪ್ಪ ಪಕ್ಷದೊಳಗೇ ಉಳಿಯುವುದು ಒಂದು ರೀತಿಯಲ್ಲಿ ನಿರಾಶೆ ತಂದಂತೆಯೇ. ಈ ಪ್ರಯತ್ನ ಎಷ್ಟು ತೀವ್ರವಾಗಿತ್ತೆಂದರೆ ಯಡಿಯೂರಪ್ಪ ಬಣ ಹೊರ ಹೋದರೆ ಜೆಡಿ ಎಸ್ ನ ಬೆಂಬಲ ಪಡೆಯುವ ಲಾಬಿ ಕೆಲಸವೂ ಆರಂಭಗೊಂಡ ವರದಿಗಳಿವೆ. ಯಡಿಯೂರಪ್ಪ ಬಣ ಹೊರ ಹೋಗದೆ ಇರುವುದು ಅವರಲ್ಲಿ ನಿರಾಶೆ ಮೂಡಿಸಿದೆ. ಇಲ್ಲವಾದಲ್ಲಿ ಗಡ್ಕರಿ 'ಘರ್ಜನೆ' ಬಳಿಕ ನಾವೇ ಗೆದ್ದು ಬಿಟ್ಟೆವೆಂದು ಬೀಗಿದ ಆ ಗುಂಪು ಮರುಕ್ಷಣವೇ ಚಿಂತಾಕ್ರಾಂತರಾಗಿರುವುದು ಮತ್ತು ಬೇರೊಂದು ಕತ್ತಿ ಮಸೆಯುತ್ತಿರುವುದು ಅಗತ್ಯವಿರಲಿಲ್ಲ. ಅಂದರೆ 'ಚಿಂತನ ಮಂಥನ'ವಾಗಲೀ, ಪಕ್ಷ ಕಟ್ಟುವ, ಜನರ ನಡುವೆ ಹೋಗುವ, ಒಗ್ಗಟ್ಟಿನ ಮಾತುಗಳ್ಯಾವುವೂ ಬಿಜೆಪಿಯೊಳಗಿನ ಭಿನ್ನಮತ, ಕಿತ್ತಾಟ, ಬೀದಿ ಬಡಿದಾಟಗಳಿಗೆ ಪೂರ್ಣ ವಿರಾಮ ಹಾಕುವುದೇ ಇಲ್ಲ, ಬದಲಾಗಿ ಇನ್ನಷ್ಟು ಜಿದ್ದಾಜಿದ್ದು ಹಣಾಹಣಿ ಹೆಚ್ಚಲಿದೆ.

ಜಾತಿ ರಾಜಕಾರಣದ ಕ್ರೋಡೀಕರಣ

'ಬಿಜೆಪಿ ಯಾವುದೇ ಜಾತಿಯನ್ನೂ ನೆಚ್ಚಿಕೊಂಡ ಪಕ್ಷವಲ್ಲ' ಎಂಬಂತಹ (ಖೋಟಾ) ಮಾತುಗಳನ್ನೂ ಗಡ್ಕರಿ ಆಡಿದ್ದು ಯಡಿಯೂರಪ್ಪನವರ, ಲಿಂಗಾಯತ ಜಾತಿ ರಾಜಕಾರಣದ ಬ್ಲಾಕ್ ಮೇಲ್ ಕುರಿತೇ ಆಗಿತ್ತು. ಯಡಿಯೂರಪ್ಪ ಅಧಿಕಾರದಲ್ಲಿರುವಾಗ ಎಲ್ಲದರಲ್ಲೂ ಪಾಲು ಪಡೆದು ಅನುಭವಿಸಿದ್ದ ಮೇಲಿನಿಂದ – ಕೆಳಗಿನವರೆಗಿನ ನಾಯಕರಿದ್ದರೂ ಬಲಿಯಾದದ್ದು ತಾನು ಮಾತ್ರ ಎಂಬುದು ಅವರಲ್ಲಿ ಸೇಡನ್ನು ಹೆಚ್ಚಿಸಿದೆ.

ಇದರ ಬಳಿಕ ಮಾಜಿ ಸಿ.ಎಂ.(ಫ್ಲೆಕ್ಸ್‌ಗಳಲ್ಲಿ ನಿಕಟ ಪೂರ್ವವೆಂದು ಹಾಕಿಸಿದ್ದರು) ಹುಟ್ಟುಹಬ್ಬದಂದು 30ಕ್ಕೂ ಹೆಚ್ಚಿನ ಲಿಂಗಾಯತ ಮಠಾಧೀಶರು ಬಂದು ಅಭಿನಂದಿಸಿ, ಸಿ.ಎಂ. ಆಗಲು ಬೆಂಬಲ ಘೋಷಿಸಿದ್ದು ಇನ್ನೊಂದು ಗುಂಪಿಗೆ ಸೆಡ್ಡು ಹೊಡೆದಂತಿತ್ತು. ಇನ್ನೊಂದು ಬಣವೂ ಜಾತಿ ಕ್ರೋಡೀಕರಣಕ್ಕೆ ಸಹ ತೊಡಗಿದೆ. ಅಂದರೆ ಮುಂದೆ ಜಾತಿ ರಾಜಕಾರಣ ಇನ್ನಷ್ಟು ಹೆಪ್ಪುಗಟ್ಟಿ ವಿಸ್ತಾರಗೊಳ್ಳುವ ಸಂಭವಗಳೇ ಹೆಚ್ಚು.

ರಾಜ್ಯದಲ್ಲಿ ಬರದ ತೀವ್ರತೆ ಹೆಚ್ಚುತ್ತಲಿದೆ. ಸಮಸ್ಯೆಗಳು ನೂರಾರು. ಇವರತ್ತ ಕಿಂಚಿತ್ತೂ ಗಮನ ನೀಡಲು ಸರಕಾರಕ್ಕೆ ಸಚಿವರಿಗೆ ಬಿಡುವೇ ಇಲ್ಲ. ನಾಯಕರಿಗೋ ಅಧಿಕಾರಕ್ಕಾಗಿ ಹಪಾಹಪಿ ಹೀಗಿದೆ ಭಿನ್ನ ಪಕ್ಷದ ವಿಭಿನ್ನ ಆಡಳಿತ.

ಬಿಜೆಪಿಯ 'ಚಿಂತನ-ಮಂಥನ'ವೆಂಬ ಪ್ರಹಸನವೂ ನಾಚಿಕೆಗೆಟ್ಟ ಜಾತಿವಾದಿ-ಕೋಮುವಾದಿ ರಾಜಕಾರಣವೂ

> ಅಲ್ಲಿ ಚಿಂತನೆಯೂ ಇರಲಿಲ್ಲ. ನೀತಿ ಬೋಧನೆಯೂ ಇರಲಿಲ್ಲ. ಆಡಳಿತ, ಜನರ ಸಮಸ್ಯೆಗಳ ನೆನಪು ಯಾರಿಗೂ ಇರಲಿಲ್ಲ. ಎಲ್ಲಾ ಲೊಳಲೊಟ್ಟೆ. ಗುಂಪುಗಾರಿಕೆ, ಕುರ್ಚಿ ಕಿತ್ತಾಟ, ಬೆದರಿಕೆ, ಜಾತೀಯತೆಯನ್ನು 'ನಗದು' ಮಾಡಿಕೊಳ್ಳುವ ತಂತ್ರ, ಕುತಂತ್ರಗಳಷ್ಟೆ ಅಲ್ಲಿ ಮೆರೆದಿದ್ದು.

ಜಿ.ವಿ.ಶ್ರೀರಾಮರೆಡ್ಡಿ

ಕರ್ನಾಟಕ ವಿಧಾನಸಭೆಯಲ್ಲಿ ಇಡೀ ದೇಶದ ಮುಂದೆ ತಲೆತಗ್ಗಿಸುವ ಅಶ್ಲೀಲ ವಿಡಿಯೋ ದೃಶ್ಯಗಳನ್ನು ನೋಡುತ್ತಿದ್ದ 3 ಜನ ಮಂತ್ರಿಗಳ ರಾಜೀನಾಮೆಯಿಂದ ಉಂಟಾದ ಮುಜುಗರ ಮತ್ತು ಅವಮಾನದಿಂದ ಪಾರಾಗಲು ಬಿಜೆಪಿಯ ರಾಷ್ಟ್ರೀಯ ನಾಯಕತ್ವವು ಕರ್ನಾಟಕದ ಪಕ್ಷದ ಮುಖಂಡರಿಗೆ ನೀತಿ ಪಾಠಗಳನ್ನು ಹೇಳಬೇಕೆಂದು ತೀರ್ಮಾನಿಸಿ 'ಚಿಂತನ-ಮಂಥನ'ದ ಕಾರ್ಯಕ್ರಮದ ಹೆಸರಿನಲ್ಲಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಿತಿನ್ ಗಡ್ಕರಿಯವರು ಬೆಂಗಳೂರಿಗೆ ಬಂದು ನಗರದ ಹೊರವಲಯದ ಒಂದು ರೆಸಾರ್ಟ್‌ನಲ್ಲಿ ಎಲ್ಲರನ್ನು ಸೇರಿಸಿದ್ದರು. ಅವರು ಅಲ್ಲಿ ಮಾಡಿದ್ದೇನೆಂದರೆ? ಮಾಜಿ ಮುಖ್ಯ ಮಂತ್ರಿ ಯಡಿಯೂರಪ್ಪನ ಗುಂಪಿಗೆ ಬೆದರಿಕೆ ಹಾಕಿದ್ದು.

ಭುಗಿಲೆದ್ದ ಕಚ್ಚಾಟ

ಬಿಜೆಪಿ ಪಕ್ಷದ ಆಂತರಿಕ ಕಚ್ಚಾಟ, ಕುರ್ಚಿಗಾಗಿ ಕಾದಾಟ, ಯಡಿಯೂರಪ್ಪನವರ ಅಧಿಕಾರದ ಹಪಾಹಪಿ ಯಾವ ಹಂತ ತಲುಪಿದೆ ಎಂದರೆ ಕರ್ನಾಟಕದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಮೊಟ್ಟ ಮೊದಲ ಬಾರಿಗೆ "ನಾಳೆ ಪಕ್ಷ ಬಿಟ್ಟು ಹೋಗುವರು ಇಂದೇ ಹೊಗಲಿ" ಎಂದೂ ಮತ್ತು "ಬಿಜೆಪಿ ಪಕ್ಷ ಯಾವುದೇ ಒಂದು ಜಾತಿಯ ಬಲದ ಮೇಲೆ ಅವಲಂಬಿಸಿಲ್ಲ" ಎಂದೂ ಘೋಷಣೆಯನ್ನು ಮಾಡಬೇಕಾಗಿ ಬಂದಿದ್ದು.

'ಜಾತಿಯ ಬಲ ಅವಲಂಬಿಸಿಲ್ಲ !! ??'

ಈ ಸಂದರ್ಭದಲ್ಲಿ 'ಯಾವುದೇ ಜಾತಿಯ ಬಲದ ಮೇಲೆ ನಮ್ಮ ಪಕ್ಷ ಅವಲಂಬಿಸಿಲ್ಲ' ಎಂದು ಬಿಜೆಪಿ ಮುಖಂಡ ನಿತಿನ್ ಗಡ್ಕರಿ ಹೇಳಿದ್ದು ಮಾತ್ರ ನಗೆ ಪಾಟಲಿಗೆ ಈಡಾಗಿದೆ. ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರಲು ಕಾರಣವಾದ ಅಂಶಗಳಲ್ಲಿ ಮುಖ್ಯವಾದ ಒಂದು ಅಂಶ ಎಂದರೆ ರಾಜ್ಯದ ಒಂದು ಬಲಾಢ್ಯ ಜಾತಿಯ ಮುಖಂಡನಿಗೆ ಮುಖ್ಯಮಂತ್ರಿ ಸ್ಥಾನವನ್ನು ಬೇಕೆಂದೇ ತಪ್ಪಿಸಲಾಯಿತು... ಆ ಜಾತಿಗೆ ಅನ್ಯಾಯವಾಯಿತು.... ಎಂಬ ಹುಸಿ ಜಾತಿವಾದಿ ಹುಯಿಲಿನಿಂದ ಪಡೆದುಕೊಂಡ ಲಾಭ ಎಂಬುದು ಮತ್ತು ಹೀಗೆ ಇಲ್ಲಿ ಬಳಸಕೊಳ್ಳಲಾದ ಆ ಜಾತಿ ಯಾವುದು ಎಂಬುದು ರಾಜ್ಯದ ಪ್ರೌಢ'ಶಾಲಾ ವಿದ್ಯಾರ್ಥಿಗಳಿಗೂ ಗೊತ್ತಿರುವ ಸಂಗತಿ. ಜಾತಿವಾದಿ ಪಟ್ಟಭದ್ರರು, ತಮ್ಮ ಜಾತಿ ಜನರ ಹಿತ ರಕ್ಷಣೆಯ ಮುಸುಕು ಹಾಕಿಕೊಂಡು ಎಂತೆಂತಹುದೋ ನೀಚ ಭ್ರಷ್ಟಾಚಾರವನ್ನು, ಅದು ಎಷ್ಟೇ ಬೃಹತ್ ಪ್ರಮಾಣದಲ್ಲಿ ಮಾಡಿದ್ದರೂ ಅದನ್ನು ಸಮರ್ಥಿಸುತ್ತಿರುವುದು... ಹಾಗೂ ಈ ಜನ ಯಾವ ಜಾತಿಯ ಹೆಸರನ್ನು ಇದಕ್ಕಾಗಿ ಬಳಸುತ್ತಿದ್ದಾರೆ, ಎಂಬುದು ಶ್ರೀಮಾನ್ ಗಡ್ಕರಿಯವರಿಗೆ ಗೊತ್ತಿಲ್ಲವೇ ?

ಜಾತಿ-ಕೋಮುಗಳೇ ಆಧಾರ

ಇಡೀ ದೇಶದಲ್ಲಿ ಬಿಜೆಪಿಯ ರಾಜಕಾರಣ ಆಧಾರ ಬಿದ್ದಿರುವುದು ಪ್ರಧಾನವಾಗಿ ಜಾತಿ ಮತ್ತು ಧರ್ಮದ ದುರ್ಬಳಕೆಯ ಮೇಲೆ. ವಾಸ್ತವ ಹಾಗಿರುವಾಗ ಇಂತಹ ಬೂಟಾಟಿಕೆಯ ಸೋಗಲಾಡಿತನದ ಮಾತುಗಳು ನಗೆಪಾಟಲಿಗೆ ಈಡಾಗದೆ ಇನ್ನೇನಾಗಲು ಸಾಧ್ಯ?

ಇದು ಬಿಟ್ಟು ಸಭೆ ಸೇರಿದ ನಿಜ ಉದ್ದೇಶವಾದ 'ಚಿಂತನ-ಮಂಥನ'ದ ಕಾರ್ಯಕ್ರಮದ ಗತಿಯೇನಾಯಿತು? ಇಷ್ಟಕ್ಕೂ ಬಿಜೆಪಿ ಎಂಬ ಪಕ್ಷಕ್ಕೆ ಯಾವುದರ ಬಗ್ಗೆಯಾದರೂ 'ಜನಪರವಾದ ಚಿಂತನೆ' ಎಂಬುದು ಇದೆಯೇ? ಇವರ 'ಚಿಂತನೆ'ಯೆಲ್ಲಾ ಬ್ರಾಹ್ಮಣ್ಯದ ಅಧಿಪತ್ಯವನ್ನು ಸಮಾಜ ಮೇಲೆ ಹೇರುವ, ಮೇಲು-ಕೀಳು ಜಾತಿ ತಾರತಮ್ಯವನ್ನು ದೃಢಪಡಿಸುವ ಹಾಗೂ ಪುರುಷ ಪ್ರಧಾನ ಮೌಲ್ಯಗಳ ವಿಜೃಂಭಣೆಯ 'ಹಿಂದೂ ರಾಷ್ಟ್ರ'ದ ಕನಸು. 'ಹಿಂದುತ್ವ'ದ ಹೆಸರಿನಲ್ಲಿ ದೇಶವನ್ನು ಕೊಳ್ಳೆ ಹೊಡೆಯುವುದೇ ಇವರ 'ಚಿಂತನೆ' ಮತ್ತು ಹಿಂದುತ್ವದ ಹೆಸರಿನಲ್ಲಿ ದೇಶದ ಅಲ್ಪಸಂಖ್ಯಾತರ ವಿರುದ್ಧ ವಿಷಕಾರಿ ಕೋಮುದ್ವೇಷವನ್ನು ಹುಟ್ಟುಹಾಕಿ ಸಾವಿರಾರು ಜನ ಮುಗ್ಧ ಜೀವಿಗಳನ್ನು ಬಲಿ ತೆಗೆದುಕೊಂಡು ಧರ್ಮ-ದೇವರ ಹೆಸರಿನಲ್ಲಿ ರಾಜಕೀಯ ಅಧಿಕಾರವನ್ನು ಪಡೆಯಬೇಕೆಂಬುದೇ ಇವರ ಪರಮಗುರಿ.



ಹಾಗೂ ಆ ಗುರಿಯ ಈಡೇರಿಕೆಗೆ ಬೇಕಾದ ವಿಕೃತ ವಿಚಾರಗಳೇ ಇವರ 'ಚಿಂತನೆ'. ಈ ರಾಜಕೀಯ ಅಧಿಕಾರವನ್ನು ಪಡೆಯಲು ಮತ್ತು ಉಳಿಸಿಕೊಳ್ಳಲು ಯಾವ ಹಂತಕ್ಕಾದರೂ ಇಳಿಯುತ್ತಾರೆಂಬುದು ಕರ್ನಾಟಕದಲ್ಲಿ ಇವರು ಅಧಿಕಾರ ಪಡೆದ ರೀತಿ ಮತ್ತು ಅದನ್ನು ಉಳಿಸಿಕೊಳ್ಳಲು ಇವರು ಮಾಡುತ್ತಿರುವ 'ಚಿಂತನೆ'ಗಳು ಮತ್ತು 'ಪ್ರಯತ್ನ'ಗಳೇ ಸಾಕ್ಷಿ ಅಲ್ಲವೆ?.

ಬಿಜೆಪಿ ಸರ್ಕಾರ ಬಹುಮತ ಗಳಿಸಿದ ಕತೆ

ಸರ್ಕಾರವನ್ನು ರಚಿಸಲು ಬೇಕಾಗುವ ಬಹುಮತವಿಲ್ಲದ ಸಂದರ್ಭದಲ್ಲಿ ಇವರು ಬಹುಮತವನ್ನು ಹೇಗೆ ಪಡೆದರು ಎಂಬುದು ದೇಶದ ಜನಕ್ಕೆ ಗೊತ್ತಿಲ್ಲವೆ? ಸ್ವತಂತ್ರ ಭಾರತ ಇತಿಹಾಸದಲ್ಲಿ ಯಾವುದೇ ಒಂದು ಪಕ್ಷ ಮಾಡಲಾರದಂತಹ ಪ್ರಜಾಪ್ರಭುತ್ವ ವಿರೋಧಿ 'ಚಿಂತನೆ'ಯ ಮುಖಾಂತರವಲ್ಲವೇ ಇವರು ಅಧಿಕಾರವನ್ನು ಪಡೆದಿದ್ದು ಮತ್ತು ಅಧಿಕಾರವನ್ನು ಉಳಿಸಿಕೊಳ್ಳಲು ಇವರು ಮಾಡಿದ 'ಚಿಂತನೆ' ಏನು ? ಕುಖ್ಯಾತ ಉತ್ತರ ಪ್ರದೇಶದ ಪ್ರಕರಣಗಳನ್ನೂ ಮೀರಿಸುವಂತೆ, ಇಡೀ ದೇಶದ ಸಂಸದೀಯ ವ್ಯವಸ್ಥೆಯೇ ತಲೆ ತಗ್ಗಿಸುವಂತೆ ಸಭಾಧ್ಯಕ್ಷರ ಸ್ಥಾನವನ್ನು ದುರುಪಯೋಗ ಮಾಡಿಕೊಂಡು 16 ಜನ ಶಾಸಕರ ಸದಸ್ಯತ್ವವನ್ನು ರದ್ದು ಮಾಡಿ ಬಹುಮತ ಕಳೆದುಕೊಳ್ಳುತ್ತಿದ್ದ ಸರ್ಕಾರವನ್ನು ಉಳಿಸಿಕೊಂಡಿದ್ದು ಈ ದೇಶದಲ್ಲಿ ಯಾರಿಗೆ ಗೊತ್ತಿಲ್ಲ ? ಅಂತಹ ಸಂದರ್ಭದಲ್ಲಿ ಬಿಜೆಪಿ ಪಕ್ಷವಾಗಲಿ ಮತ್ತು ಅದರ ಅಧ್ಯಕ್ಷರಾದ ಶ್ರೀಮಾನ್ ಗಡ್ಕರಿಯವರಾಗಲೀ ಕರ್ನಾಟಕದ ಬಿಜೆಪಿ ನಾಯಕರಿಗೆ ನೀತಿ ಪಾಠ ಮತ್ತು ಬುದ್ಧಿ ಮಾತು ಹೇಳುವ 'ಚಿಂತನೆ'ಯನ್ನು ಯಾಕೆ ಮಾಡಲಿಲ್ಲ ?

ಭ್ರಷ್ಟತೆಯ ಕೂಪ

ಬ್ರಹ್ಮಾಂಡ ಭ್ರಷ್ಟಾಚಾರದ ಸುಳಿಯಲ್ಲಿ ಸಿಕ್ಕಿ ರಾಜ್ಯದ ಸಂಪತನ್ನು ಲೂಟಿ ಹೊಡೆದು ಕಡೆಗೆ ಲೋಕಾಯುಕ್ತ ವರದಿಯಲ್ಲಿ ಇವರ ಭ್ರಷ್ಟಾಚಾರದ ಕರಾಳ ಮುಖಗಳನ್ನು ಬಯಲಿಗೆಳೆದುದರ ಪರಿಣಾಮ ಮುಖ್ಯ ಮಂತ್ರಿಯು ಸೇರಿ ಇತರ ಮಂತ್ರಿಗಳು ಮತ್ತು ಶಾಸಕರು ಜೈಲು ಸೇರಿದಾಗ ತಾನು ಭಿನ್ನ ಪಕ್ಷ ಎಂದು ದೇಶದ ಜನತೆ ಮುಂದೆ ಬಡಾಯಿ ಕೊಚ್ಚಿದ ಇವರು ಕನಿಷ್ಠ ಜೈಲಿಗೆ ಹೋದವರ ಮೇಲೆ ಒಂದು ರಾಜಕೀಯ ಪಕ್ಷದ ಅಧ್ಯಕ್ಷರಾಗಿ



ಒಂದು ಸಣ್ಣ ಶಿಸ್ತಿನ ಕ್ರಮವನ್ನಾದರು ತೆಗೆದುಕೊಳ್ಳುವ ಒಂದು ಸಣ್ಣ 'ಚಿಂತನೆ'ಯನ್ನಾದರು ಯಾಕೆ ಮಾಡಲಿಲ್ಲಾ?

ಲೈಂಗಿಕ ದೌರ್ಜನ್ಯಗಾರರು, ಹಗರಣಕೋರರು

ಲೈಂಗಿಕ ಹಗರಣದಲ್ಲಿ ಸಿಕ್ಕಿ ಹಾಕಿಕೊಂಡ ಒಬ್ಬರು ಮಂತ್ರಿ ಪದವಿ ಕಳೆದುಕೊಂಡರು. ಅವರ ಮೇಲೆ ಒಂದೂ ಶಿಸ್ತಿನ ಕ್ರಮವಿಲ್ಲ. ಮತ್ತೊಂದು ಲೈಂಗಿಕ ಹಗರಣದಲ್ಲಿ ಸಿಲುಕಿದ್ದ ಇನ್ನೊಬ್ಬ ಶಾಸಕರನ್ನು ಮಂತ್ರಿ ಮಂಡಲಕ್ಕೆ ಸೇರಿಸಿಕೊಂಡು ಕ್ಯಾಬಿನೆಟ್ ಮಂತ್ರಿ ಮಾಡಿದರು. ಇನ್ನೊಬ್ಬ ಶಾಸಕನ ಮೇಲೆ ತನ್ನ ಹೆಂಡತಿಯನ್ನೇ ಕೊಲೆ ಮಾಡಿಸಿದ ಗಂಭೀರ ಆರೋಪ ಬಂದರೂ ಆತನನ್ನು ಬಂಧಿಸಿ ಜೈಲಿಗೆ ಕಳುಹಿಸಲಿಲ್ಲ. ಜೈಲಿಗೆ ಕಳಿಸುವುದು ಬಿಡಿ, ಪಕ್ಷದಿಂದ ಯಾವುದೇ ರೀತಿಯಾದ ಕ್ರಮ ತೆಗೆದುಕೊಳ್ಳಲಿಲ್ಲವೇಕೆ?

'ಬ್ಲೂ ಫಿಲಂ ನೋಡಿದರೆ ತಪ್ಪೇನು !?'

ಕಡೆಗೆ ಇಡೀ ದೇಶವೇ ತಲೆ ತಗ್ಗಿಸುವ ಹಾಗೆ ಶಾಸನ ಸಭೆಯ ಅಧಿವೇಶನ ನಡೆಯುತ್ತಿರುವಾಗಲೇ ಸದನದ ಒಳಗಡೆ ಅಶ್ಲೀಲ ವಿಡಿಯೋ ದೃಶ್ಯಗಳನ್ನು ಮೊಬೈಲ್‌ನಲ್ಲಿ ನೋಡುತ್ತಿದ್ದ 3 ಮಂತ್ರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿರಿ? ಕಡೆಗೆ ನಮ್ಮ ಪಕ್ಷದ ಬಾಯಿಬಡುಕ ರಾಜ್ಯಾಧ್ಯಕ್ಷ ಆ ಮಂತ್ರಿಗಳ ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳುವ ಪ್ರಶ್ನೆಯೇ ಇಲ್ಲ ಎಂದು ಖಡಾ ಖಂಡಿತವಾಗಿ ಹೇಳಿಬಿಟ್ಟರು. ಇನ್ನು ಮಾಜಿ ಮುಖ್ಯಮಂತ್ರಿ

ಪುಟ 14 ಕ್ಕೆ

ಅಖಿಲ ಭಾರತ ಮುಷ್ಕರಕ್ಕಾಗಿ ಅಭೂತಪೂರ್ವ ತಯಾರಿ



ಕೇಂದ್ರ ಮಾರುಕಟ್ಟೆ ಬಳಿ ಜಾಥಾದ ಉದ್ಘಾಟನೆಯನ್ನು ಹಿರಿಯ ಕಾರ್ಮಿಕ ಮುಖಂಡ ಸಿಐಟಿಯು ರಾಜ್ಯ ಉಪಾಧ್ಯಕ್ಷ ಬಿ.ಮಾಧವ ನೆರವೇರಿಸಿದರು.

ವಾಹನ ಪ್ರಚಾರ ರ್‍ಯಾಲಿಗೆ ಎಲ್ಲಾ ಊರುಗಳಲ್ಲಿಯೂ ಉತ್ತಮ ಪ್ರತಿಕ್ರಿಯೆ ದೊರೆಯಿತು. ಸಿಐಟಿಯು, ಬಿಎಂಎಸ್, ಎಐಟಿಯುಸಿ, ಎಚ್‌ಎಂಎಸ್ ಸಂಘಟನೆಗೆ ಸೇರಿದ ಕಾರ್ಯಕರ್ತರು ತಾವು ಹೆಚ್ಚು ಸಂಖ್ಯೆಯಲ್ಲಿರುವ ಪ್ರದೇಶದಲ್ಲಿ ಜಾಥಾ ಬಂದಾಗ ಆಗಮಿಸಿ ಬೆಂಬಲ ವ್ಯಕ್ತಪಡಿಸಿದರು. ಮಂಗಳೂರು ಕೇಂದ್ರ ಮಾರುಕಟ್ಟೆ, ಹಳೆಯ ಬಂದರು, ತೊಕ್ಕೊಟು, ದೇರ್ಲಕಟ್ಟೆ, ವಿಟ್ಲ, ಸುಳ್ಯ, ಪುತ್ತೂರು, ಬಿ.ಸಿ.ರೋಡ್. ಬಂಟ್ವಾಳ, ಉಜಿರೆ, ಬೆಳ್ತಂಗಡಿ, ವೇಣೂರು, ಮೂಡಬಿದ್ರೆ, ಮುಲ್ಕಿ, ಸುರತ್ಕಲ್, ಪಣಂಬೂರುಗಳಲ್ಲಿ ಜಾಥಾ ಸಂಚರಿಸಿ ಫೆಬ್ರವರಿ 24ರ ಸಾಯಂಕಾಲ ಮಂಗಳೂರು ನಗರದ ಕೂಳೂರಿನಲ್ಲಿ ಸಮಾಪನಗೊಂಡಿತು. ಕೆಲವು ಊರುಗಳಲ್ಲಿ ಕಾರ್ಮಿಕ ಕಾರ್ಯಕರ್ತರ ಮೆರವಣಿಗೆ ಯೊಂದಿಗೆ ಜಾಥಾವನ್ನು ಸ್ವಾಗತಿಸಲಾಯಿತು.

ಜಾಥಾ ತಂಡದಲ್ಲಿ ಸಿಐಟಿಯುನಿಂದ ಜೆ.ಬಾಲಕೃಷ್ಣ ಶೆಟ್ಟಿ, ವಸಂತ ಆಚಾರಿ, ಸುನಿಲ್ ಕುಮಾರ್ ಬಜಾಲ್, ಎಐಟಿಯುಸಿಯಿಂದ ಕರುಣಾಕರ್, ಬಿಎಂಎಸ್‌ನಿಂದ ವಿನೋದ್ ಮೊದಲಾದವರು ಜಾಥಾ ತಂಡದಲ್ಲಿ ಪೂರ್ಣ ಹಾಜರಿದ್ದು ಜಾಥಾವನ್ನು ನಡೆಸಿಕೊಟ್ಟರು.

ವಿದ್ಯಾರ್ಥಿ-ಯುವಜನರ ದೊಂದಿ ಮೆರವಣಿಗೆ

ಫೆಬ್ರವರಿ 28ರಂದು ಕೇಂದ್ರ ಕಾರ್ಮಿಕ ಸಂಘಟನೆಗಳು ನಡೆಸಲಿದ್ದ ಅಖಿಲ ಭಾರತ ಮುಷ್ಕರವನ್ನು ಬೆಂಬಲಿಸಿ ಡಿವೈಎಫ್‌ಐ ಮತ್ತು ಎಸ್‌ಎಫ್‌ಐನ ದ.ಕ.ಜಿಲ್ಲಾ ಸಮಿತಿಗಳು ಜಂಟಿಯಾಗಿ ಫೆಬ್ರವರಿ 25ರಂದು ಮುಸ್ಸಂಜೆಯಲ್ಲಿ ದೊಂದಿ(ಪಂಜು) ಮೆರವಣಿಗೆ ನಡೆಸಿದವು.

ಮಂಗಳೂರು ಜಿಲ್ಲಾಧಿಕಾರಿ ಕಚೇರಿ ಎದುರು ಪಂಜಿನ ಮೆರವಣಿಗೆಯನ್ನು ಉದ್ಘಾಟಿಸಿ ಡಿವೈಎಫ್‌ಐ ಜಿಲ್ಲಾ ಸಮಿತಿ ಅಧ್ಯಕ್ಷ ಮುನೀರ್ ಕಾಟಿಪಳ್ಳ ಮಾತನಾಡಿದರು.

ನಗರದ ರಾವ್ ಎಂಡ್ ರಾವ್ ಸರ್ಕಲ್, ಕ್ಲಾಕ್ ಟವರ್, ಎ.ಬಿ.ಶೆಟ್ಟಿ ಸರ್ಕಲ್ ಮೂಲಕ ಮೆರವಣಿಗೆ ಸಾಗಿ ಬಂತು. ಮೆರವಣಿಗೆಯಲ್ಲಿ ಡಿವೈಎಫ್‌ಐ ದ.ಕ.ಜಿಲ್ಲಾ ಕಾರ್ಯದರ್ಶಿ ದಯಾನಂದ ಶೆಟ್ಟಿ, ಡಿವೈಎಫ್‌ಐ ಮಂಗಳೂರು ನಗರ ಸಮಿತಿಯ ಬಿ.ಕೆ.ಇಮ್ತಿಯಾಜ್, ಸಂತೋಷ್ ಕುಮಾರ್ ಬಜಾಲ್, ಉಳ್ಳಾಲ ವಲಯ ಸಮಿತಿಯ ಅಶೋಕ್ ಶೆಟ್ಟಿ, ಮಹಾಬಲ ದಪ್ಪೆಲಿಮಾರ್, ರಫೀಕ್ ಹರೇಕಳ, ಇಬ್ರಾಹಿಂ ಮದಕ, ಎಸ್‌ಎಫ್‌ಐ ಜಿಲ್ಲಾ ಸಮಿತಿ ಮುಖಂಡರಾದ ನಿತಿನ್ ಕುತ್ತಾರ್, ಚರಣ್ ಶೆಟ್ಟಿ, ಹಂಝ ಕಿನ್ಯ ಮತ್ತಿತರರು ಭಾಗವಹಿಸಿದ್ದರು.

ಅಖಿಲ ಭಾರತ ಮುಷ್ಕರಕ್ಕೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಿದ್ಧತೆ

ಮುಷ್ಕರವನ್ನು ದ.ಕ.ಜಿಲ್ಲೆಯಲ್ಲಿ ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಮಂಗಳೂರಿನಲ್ಲಿ ಸಿಐಟಿಯು ದ.ಕ.ಜಿಲ್ಲಾ ಸಮಿತಿ ವಿಶೇಷ ಮುತುವರ್ಜಿ ವಹಿಸಿತು. ಫೆಬ್ರವರಿ 28 ರಂದು ಮಂಗಳೂರು ಪುರಭವನದಲ್ಲಿ ದ.ಕ.ಜಿಲ್ಲಾ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯು ಕಾರ್ಮಿಕ ಸಂಘಟನೆಗಳ ಜಿಲ್ಲಾ ಸಮಾವೇಶವನ್ನು ಏರ್ಪಡಿಸಿ ಕಾರ್ಮಿಕರು ಹಾಗೂ ಕಾರ್ಯಕರ್ತರಿಗೆ ಮುಷ್ಕರದ ಹಿನ್ನೆಲೆಯ ಬಗ್ಗೆ ಹಾಗೂ ಮುಷ್ಕರ ಯಶಸ್ವಿಗೊಳಿಸುವುದರ ಬಗ್ಗೆ ಮಾರ್ಗದರ್ಶನ ನೀಡಿತು.

ಅಲ್ಲದೆ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯು ಪತ್ರಿಕಾಗೋಷ್ಠಿ ನಡೆಸಿ ಮುಷ್ಕರದ ಉದ್ದೇಶಗಳನ್ನು ವಿವರಿಸಿದ್ದು, ಜಿಲ್ಲೆಯ ಪತ್ರಿಕೆಗಳು ಮುಷ್ಕರಕ್ಕೆ ವ್ಯಾಪಕ ಪ್ರಚಾರ ನೀಡಿತು.

ಸಿಐಟಿಯು ನೇತೃತ್ವದಲ್ಲಿರುವ ರಿಕ್ಷಾ, ಬಿಸಿಯೂಟ, ಕಟ್ಟಡ ಹಾಗೂ ನಿರ್ಮಾಣ, ಬೀಡಿ, ಅಂಗನವಾಡಿ, ಸಾರಿಗೆ ಸಂಘಟನೆಗಳು ಪ್ರತ್ಯೇಕ ಪ್ರತ್ಯೇಕವಾಗಿ ಜಿಲ್ಲಾ ಹಾಗೂ ಪ್ರಾದೇಶಿಕ ಮಟ್ಟದ ಸಮಿತಿ ಸಭೆಗಳನ್ನು ಏರ್ಪಡಿಸಿ ಮುಷ್ಕರ ಕಾರ್ಯಗತಗೊಳಿಸುವ ಬಗ್ಗೆ ಕಾರ್ಯಕ್ರಮ ರೂಪಿಸಿದವು.

ಮುಷ್ಕರದ ಹಿಂದಿನ ದಿನ ರಿಕ್ಷಾ ಸಂಘಟನೆಯ ವತಿಯಿಂದ ಮಂಗಳೂರು ನಗರದಲ್ಲಿ ಮೈಕ್ ಪ್ರಚಾರ ನಡೆಸಲಾಯಿತು.


ಅಖಿಲ ಭಾರತ ಮುಷ್ಕರವನ್ನು ಬೆಂಬಲಿಸಿ ಸಿಪಿಐ(ಎಂ) ಪಕ್ಷ ಕರೆ ನೀಡಿದ್ದು, ಪಕ್ಷದ ರಾಜ್ಯ ಸಮಿತಿ ಹಾಗೂ ದ.ಕ.ಜಿಲ್ಲಾ ಸಮಿತಿ ಪ್ರಕಟಿಸಿದ ಕರಪತ್ರಗಳನ್ನು ಜಿಲ್ಲಾದ್ಯಂತ ಪಕ್ಷದ ಶಾಖೆಗಳು ಮನೆಮನೆಗಳಿಗೂ ಅಂಗಡಿ ವ್ಯಾಪಾರಸ್ಥರಿಗೂ ತಲುಪಿಸಿದರು.

ಕರಾವಳಿ ಜಿಲ್ಲೆಯ ಖಾಸಗಿ ಬಸ್ಸು ಮಾಲಕರ ಸಹಕಾರದಿಂದ ಮುಷ್ಕರದ ಹಿಂದಿನ ದಿನ ಫೆಬ್ರವರಿ 28ರ ಮುಷ್ಕರಕ್ಕೆ ಬೆಂಬಲಿಸಿ ನಾಳೆ ಬಸ್ ಬಂದ್ ಎಂಬ ಬರಹವುಳ್ಳ ಪೋಸ್ಟರನ್ನು ಕಾರ್ಮಿಕ ಸಂಘಟನೆಯ ಕಾರ್ಯಕರ್ತರು ಎಲ್ಲಾ ಖಾಸಗಿ ಹಾಗೂ ಸಿಟಿ ಸಾರಿಗೆ ಬಸ್ಸುಗಳಿಗೆ ಹಚ್ಚಿದರು.

ಜಿಲ್ಲಾದ್ಯಂತ ವಾಹನ ಪ್ರಚಾರ ಜಾಥಾ:

ಕಾರ್ಮಿಕ ಸಂಘಟನೆಗಳ ದ.ಕ.ಜಿಲ್ಲಾ ಜಂಟಿ ಸಮಿತಿಯ ಆಶ್ರಯದಲ್ಲಿ ಫೆಬ್ರವರಿ 22 ರಿಂದ 24ರ ವರೆಗೆ ಜಿಲ್ಲಾದ್ಯಂತ ವಾಹನ ಪ್ರಚಾರ ಜಾಥಾ ನಡೆಸಲಾಯಿತು. ಮಂಗಳೂರು ನಗರದ

ಯಶಸ್ವಿ ಅಖಿಲ ಭಾರತ ಮುಷ್ಕರ



ವರದಿ : ವಾ.ಉ.

ವ್ಯಾಪಕ ಪ್ರಚಾರಾಂದೋಲನ ನಡೆಸಿದ ಕಾರಣ ಕಾರ್ಮಿಕ ಸಮಿತಿಗಳ ಆಶ್ರಯದಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಮುಷ್ಕರ ಯಶಸ್ವಿಯಾಯಿತು. ಮಂಗಳೂರು, ತೊಕ್ಕೊಟು, ಪುತ್ತೂರು, ಸುಳ್ಯ, ಬೆಳ್ತಂಗಡಿ, ಬಿ.ಸಿ.ರೋಡ್, ಮೂಡಬಿದ್ರೆ, ಸುರತ್ಕಲ್ ಇತ್ಯಾದಿ ದ.ಕ.ಜಿಲ್ಲೆಯ ಮುಖ್ಯ ಪಟ್ಟಣಗಳಲ್ಲಿ ಸರಕಾರಿ ಬಸ್ಸು ಹೊರತುಪಡಿಸಿ ಖಾಸಗಿ ಬಸ್, ರಿಕ್ಷಾ ಸಂಪೂರ್ಣ ನಿಲುಗಡೆಯಾಗಿತ್ತು. ಪೇಟೆಯ ಅಂಗಡಿ ಮುಂಗಟ್ಟುಗಳು ಮುಚ್ಚಲ್ಪಟ್ಟಿದ್ದವು. ಬ್ಯಾಂಕ್, ವಿಮಾ ಸಂಸ್ಥೆಗಳು ಕಾರ್ಯಾಚರಿಸಲಿಲ್ಲ. ಶಾಲೆಗಳಲ್ಲಿ ಮಕ್ಕಳ ಹಾಜರಿ ಇಲ್ಲದ್ದು ಗಮನಿಸಿ ಬಳಿಕ ರಜೆ ಸಾರಲಾಗಿತ್ತು.

ಉಡುಪಿ ಜಿಲ್ಲೆಯ ಕುಂದಾಪುರದಲ್ಲಿ ಮತ್ತು ಬ್ರಹ್ಮಾವರದಲ್ಲಿ ಮುಷ್ಕರವು ಸಂಪೂರ್ಣ ಯಶಸ್ವಿಯಾಗಿತ್ತು. ಕಾರ್ಕಳದಲ್ಲೂ ಬಸ್ಸುಗಳು ರಸ್ತೆಗೆ ಇಳಿಯಲಿಲ್ಲ. ಉಡುಪಿ ನಗರದಲ್ಲಿ ಸಂಪೂರ್ಣ ವ್ಯವಹಾರ ಸ್ಥಗಿತಗೊಂಡಿತ್ತು. ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿಯು ಪ್ರತಿಭಟನಾ ಮೆರವಣಿಗೆ ನಡೆಸಿದ್ದು, ಅಜ್ಜರಕಾಡು ಎಲ್‌ಐಸಿ ಆವರಣದಿಂದ ಹೊರಟ ಮೆರವಣಿಗೆ ಕೆನರಾ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್ ಹಾಗೂ ಕೇಂದ್ರ ಅಂಚೆ ಕಚೇರಿಯಿಂದ ಕಾರ್ಪೋರೇಶನ್ ಬ್ಯಾಂಕ್‌ವರೆಗೆ ಸಾಗಿ ಬಂತು. ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ಉಡುಪಿ ಜಿಲ್ಲಾ ಸಂಚಾಲಕ ಅದಮಾರು ಶ್ರೀಪತಿ ಆಚಾರ್ಯ, ಸಿಐಟಿಯುನ ಪಿ.ವಿಶ್ವನಾಥ ರೈ, ದೋಗು ಸುವರ್ಣ, ಎಐಟಿಯುಸಿನ ಕೆ.ವಿ.ಭಟ್, ಸಂಜೀವ ಶೇರಿಗಾರ್, ಬಿಎಂಎಸ್‌ನ ಬಾಲಗಂಗಾಧರ್, ವಿಮಾ ನೌಕರರ ಸಂಘದ ಪ್ರಭಾಕರ ಬಿ.ಕುಂದರ್, ಯು.ಗುರುದತ್, ಬ್ಯಾಂಕ್ ನೌಕರರ ಒಕ್ಕೂಟದ ಯು.ಶಿವರಾಯ, ಬಿಎಸ್ಸೆನ್ನೆಲ್ ನೌಕರರ ಸಂಘದ ಶಶಿಧರ ಗೊಲ್ಲ, ಕಮಲಾಕ್ಷ ಕಾಮತ್, ವೈದ್ಯಕೀಯ ಮಾರಾಟಗಾರರ ಸಂಘದ ಮಧುಸೂದನ ಹೆರ್ಗೂತು ಮುಂತಾದವರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ಕುಂದಾಪುರ ಮತ್ತು ಬ್ರಹ್ಮಾವರದಲ್ಲೂ ಮುಷ್ಕರ ದಿನದಂದು ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಲಾಗಿದೆ.

ಮಂಗಳೂರಿನಲ್ಲಿ ನಡೆದ ಪ್ರತಿಭಟನಾ ಪ್ರದರ್ಶನದಲ್ಲಿ ಐದು ಪ್ರಮುಖ ಕೇಂದ್ರ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಿ ಮಾತನಾಡಿದ್ದು ವಿಶೇಷವಾಗಿತ್ತು. ಪುರಭವನದ ಎದುರು ನಡೆದ ಬೃಹತ್ ಪ್ರತಿಭಟನಾ ಪ್ರದರ್ಶನವನ್ನು ಉದ್ದೇಶಿಸಿ ಮೊದಲು ಸಿಐಟಿಯು ಹಿರಿಯ ಮುಖಂಡರಾದ ಬಿ.ಮಾಧವ ಮಾತನಾಡಿದರು. ಬಿಎಂಎಸ್‌ನ ಜಿಲ್ಲಾಧ್ಯಕ್ಷ ಕೆ.ವಿಶ್ವನಾಥ ಶೆಟ್ಟಿ, ಎಐಟಿಯುಸಿಯ ಎಚ್.ವಿ.ರಾವ್, ಇಂಟಕ್‌ನ ಶಶಿರಾಜ್ ಅಂಬಟ್, ಎಚ್‌ಎಂಎಸ್‌ನ ಸದಾಶಿವ ಶೆಟ್ಟಿಗಾರ್, ಬ್ಯಾಂಕ್ ನೌಕರರ ಸಂಘಟನೆಯ ಕೆ.ಎಸ್.ಜೋಷಿ, ಬಿಇಎಫ್‌ಐನ ಬಿ.ಎಂ.ಮಾಧವ, ವಿಮಾ ನೌಕರ ಸಂಘದ ರಾಘವೇಂದ್ರ ರಾವ್ ಮೊದಲಾದವರು ಮಾತನಾಡಿದರು. ಸಿಐಟಿಯು ಮುಖಂಡರಾದ ಜೆ.ಬಾಲಕೃಷ್ಣ ಶೆಟ್ಟಿ, ವಸಂತ ಆಚಾರಿ, ಸುನಿಲ್ ಕುಮಾರ್ ಬಜಾಲ್, ಎಐಟಿಯುಸಿಯ ಸೀತಾರಾಮ ಬೇರಿಂಜ, ಕರುಣಾಕರ್, ವಿಮಾ ನೌಕರರ ಸಂಘಟನೆಯ ಬಿ.ಎನ್.ದೇವಾಡಿಗ ಮೊದಲಾದವರು ಪ್ರತಿಭಟನಾ ಪ್ರದರ್ಶನದಲ್ಲಿ ಭಾಗವಹಿಸಿದ್ದರು.

ಕರಾವಳಿ ಜಿಲ್ಲೆಗಳಲ್ಲಿ ನಡೆದ ಮುಷ್ಕರದಲ್ಲಿ ಬೀಡಿ ಕಾರ್ಮಿಕರು, ಬಿಸಿಯೂಟ, ಅಂಗನವಾಡಿ, ಕಟ್ಟಡ ನಿರ್ಮಾಣ, ಆಟೋ ರಿಕ್ಷಾ, ಸಾರಿಗೆ, ಹಂಚು, ಹಮಾಲಿ ಕಾರ್ಮಿಕರು, ಬೀದಿ ಬದಿ ವ್ಯಾಪಾರಸ್ಥರು, ಬ್ಯಾಂಕ್, ವಿಮೆ ಬಿಎಸ್ಸೆಎನ್ನೆಲ್ ನೌಕರರು ಮಾತ್ರವಲ್ಲದೆ ನವಮಂಗಳೂರು ಬಂದರು ಕಾರ್ಮಿಕರು ಹಾಗೂ ಸಾರ್ವಜನಿಕ ರಂಗದ ನೌಕರರೂ ಮುಷ್ಕರದಲ್ಲಿ ಭಾಗವಹಿಸಿದ್ದು ಈ ಸಾಲಿನ ಅಖಿಲ ಭಾರತ ಮುಷ್ಕರದ ವಿಶೇಷವಾಗಿದೆ.

ದಲಿತ ಹಕ್ಕುಗಳ ಸಮಿತಿಯಿಂದ ನೀರಿಗಾಗಿ ಪಾಲಿಕೆ ಎದುರು ಪ್ರತಿಭಟನೆ

ದಲಿತರು ಮತ್ತು ಅಲ್ಪಸಂಖ್ಯಾತರೇ ವಾಸವಾಗಿರುವ ಮಂಗಳೂರು ನಗರದ ತಣ್ಣೀರುಬಾವಿ ಪ್ರದೇಶಕ್ಕೆ ಕಳೆದ ಹತ್ತು ವರ್ಷಗಳಿಂದ ಸರಬರಾಜಾಗುತ್ತಿದ್ದ ನೀರಿನ ಸಂಪರ್ಕವನ್ನು ಸ್ಥಗಿತಗೊಳಿಸಿರುವ ನಗರಪಾಲಿಕೆಯ ಕ್ರಮವನ್ನು ಖಂಡಿಸಿ ಸಿಪಿಐ(ಎಂ) ಮತ್ತು ದಲಿತ ಹಕ್ಕುಗಳ ಸಮಿತಿಯ ಜಂಟಿ ಆಶ್ರಯದಲ್ಲಿ ಸಾರ್ವಜನಿಕರು ನಗರ ಪಾಲಿಕೆ ಎದುರು ಫೆಬ್ರವರಿ 21 ರಂದು ಪ್ರತಿಭಟನೆ ನಡೆಸಿದರು.

ತಣ್ಣೀರುಬಾವಿ ಪ್ರದೇಶದಲ್ಲಿ 198 ಮನೆಗಳಿದ್ದು ಕಳೆದ ಹತ್ತು ವರ್ಷಗಳಿಂದ ಈ ಪ್ರದೇಶಕ್ಕೆ ಪಾಲಿಕೆಯಿಂದಲೇ ನೀರು ಸರಬರಾಜು ಆಗುತ್ತಿತ್ತು. ನೀರಿನ ಬಳಕೆದಾರರು ಹತ್ತು ವರ್ಷದ ಬಿಲ್ಲನ್ನು ಪಾವತಿಸಿ ಬಳಿಕ ಮೀಟರ್ ಹಾಕಬೇಕೆಂದು ಪಾಲಿಕೆಯ ಅಧಿಕಾರಿಗಳು ಆದೇಶ ಹೊರಡಿಸಿದ್ದರು. ಸ್ಥಳೀಯರು ಈ ಆದೇಶಕ್ಕೆ ಮನ್ನಣೆ ನೀಡದಿದ್ದ ಹಿನ್ನೆಲೆಯಲ್ಲಿ ನಾಲ್ಕು ದಿನಗಳ ಹಿಂದೆ ನೀರಿನ ಸಂಪರ್ಕವನ್ನು ಕಡಿತಗೊಳಿಸಲಾಗಿತ್ತು. ಇದನ್ನು ವಿರೋಧಿಸಿ ಪಾಲಿಕೆ ಎದುರು ಪ್ರತಿಭಟನೆಯನ್ನು ಏರ್ಪಡಿಸಲಾಗಿತ್ತು.

ಸಂಘಟಕರು ನೀಡಿದ ಮನವಿಗೆ ಸ್ಪಂದಿಸಿದ ಪಾಲಿಕೆ ಕಮೀಷನರ್ ತಕ್ಷಣವೇ ನೀರಿನ ಸಂಪರ್ಕವನ್ನು ಕಲ್ಪಿಸಿದ್ದಾರೆ.

ಪ್ರತಿಭಟನೆಯನ್ನು ಉದ್ದೇಶಿಸಿ ಸಿಪಿಐ(ಎಂ) ನಗರ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಮತ್ತು ದಲಿತ ಹಕ್ಕುಗಳ ಸಮಿತಿ ಸಂಚಾಲಕ

ಲಿಂಗಪ್ಪ ನಂತೂರ್ ಮಾತನಾಡಿದರು. ಕಾರ್ಯಕರ್ತರಾದ ತಿಮ್ಮಯ್ಯ ಕೊಂಚಾಡಿ, ಯಮುನಾ ಪಚ್ಚನಾಡಿ, ಸರೋಜ ಮುಲ್ಲಕಾಡು, ಶಮೀಮಾ, ರೋಹಿಣಿ ಮತ್ತಿತರರು ಉಪಸ್ಥಿತರಿದ್ದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಿರಿಯಾದ ವಿರುದ್ಧ ವಿಶ್ವಸಂಸ್ಥೆಯಲ್ಲಿ ಅಮೆರಿಕಾ, ಅದರ ನಾಟೋ ಮಿತ್ರರು ಹಾಗೂ ಅರಬ್ ಪ್ರದೇಶದ ಅವರ ಗಿರಾಕಿ ದೇಶಗಳೊಂದಿಗೆ ಭಾರತ ಮತ ಹಾಕಿರುವುದು ಮತ್ತು ಇರಾನಿನ ವಿಷಯದಲ್ಲೂ, ಪ್ರಕಟವಾಗಿ ಏನೇ ಹೇಳಿದರೂ, ಅಮೆರಿಕಾದ ಒತ್ತಡಗಳಿಗೆ ಸದ್ದಿಲ್ಲದೆ ತಲೆಬಾಗುತ್ತಿರುವುದು ಭಾರತದ ವಿದೇಶಾಂಗ ಧೋರಣೆಯ ಕುರಿತ ಸತ್ಯಾಂಶಕ್ಕೆ ಮತ್ತೊಮ್ಮೆ ಉದಾಹರಣೆಯಾಗಿದೆ. ಇದೀಗ ಪ್ರಬುದ್ಧ ರಾಷ್ಟ್ರೀಯ ಹಿತಾಸಕ್ತಿಗಳನ್ನು ಆಧರಿಸಿದ ಒಂದು ಸ್ವತಂತ್ರ ಧೋರಣೆಯಾಗಿ ಉಳಿದಿಲ್ಲ. ಅದು ಸಾಮ್ರಾಜ್ಯಶಾಹೀ ಒತ್ತಡಗಳಿಗೆ ಮತ್ತು ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಭೌಗೋಳಿಕ-ರಾಜಕೀಯ ಹಿತಗಳಿಗೆ ಪಕ್ಕಾಗಿದೆ.

ಜಾರುದಾರಿಯಲ್ಲಿ ಸಾಗಿದೆ ಭಾರತದ ವಿದೇಶಾಂಗ ಧೋರಣೆ


'ಪೀಪಲ್ಸ್ ಡೆಮಾಕ್ರಸಿ' ವಾರಪತ್ರಿಕೆಯ ಮಾರ್ಚ್ 01, 2012ರ ಸಂಚಿಕೆಯ ಸಂಪಾದಕೀಯ

ಸಾಮ್ರಾಜ್ಯಶಾಹೀ ಹಸ್ತಕ್ಷೇಪದಲ್ಲಿ ಯುಪಿಎ ಸರಕಾರ ಸಿರಿಯಾ ಕುರಿತಂತೆ ಮುಖ ತಿರುವಿದೆ. ಅಕ್ಟೋಬರ್ 2011ರಲ್ಲಿ ಯುರೋಪಿಯನ್ ಒಕ್ಕೂಟದ ದೇಶಗಳು ಸಿರಿಯಾದ ವಿರುದ್ಧ ಇನ್ನಷ್ಟು ನಿರ್ಬಂಧಗಳನ್ನು ಹಾಕಬೇಕು ಎಂದು ಕರೆ ಕೊಡುವ ಠರಾವನ್ನು ವಿಶ್ವ ಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಮಂಡಿಸಿದಾಗ ರಶ್ಯಾ ಮತ್ತು ಚೀನಾ ಠರಾವಿನ ವಿರುದ್ಧ ತಮ್ಮ ವಿಟೋ(ನಿಷೇಧ) ಅಧಿಕಾರವನ್ನು ಬಳಸಿದ್ದವು. ಆಗ ಭಾರತ ಗೈರುಹಾಜರಾಗಿತ್ತು. ಆದರೇ ಮೂರೇ ತಿಂಗಳಲ್ಲಿ ಭಾರತದ ನಿಲುವು ತಲೆಕೆಳಗಾಯಿತು. ಲಿಬ್ಯಾ ಮಾದರಿ ಮಧ್ಯಪ್ರವೇಶವನ್ನು ಕಾನೂನುಬದ್ಧಗೊಳಿಸಬಹುದಾಗಿದ್ದ ಅರಬ್ ಲೀಗ್ ಪ್ರಾಯೋಜಿತ ಠರಾವಿನ ಪರವಾಗಿ ಭಾರತ ಮತ ನೀಡಿತು. ಈ ಠರಾವನ್ನು ಮತ್ತೆ ರಶ್ಯಾ ಮತ್ತು ಚೀನಾದ ಡಬಲ್ ವಿಟೋ ನಿರುಪಯುಕ್ತಗೊಳಿಸಿತು. ಆದರೆ, ಈ ಬಾರಿ, ಭಾರತ ಅಮೆರಿಕಾ, ಅದರ ನಾಟೋ ಮಿತ್ರರು ಹಾಗೂ ಅದರ ಅರಬ್ ಪ್ರದೇಶದ ಅದರ ಗಿರಾಕಿ ದೇಶಗಳೊಂದಿಗೆ ಮತ ಹಾಕಿತು.

ಭದ್ರತಾ ಸಮಿತಿಯಲ್ಲಿ ವಿಫಲವಾದ ನಂತರ ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಇದೇ ರೀತಿಯ ಒಂದು ಠರಾವನ್ನು ಅಂಗೀಕರಿಸಲಾಯಿತು. ಭಾರತ ಅದರ ಪರವಾಗಿಯೂ ಮತ ಹಾಕಿತು. ಸಿರಿಯಾ ಕುರಿತಂತೆ ಭಾರತದ ನಿಲುವಿನಲ್ಲಿ ಯಾವುದಾದರೂ ಸಂದಿಗ್ಧತೆಯಿದ್ದರೆ, ಅದು ಕೂಡ 'ಸಿರಿಯಾದ ಗೆಳೆಯರು' ಎಂದನಿಸಿಕೊಂಡವರು ಫೆಬ್ರುವರಿ 24ರಂದು ಟ್ಯುನಿಸ್‌ನಲ್ಲಿ ನಡೆಸಿದ ಸಭೆಯಲ್ಲಿ ಭಾಗವಹಿಸಲು ನಿರ್ಧರಿಸುವುದರೊಂದಿಗೆ ಮಾಯವಾಯಿತು. 'ಲಿಬ್ಯಾದ ಗೆಳೆಯರು' ಎಂಬ ಹೆಸರಿನಲ್ಲಿ ನಡೆದ ಗುಪ್ತ ಸಭೆಗಳನ್ನು ನೆನಪಿಸುವ ಈ ಸಭೆಯಲ್ಲಿ ಭಾಗವಹಿಸಲು ಭಾರತ ವಿದೇಶಾಂಗ ಇಲಾಖೆಯಲ್ಲಿ ಪಶ್ಚಿಮ ಏಶ್ಯ ಮತ್ತು ಉತ್ತರ ಆಫ್ರಿಕಾ ವ್ಯವಹಾರಗಳ ಮುಖ್ಯಸ್ಥರಾಗಿರುವ ತನ್ನ ಜಂಟಿ ಕಾರ್ಯದರ್ಶಿಯನ್ನು ಕಳಿಸಿತು.

ಪಾಶ್ಚಿಮಾತ್ಯ ಸೋಗಲಾಡಿತನ

ಕಳೆದ ಅಕ್ಟೋಬರ್‌ನಿಂದ ಸಿರಿಯಾದಲ್ಲಿನ ಪರಿಸ್ಥಿತಿ ಒಂದು ಮರಣಾಂತಿಕ ಸಂಘರ್ಷವಾಗಿ ಬೆಳೆದಿದೆ. ಅಮೆರಿಕಾ ಮತ್ತು ಸಿರಿಯಾದ ಮಾಜಿ ವಸಾಹತುಶಾಹೀ ಆಳರಸರಾದ ಫ್ರಾನ್ಸ್ ಮತ್ತು ಬ್ರಿಟನ್, ಜತೆಗೆ ಸೌದಿ ಅರೇಬಿಯ ಮತ್ತು ಕತಾರ್ ಬಶರ್ ಅಲ್-ಅಸ್ಸಾದ್ ಸರಕಾರವನ್ನು ಉರುಳಿಸಿ ಒಂದು ಆಳ್ವಿಕೆ ಬದಲಾವಣೆಯ ದಾರಿ ಹಿಡಿದಿವೆ. ಇದಕ್ಕೆ, ಸಿರಿಯಾದ ಬಂಡುಕೋರರಿಗೆ ನೆಲೆಯಾಗಿ ನಾಟೋ ಮಿತ್ರ ಟರ್ಕಿಯನ್ನು ಬಳಸಲಾಗುತ್ತಿದೆ. ಒಂದು 'ಸಿರಿಯನ್ ರಾಷ್ಟ್ರೀಯ ಮಂಡಳಿ' ಮತ್ತು 'ಮುಕ್ತ ಸಿರಿಯನ್ ಸೇನೆ'ಯನ್ನು ರಚಿಸಲಾಗಿದೆ. ಸಿರಿಯಾದ ಗಡಿಯಲ್ಲಿರುವ ಟರ್ಕಿಯ ಇಸ್ಕರೆಂದಂ ಎಂಬ ಸ್ಥಳಕ್ಕೆ ನಾಟೋ ಶಶ್ತ್ರಾಸ್ತ್ರಗಳನ್ನು ಪೂರೈಸುತ್ತಿದೆ, ಲಿಬ್ಯನ್ ಹೋರಾಟಗಾರರನ್ನು ಸಾಗಿಸುತ್ತಿತ್ತು. ಹೋಮ್ಸ್ ಮತ್ತು ಇತರ ಕೆಲವು ತಾಣಗಳನ್ನು ಕೇಂದ್ರವಾಗಿ ಮಾಡಿಕೊಂಡು ಸಶಸ್ತ್ರ ಗುಂಪುಗಳು ಸಿರಿಯಾದ ಭದ್ರತಾ ಪಡೆಗಳು ಮತ್ತು ಸರಕಾರೀ ಸಂಸ್ಥೆಗಳ ಮೇಲೆ ದಾಳಿ ಮಾಡುತ್ತಿವೆ. ಸಿರಿಯಾಕ್ಕೆ



ಕಳಿಸಿದ ಅರಬ್ ಲೀಗ್ ತಂಡವೊಂದು ಕೂಡ ಒಂದು 'ಸಶಸ್ತ್ರ ರಚನೆ' 'ಸಿರಿಯನ್ ಭದ್ರತಾ ಪಡೆಗಳು ಮತ್ತು ನಾಗರಿಕರ ಮೇಲೆ ದಾಳಿ ಮಾಡುತ್ತಿದೆ, ಸರಕಾರ ಪ್ರತಿಯಾಗಿ ಇನ್ನಷ್ಟು ಹಿಂಸಾಚಾರ ನಡೆಸುವಂತೆ' ಮಾಡುತ್ತಿದೆ ಎಂದು ವರದಿ ಮಾಡಿದೆ.

ಪಾಶ್ಚಿಮಾತ್ಯ ಮಾಧ್ಯಮಗಳು ಸಿರಿಯಾದೊಳಗಿನ ಹಿಂಸಾಚಾರದ ಏಕಪಕ್ಷೀಯ ಮತ್ತು ವಿಕೃತ ಚಿತ್ರವನ್ನು ಒದಗಿಸುತ್ತಿವೆ. ಈ ಬಂಡುಕೋರರು ಹೆಚ್ಚಿನವರು ಮುಸ್ಲಿಂ ಬ್ರದರ್‌ಹುಡ್ ಅಥವ ಅದಕ್ಕಿಂತಲೂ ತೀವ್ರವಾದ ಇಸ್ಲಾಮಿ ಗುಂಪುಗಳಿಂದ ಬಂದಿರುವವರು ಎಂಬ ಸಂಗತಿಯನ್ನು ಅವು ಮರೆ ಮಾಚುತ್ತಿವೆ. ಸಿರಿಯಾದ ಸರಕಾರ ಇಂದು ಅರಬ್ ಜಗತ್ತಿನಲ್ಲಿರುವ ಏಕೈಕ ಜಾತ್ಯಾತೀತ ಆಡಳಿತವಾದ್ದರಿಂದ ಅಲ್ ಖೈದಾ ಈ ಬಂಡಾಯಕ್ಕೆ ಬೆಂಬಲ ಸಾರಿದೆ. ಸಿರಿಯನ್ ಆಡಳಿತ ಸರ್ವಾಧಿಕಾರಶಾಹಿ ಎಂದು ಖಂಡಿಸುವ ಪಾಶ್ಚಿಮಾತ್ಯರದ್ದು ಸೋಗಲಾಡಿತನ ಎಂಬುದು ಎದ್ದು ಕಾಣುತ್ತಿದೆ, ಏಕೆಂದರೆ, ಸಿರಿಯಾದ ವಿರುದ್ಧ ಗುರಿಯಿಡಲು ಸರ್ವಾಧಿಕಾರಶಾಹಿ ಸೌದಿ ಮತ್ತು ಕೊಲ್ಲಿ ರಾಷ್ಟ್ರಗಳ ಆಡಳಿತಗಳನ್ನು ಅವರು ಬಳಸುತ್ತಿದ್ದಾರೆ.

ಸಿನಿಕ ಅಧಿಕಾರದಾಟದಿಂದ ದೂರವಿರಬೇಕಿತ್ತು

ಸಿರಿಯಾದೊಳಗಿನ ಹೋರಾಟ ಒಂದು ಸ್ಥಳೀಯ ವ್ಯವಹಾರವಲ್ಲ. ಅದು ಇರಾನಿನ ವಿರುದ್ಧ ಗುರಿಯಿಟ್ಟಿರುವ ಮತ್ತು ಪಶ್ಚಿಮ ಏಶ್ಯಾದ ಮೇಲೆ ಸಾಮ್ರಾಜ್ಯಶಾಹಿ ಶಕ್ತಿಗಳ ಪ್ರಾಬಲ್ಯವನ್ನು ಹಾಗೂ ಅಲ್ಲಿನ ತೈಲ ಸಂಪನ್ಮೂಲಗಳ ಮೇಲೆ ಹತೋಟಿಯನ್ನು ಶಾಶ್ವತಗೊಳಿಸುವ ಭೌಗೋಳಿಕ-ರಾಜಕೀಯ ಹೋರಾಟದ ಭಾಗ. ಇರಾನಿನೊಂದಿಗೆ ನಿಕಟ ಸಂಬಂಧಗಳನ್ನು ಹೊಂದಿರುವ ಸಿರಿಯಾದಲ್ಲಿ ಆಡಳಿತ ಬದಲಾವಣೆ ತರಬೇಕೆಂಬುದು ಅಮೆರಿಕಾ ಮತ್ತು ನಾಟೋ ಮಿತ್ರರ ಹಂಚಿಕೆ. ಇದು ಇಸ್ರೇಲಿನ ಹಿತಾಸಕ್ತಿಗಳಿಗೂ ಸೂಕ್ತ. ಸೌದಿ ಅರೇಬಿಯಾ ಕೂಡ ಅಸ್ಸಾದ್ ಆಡಳಿತವನ್ನು ತೆಗೆದು ಹಾಕುವುದು ಸಿರಿಯಾದ ಮೇಲೆ ಸುನ್ನಿ ವಹಾಬಿ ಪ್ರಭಾವವನ್ನು ವಿಸ್ತರಿಸಿ, ಶೀಯಾ ಇರಾನನ್ನು ಏಕಾಂಗಿಯಾಗಿಸುವಲ್ಲಿ ಒಂದು ಪ್ರಧಾನ ಹೆಜ್ಜೆಯೆಂದು ಭಾವಿಸುತ್ತದೆ.

ಈ ಹಿಂದೆ ಲಿಬ್ಯಾದ ವಿಷಯದಲ್ಲಿ ಭಾರತ, ವಿಶ್ವ ಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಒಂದು ಸರಿಯಾದ ನಿಲುವನ್ನು ತಳೆದಿತ್ತು. ನಾಟೋ ಶಕ್ತಿಗಳು ಮತ್ತು ಅವುಗಳ ಬದಲಿಯಂತಿರುವ ಕತಾರ್ ಭದ್ರತಾ ಸಮಿತಿಯ ಠರಾವನ್ನು ಹೇಗೆ ಬಳಸಿವೆ ಎಂಬುದನ್ನು ನೋಡಿದ ಮೇಲಂತೂ ಸಿರಿಯಾ ಕುರಿತಂತೆ ಯೋಜಿಸುತ್ತಿರುವ ಸಿನಿಕ ಅಧಿಕಾರದಾಟದಿಂದ ಭಾರತ ದೂರವಿರಲೇ ಬೇಕಾಗಿತ್ತು. ಬದಲಾಗಿ ಅಕ್ಟೋಬರ್ 2011ರ ನಿಲುವು ತಿರುವು-ಮುರುವಾಗಲು ಅಮೆರಿಕಾದ ಒತ್ತಡವೇ ಕಾರಣ ಎಂದು ನೇರವಾಗಿಯೇ ಹೇಳಬಹುದು. ಇರಾನ್ ಕುರಿತಂತೆ ಭಾರತದ ನಿಲುವಿನಲ್ಲೂ ಇದು ಕಾಣಬರುತ್ತಿದೆ.

ಒತ್ತಡಕ್ಕೆ ತಲೆಬಾಗುತ್ತಿದೆ

ಇರಾನನ್ನು ಒಬ್ಬಂಟಿಯಾಗಿಸುವ ಮತ್ತು ಅಂತಿಮವಾಗಿ ಅಲ್ಲಿ ಆಳ್ವಿಕೆ ಬದಲಾವಣೆ ತರಲು ಎಡೆಬಿಡದೆ ಪ್ರಯತ್ನಿಸುತ್ತಿರುವ ಅಮೆರಿಕಾ, ಭಾರತವೂ ಇದನ್ನೇ ಅನುಸರಿಸಬೇಕೆಂದು ಬಯಸುತ್ತದೆ. ಇರಾನಿನಿಂದ ಭಾರತ ತೈಲ ಖರೀದಿಯನ್ನು ನಿಲ್ಲಿಸಬೇಕು ಮತ್ತು ಅದರೊಂದಿಗೆ ವ್ಯಾಪಾರ ಮತ್ತು ಆರ್ಥಿಕ ಸಂಬಂಧಗಳನ್ನು ಕಡಿದು ಕೊಳ್ಳಬೇಕು ಎಂದು ಅದು ಭಾರತದ ಮೇಲೆ ನಿರಂತರವಾಗಿ ಒತ್ತಡವನ್ನು ಹಾಕುತ್ತಲೇ ಇದೆ. ಅಮೆರಿಕಾದ ವಿದೇಶಾಂಗ ಇಲಾಖೆಯ ವಕ್ತಾರೆ ಫೆಬ್ರುವರಿ 21ರಂದು, ತಮ್ಮ ಸರಕಾರ "ದೇಶಗಳು ಇರಾನೀ ತೈಲದ ಮೇಲೆ ತಮ್ಮ ಅವಲಂಬನೆಯಿಂದ ಹೆಚ್ಚೆಚ್ಚಾಗಿ ತಪ್ಪಿಸಿಕೊಳ್ಳುತ್ತವೆ ಎಂಬ ನಮ್ಮ ನಿರೀಕ್ಷೆಗೆ ಸಂಬಂಧಪಟ್ಟಂತೆ .. ಮಾತುಕತೆಗಳನ್ನು ನಡೆಸುತ್ತಿದ್ದೇವೆ" ಎನ್ನುವಾಗ ನಿರ್ದಿಷ್ಟವಾಗಿ ಭಾರತ ಮತ್ತು ಚೀನಾವನ್ನು ಉಲ್ಲೇಖಿಸಿದರು. ತಾನು ಇರಾನಿನಿಂದ ತೈಲ ಖರೀದಿಯನ್ನು ಮುಂದುವರೆಸುತ್ತೇನೆ ಎಂದು ಭಾರತ ಪ್ರಕಟಿಸಿದಾಗ, ಮಾಜಿ ಅಮೆರಿಕನ್ ವಿದೇಶಾಂಗ ಅಪರ ಕಾರ್ಯದರ್ಶಿ ಹಾಗೂ ಭಾರತ-ಅಮೆರಿಕಾ ಪರಮಾಣು ವ್ಯವಹಾರದ ಮಾತುಕತೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ನಿಕೊಲಸ್ ಬರ್ನ್ಸ್, ಭಾರತದ ನಿಲುವು "ಅಮೆರಿಕಾದ ಕಪಾಳಕ್ಕೆ ಕೊಟ್ಟಿರುವ ಏಟು ಮಾತ್ರವೇ ಅಲ್ಲ, ಅದಕ್ಕೆ ನೇತೃತ್ವ ವಹಿಸುವ ಸಾಮರ್ಥ್ಯ ಇದೆಯೇ ಎಂಬ ಪ್ರಶ್ನೆಯನ್ನೂ ಇದು ಎತ್ತಿದೆ" ಎಂದು ಲೇಖನವೊಂದರಲ್ಲಿ ಬರೆದಿದ್ದಾರೆ.

ಭಾರತ ಮುಂದೆಯೂ ಇರಾನಿನಿಂದ ತೈಲವನ್ನು ಖರೀದಿಸುತ್ತದೆ ಎಂದು ಹಣಕಾಸು ಮಂತ್ರಿ ಪ್ರಣಬ್ ಮುಖರ್ಜಿ ಹೇಳಿಕೆಯನ್ನೇ ಇರಲಿ, ಇರಾನಿನಿಂದ ತೈಲ ಆಮದುಗಳನ್ನು ಇಳಿಸುವ ಕ್ರಮಗಳನ್ನು ಸದ್ದಿಲ್ಲದೆ ಕೈಗೊಳ್ಳಲಾಗುತ್ತಿದೆ. ಲಭ್ಯ ಅಂಕಿ-ಅಂಶಗಳ ಪ್ರಕಾರ, 2008-09ರಲ್ಲಿ ಇರಾನಿನಿಂದ 21.8 ಮಿಲಿಯ ಟನ್ ಇದ್ದ ಇರಾನೀ ತೈಲ ಆಮದು, 2010-11ರ ವೇಳೆಗೆ 18.5 ಮಿಲಿಯ ಟನ್ನಿಗಿಳಿದಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಇದು ಇನ್ನೂ ಕೆಳಗೆ 13.1 ಮಿಲಿಯ ಟನ್‌ಗಿಳಿದಿದೆ. ತೈಲ ಮಂತ್ರಾಲಯ ಸರಕಾರೀ ತೈಲ ಕಂಪನಿಗಳಿಗೆ ಬೇರೆ ಮೂಲಗಳನ್ನು ಶೋಧಿಸುವಂತೆ ನಿರ್ದೇಶನಗಳನ್ನು ಕೊಟ್ಟಿದೆ. ಅಮೆರಿಕಾದ ಸಲಹೆಯಂತೆ, ಈಗಾಗಲೇ ಸೌದಿ ಅರೇಬಿಯಾದಿಂದ ತೈಲ ಆಮದುಗಳನ್ನು ಹೆಚ್ಚಿಸುವ ಬಗ್ಗೆ ಆ ದೇಶದೊಂದಿಗೆ ಭಾರತ ಮಾತುಕತೆ ನಡೆಸಿದೆ. ಇರಾನಿಗೆ ಭಾರತದ ರಫ್ತುಗಳ ಕತ್ತು ಹಿಸುಕುವುದನ್ನು ಸದ್ದಿಲ್ಲದೆ ಒಪ್ಪಿಕೊಳ್ಳಲಾಗುತ್ತಿದೆ.

ಸಿರಿಯಾ ಪ್ರಕರಣ ಮತ್ತು ಇರಾನ್ ವಿಷಯದಲ್ಲಿ ಹಿಂದೆ ಸರಿಯುತ್ತಿರುವುದು, ಭಾರತದ ವಿದೇಶಾಂಗ ಧೋರಣೆಯ ಕುರಿತ ಸತ್ಯಾಂಶಕ್ಕೆ ಮತ್ತೊಮ್ಮೆ ಉದಾಹರಣೆಯಾಗಿದೆ. ಇದೀಗ ಪ್ರಬುದ್ಧ ರಾಷ್ಟ್ರೀಯ ಹಿತಾಸಕ್ತಿಗಳನ್ನು ಆಧರಿಸಿದ ಒಂದು ಸ್ವತಂತ್ರ ಧೋರಣೆಯಾಗಿ ಉಳಿದಿಲ್ಲ. ಅದು ಸಾಮ್ರಾಜ್ಯಶಾಹೀ ಒತ್ತಡಗಳಿಗೆ ಮತ್ತು ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಭೌಗೋಳಿಕ-ರಾಜಕೀಯ ಹಿತಗಳಿಗೆ ಪಕ್ಕಾಗಿದೆ.





ನವ ದೆಹಲಿ

ದುಡಿವ ಜನರ ಉಪೇಕ್ಷೆ:
ದೇಶವ್ಯಾಪಿ 10 ಕೋಟಿ ಶ್ರಮಿಕರ ಧಿಕ್ಕಾರ


ಯುಪಿಎ-2 ಸರಕಾರದ ಆಡಳಿತದ ಬಗ್ಗೆ, ಅದರಲ್ಲೂ ದುಡಿಯುವ ಜನಗಳ ಪ್ರಶ್ನೆಗಳ ಬಗ್ಗೆ ಉಪೇಕ್ಷೆಯ ಧೋರಣೆಗೆ ಅಸಮಾಧಾನದ ಒಂದು ಬೃಹತ್ ಅಭಿವ್ಯಕ್ತಿ ಫೆಬ್ರುವರಿ 28ರಂದು ಪ್ರದರ್ಶನಗೊಂಡಿತು. ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತು ಅಖಿಲ ಭಾರತ ನೌಕರರ, ಕಾರ್ಮಿಕರ ಒಕ್ಕೂಟಗಳು ಕರೆ ನೀಡಿದ್ದ ಸಾರ್ವತ್ರಿಕ ಮುಷ್ಕರದಲ್ಲಿ ದೇಶಾದ್ಯಂತ 10 ಕೋಟಿ ಶ್ರಮಜೀವಿಗಳು ಭಾಗವಹಿಸಿದರು. ಹಲವೆಡೆ ರೈತರು, ಕೃಷಿಕೂಲಿಕಾರರು ಮತ್ತು ಇತರ ಜನವಿಭಾಗಗಳ ಜನರೂ ಸಾರ್ವತ್ರಿಕ ಮುಷ್ಕರಕ್ಕೆ ಬೆಂಬಲವಾಗಿ ಹರತಾಳವನ್ನು ಆಚರಿಸಿದರು.

ಕಾರ್ಮಿಕ ಸಂಘಟನೆಗಳು ಕಳೆದ ಮೂರು ವರ್ಷಗಳಿಂದ ಯುಪಿಎ ಸರಕಾರದ ಧೋರಣೆಗಳ ವಿರುದ್ಧ ಸತತವಾಗಿ ಪ್ರತಿಭಟಿಸುತ್ತಿದ್ದು, ಮೂರು ತಿಂಗಳ ಹಿಂದೆಯೇ ಯುಪಿಎ-2 ಸರಕಾರದ ಧೋರಣೆಗಳ, ವಿಶೇಷವಾಗಿ ಜನಗಳ ಮೇಲೆ ಅದು ಸತತವಾಗಿ ಹೊರಿಸುತ್ತಿರುವ ಸಂಕಟಗಳ ವಿರುದ್ಧ ಈ ಮುಷ್ಕರದ ಎಚ್ಚರಿಕೆ ನೀಡಿದ್ದವು, ಸರಕಾರದ ಮುಂದೆ ನಿರ್ದಿಷ್ಟ ಬೇಡಿಕೆಗಳನ್ನು ಮಂಡಿಸಿದ್ದವು. ಆದರೆ ತನ್ನ ನಿರ್ಲಕ್ಷ್ಯದ ಧೋರಣೆಯನ್ನು ಮುಂದುವರೆಸಿದ್ದ ಸರಕಾರಕ್ಕೆ ಈ ಬಗ್ಗೆ ಕಾರ್ಮಿಕರ ಪ್ರತಿನಿಧಿಗಳೊಂದಿಗೆ ಮಾತುಕತೆ ನಡೆಸಲು ಸಮಯವೇ ಸಿಕ್ಕಿರಲಿಲ್ಲ, ಮುಷ್ಕರದ 48 ಗಂಟೆಗಳ ಮೊದಲಷ್ಟೇ ಎಚ್ಚೆತ್ತುಕೊಂಡು ಮುಷ್ಕರವನ್ನು ಹಿಂತೆಗೆದುಕೊಳ್ಳುವಂತೆ ಕೇಳಿಕೊಂಡಿತು. ಇದರ ಹಿಂದಿದ್ದ ಅಪ್ರಾಮಾಣಿಕತೆಯನ್ನು ಕಂಡ ಶ್ರಮಜೀವಿಗಳು ಸಹಜವಾಗಿಯೇ ಇದಕ್ಕೆ ಸ್ಪಂದಿಸಲಿಲ್ಲ.

ಈ ಮುಷ್ಕರದಲ್ಲಿ ಮೊತ್ತ ಮೊದಲ ಬಾರಿಗೆ ದೇಶದ ಎಲ್ಲ ಕಾರ್ಮಿಕ ಸಂಘಟನೆಗಳು, ಆಳುವ ಪಕ್ಷದ ನೇತೃತ್ವದಲ್ಲಿರುವ ಐಎನ್‌ಟಿಯುಸಿ ಮತ್ತು ಸಂಘ ಪರಿವಾರದ ನೇತೃತ್ವದಲ್ಲಿರುವ ಬಿಎಂಎಸ್ ಕೂಡ ಸೇರಿರುವುದು ಎಲ್ಲ ವೀಕ್ಷಕರ ಗಮನ ಸೆಳೆದಿದೆ. ಈ ಸಾರ್ವತ್ರಿಕ ಮುಷ್ಕರ ಆರ್ಥಿಕದ ಎಲ್ಲ ವಲಯಗಳನ್ನು ತಟ್ಟಿದೆ. ಕಲ್ಲಿದ್ದಲು, ಉಕ್ಕು, ಪೆಟ್ರೋಲಿಯಂ, ದೂರಸಂಪರ್ಕ, ರಕ್ಷಣಾ ಉದ್ದಿಮೆಗಳು, ಬ್ಯಾಂಕುಗಳು, ವಿಮೆ, ವಿದ್ಯುತ್ ,ಸಾರಿಗೆ, ಬಂದರು, ಅಂಗನವಾಡಿಗಳು, ಕಟ್ಟಡ ನಿರ್ಮಾಣ, ಬೀಡಿ ಹೀಗೆ ಸುಮಾರಾಗಿ ಎಲ್ಲ ಸಂಘಟಿತ ಮತ್ತು ಅಸಂಘಟಿತ ವಲಯಗಳ ಕಾರ್ಮಿಕರು ಯುಪಿಎ-2 ಸರಕಾರ ಕೋಟ್ಯಂತರ ಶ್ರಮಜೀವಿಗಳ ಬದುಕಿನ ಬಗ್ಗೆ ತೋರುತ್ತಿರುವ ಉಪೇಕ್ಷೆಗೆ, ಅವರ ಸಮಸ್ಯೆಗಳಿಗೆ ಸ್ಪಂದಿಸದೇ ಇರುವುದಕ್ಕೆ ತಕ್ಕ ಉತ್ತರ ನೀಡಿದ್ದಾರೆ. ಸರಕಾರ ನಿರ್ದಿಷ್ಟ ಪರಿಹಾರ ಕ್ರಮಗಳನ್ನು ಕೈಗೊಳ್ಳದಿದ್ದರೆ ದುಡಿಯುವ ಜನಗಳು ಮತ್ತು ಅವರ ಸಂಘಟನೆಗಳು ಸುಮ್ಮನೇ ಸಹಿಸಿಕೊಳ್ಳುವುದಿಲ್ಲ ಎಂಬುದರ ಗಟ್ಟಿಯಾದ ಸಂಕೇತ ನೀಡಿದ್ದಾರೆ ಎಂದು ಕೇಂದ್ರ ಕಾರ್ಮಿಕ ಸಂಘಟನೆಗಳು ಹೇಳಿವೆ.

ಈ ನಡುವೆ ಯುಪಿಎ-2 ಕೂಟಕ್ಕೆ ಸೇರಿದ ಪಶ್ಚಿಮ ಬಂಗಾಳದ ತೃಣಮೂಲ-ಕಾಂಗ್ರೆಸಿನ ಸರಕಾರದ ಮುಖ್ಯಮಂತ್ರಿ, ತನ್ನ ಪಕ್ಷವೂ ಈ ಹಿಂದೆ ಈ ರೀತಿ ಚಳುವಳಿ, ಮುಷ್ಕರ ಮಾಡಿದ್ದು ತಪ್ಪು ಎಂದು ತಮಗೀಗ ಜ್ಞಾನೋದಯವಾಗಿದೆ, ಅದಕ್ಕಾಗಿ ಕ್ಷಮೆ ಯಾಚಿಸುತ್ತೇವೆ, ಅದನ್ನು ಮನ್ನಿಸಿ ಯಾರೂ ಈ ಮುಷ್ಕರದಲ್ಲಿ ಭಾಗವಹಿಸಬಾರದು ಎಂದು ಮನವಿ ಮಾಡಿಕೊಂಡರು. ಇಂತಹ ಹಾಸ್ಯಾಸ್ಪದ 'ಮನವಿ'ಗೆ ಸಹಜವಾಗಿಯೆ ಪಶ್ಚಿಮ ಬಂಗಾಳದ ಜನತೆ ಮುಷ್ಕರದಲ್ಲಿ ಬೃಹತ್ ಪ್ರಮಾಣದಲ್ಲಿ ಭಾಗವಹಿಸಿ ತಕ್ಕ ಉತ್ತರ ನೀಡಿದ್ದಾರೆ.

ಕೋಲ್ಕತ್ತಾದಲ್ಲಿ





ಪಂಜಾಬ್‌ನಲ್ಲಿ





ಜನಶಕ್ತಿ
ಕನ್ನಡ ವಾರಪತ್ರಿಕೆ

ಫೆ.28 ದೇಶವ್ಯಾಪಿ ಮುಷ್ಕರ

ರಾಜ್ಯದಲ್ಲಿ ವ್ಯಾಪಕ ಯಶಸ್ಸು

ದೇಶಾದ್ಯಂತ ಇದೇ ಪ್ರಥಮ ಬಾರಿಗೆ ರಾಜಕೀಯ ಒಲವುಗಳು, ಸೈದ್ಧಾಂತಿಕ ಭಿನ್ನಾಭಿಪ್ರಾಯಗಳನ್ನು ಮೀರಿ ಎಲ್ಲ ಕಾರ್ಮಿಕ ಸಂಘಟನೆಗಳು ಒಂದಾಗಿ ಕರೆ ನೀಡಿದ ಅಖಿಲ ಭಾರತ ಮುಷ್ಕರ ಅಪೂರ್ವ ಯಶಸ್ಸನ್ನು ದಾಖಲಿಸಿದೆ. ಅದೇ ರೀತಿ ಕರ್ನಾಟಕ ರಾಜ್ಯದ ದುಡಿಯುವ ಜನರ ಚಳುವಳಿಯಲ್ಲಿ ಹೊಸದೊಂದು ಇತಿಹಾಸ ದಾಖಲಾಗಿದೆ. ಜಾತಿ,ಮತ, ಪ್ರದೇಶ, ಭಾಷೆ, ಬಣ್ಣಗಳ ಭಿನ್ನತೆಗಳನ್ನು ಮೀರಿದ ಕಾರ್ಮಿಕ ವರ್ಗದ ಐಕ್ಯತೆ ಫೆಬ್ರವರಿ 28, 2012ರ ಉತ್ಸಾಹ ಭರಿತ ಮುಷ್ಕರದಲ್ಲಿ ವ್ಯಕ್ತಗೊಂಡಿದೆ.

ಬದುಕನ್ನು ಸುಡುವ ಅಗತ್ಯ ವಸ್ತುಗಳ ಬೆಲೆ ಏರಿಕೆ, ಜಾರಿಗೆ ಬಾರದ ಕಾರ್ಮಿಕ ಕಾನೂನುಗಳು, ನಿಕೃಷ್ಟ ವೇತನ, ಸಾಲದ ಸಂಬಳ, ಇದ್ದವರಿಗೆ ಇದ್ದ ನಿವೃತ್ತಿ ವೇತನವನ್ನೂ ಕಿತ್ತುಕೊಳ್ಳುವ ಪಿಂಚಣಿ ನೀತಿ, ಮಾಲೀಕರ ಇಲಾಖೆಯಾಗಿ ಪರಿವರ್ತಿತವಾಗಿರುವ ಕಾಮಿಕ ಇಲಾಖೆ, ದುಡಿಯುವ ಜನರ ಸಮಸ್ಯೆಗಳನ್ನು ಕಿವಿಯ ಮೇಲೆಯೇ ಹಾಕಿಕೊಳ್ಳಲು ಸಿದ್ಧವಿಲ್ಲದ ಸರ್ಕಾರ, ಆಳುವವರ ಕುರ್ಚಿ ಕಿತ್ತಾಟಗಳು, ಯಜ್ಞ ಯಾಗಗಳ ಸಂಭ್ರಮಗಳು, ಮಠ ಮಾನ್ಯಗಳಿಗೆ ಧಾರಾಳ ಉಂಬಳಿ ಘೋಷಿಸುವ ಉಮೇದುಗಳು ಎಲ್ಲವನ್ನು ನೋಡುತ್ತಾ ಬಂದಿದ್ದ ಜನತೆ ಇನ್ನು ಇದನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲ. ನಾವು ದುಡಿಯುವ ಜನ ರಾಜ್ಯದಲ್ಲಿ ಎಚ್ಚರವಿದ್ದೇವೆ...ಹುಷಾರ್ !! ಎಂಬ ಸ್ಪಷ್ಟ ಸಂದೇಶವನ್ನು ಈ ಮುಷ್ಕರದ ಮೂಲಕ ನೀಡಿದ್ದಾರೆ.



ರಾಜ್ಯದ ಕಾರ್ಮಿಕ ವರ್ಗ, ವಿವಿಧ ವಿಭಾಗಗಳ ದುಡಿಯುವ ಜನತೆ, ವಿದ್ಯಾರ್ಥಿ, ಯುವಜನತೆ, ಮಹಿಳೆಯರು, ಫೆ.28ರ ಮುಷ್ಕರದ ಕರೆಗೆ ಉತ್ತಮವಾಗಿ ಸ್ಪಂದಿಸಿದ್ದಾರೆ. ರಾಜ್ಯಾದ್ಯಂತ ಮುಷ್ಕರ ವ್ಯಾಪಕ ಯಶಸ್ಸು ಕಂಡಿದೆ.



ಕೊಪ್ಪಳ ಬಂದ್

ಚಳುವಳಿಯ ಇತಿಹಾಸದಲ್ಲಿಯೇ ಮೊದಲ ಬಾರಿಗೆ 11 ಕೇಂದ್ರ ಕಾರ್ಮಿಕ ಸಂಘಟನೆಗಳಾದ ಸಿಐಟಿಯು, ಎಐಟಿಯುಸಿ, ಹೆಚ್‌ಎಂಎಸ್, ಐಎನ್‌ಟಿಯುಸಿ, ಬಿಎಂಎಸ್, ಟಿಯುಸಿಸಿ, ಎಐಸಿಸಿಟಿಯು ಮತ್ತು ಸೇವಾ, ಎಲ್‌ಐಸಿ, ಬ್ಯಾಂಕ್, ಬಿಎಸ್‌ಎನ್‌ಎಲ್, ಅಂಚೆ ಆದಾಯ ತೆರಿಗೆ ಇಲಾಖೆ, ಆಟೋ, ಅಂಗನವಾಡಿ, ಬಿಸಿಯೂಟ, ಹಮಾಲಿ, ಕಟ್ಟಡ, ಬೀಡಿ ಕಾರ್ಮಿಕರು, ಗ್ರಾಮ ಪಂಚಾಯಿತಿ ನೌಕರರು, ರಕ್ಷಣಾ ಇಲಾಖಾ ನೌಕರರು, ಸಾರ್ವಜನಿಕ ಕೈಗಾರಿಕೆಗಳಾದ ಬಿಇಎಲ್, ಹೆಚ್‌ಎಎಲ್, ಸಂಪೂರ್ಣ ಬಂದ್ ಆಗಿದ್ದು, ಬಿಇಎಂಎಲ್‌ನ 4 ಘಟಕಗಳು, ಐಟಿಐ, ಹೆಚ್‌ಎಂಟಿ, ಬಿಹೆಚ್‌ಇಎಲ್ ಗುತ್ತಿಗೆ ಕಾರ್ಮಿಕರನ್ನೊಳಗೊಂಡಂತೆ ಎಲ್ಲಾ ಕಾರ್ಮಿಕರು ಸಂಪೂರ್ಣ ಮುಷ್ಕರದಲ್ಲಿ ಪಾಲ್ಗೊಂಡಿದ್ದಾರೆ. ಬೆಂಗಳೂರಿನ ಬಿಡದಿ, ಬೊಮ್ಮಸಂದ್ರ, ಪೀಣ್ಯ-ದಾಸರಹಳ್ಳಿ, ನೆಲಮಂಗಲ, ವೈಟ್‌ಫೀಲ್ಡ್, ಹೊಸಕೋಟೆ, ಕುಂಬಳಗೋಡು, ಹಾರೋಹಳ್ಳಿ, ಜಿಗಣಿ ಕೈಗಾರಿಕಾ ಪ್ರದೇಶಗಳ ಕೈಗಾರಿಕೆಗಳು ಸಂಪೂರ್ಣ ಬಂದ್ ಆಗಿದೆ.

ಘನ ಕೈಗಾರಿಕೆಗಳಾದ ಬಾಷ್, ಐಟಿಸಿ, ಎಲ್&ಟಿ, ಫೆಡರಲ್ ಮೊಗಲ್, ವೋಲ್ವೋ, ಟಯೋಟಾ ಕಿರ್ಲೋಸ್ಕರ್, ಎಸ್‌ಕೆಎಫ್, ವಿಡಿಯಾ, ವಿಪ್ರೊ, ಕೋಕೊಕೋಲಾ, ಮೈಸೂರಿನ ವಿಕ್ರಾಂತ್, ದಾವಣಗೆರೆಯ ಹರಿಹರ ಪಾಲಿಫೈಬರ್ಸ್, ಹಟ್ಟಿ ಚಿನ್ನದ ಗಣಿ, ಗುಲ್ಬರ್ಗಾದ ರಾಜಶ್ರೀ ಸಿಮೆಂಟ್, ಬೆಳಗಾಂನ ಇಂಡಲ್ಕೋ, ಜಿಂದಾಲ್ ಕಾರ್ಖಾನೆಗಳು ಸಂಪೂರ್ಣ ಬಂದ್ ಆಗಿದೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದೂರು, ಶಿಡ್ಲಘಟ್ಟ, ಗುಡಿಬಂಡೆ, ಬಾಗೇಪಲ್ಲಿಗಳು ಬಂದ್ ಆಗಿದೆ. ರಾಯಚೂರು, ಜಿಲ್ಲೆಯ ಮಾನ್ವಿ, ದೇವದುರ್ಗ, ಸಿಂದನೂರು ಮತ್ತು ಲಿಂಗಸಗೂರು ಬಂದ್ ಆಗಿದೆ. ಬಳ್ಳಾರಿ, ಹಾಸನ, ಚನ್ನರಾಯಪಟ್ಟಣ, ಸಕಲೇಶಪುರ, ಮದ್ದೂರು, ಅಫಜಲಪುರ, ಕುಂದಾಪುರ, ಉಡುಪಿ, ಮಂಗಳೂರು, ಬೆಳ್ತಂಗಡಿ, ಸುಳ್ಯ ಬಂಟ್ವಾಳ, ಪುತ್ತೂರು, ಮೂಡಬಿದರೆ, ಉಡುಪಿ, ಕುಂದಾಪುರ, ಗದಗ ಜಿಲ್ಲೆಯ ರೋಣ ತಾಲ್ಲೂಕು, ಕೋಲಾರ, ಶಿಡ್ಲಘಟ್ಟ, ಶ್ರೀನಿವಾಸಪುರ, ಮಾಲೂರು, ಬಂಗಾರ ಪೇಟೆ, ಮುಳಬಾಗಿಲು, ಕೆಜಿಎಫ್, ಬಂಗಾರಪೇಟೆ, ತುಮಕೂರು, ತಿಪಟೂರು, ಕೊರಟಗೆರೆಗಳು ಬಂದ್ ಆಗಿದೆ. ಬೆಂಗಳೂರಿನ ಮಾಗಡಿ, ಹೊಸಕೋಟೆ, ಆನೇಕಲ್, ನೆಲಮಂಗಲ, ದೊಡ್ಡಬಳ್ಳಾಪುರ, ಹೊಸರೋಡ್ ಸಂಪೂರ್ಣ ಬಂದ್ ಆಗಿದೆ. ಕೊಪ್ಪಳ, ಗಂಗಾವತಿ, ಯಲಬುರ್ಗ, ಕುಷ್ಟಗಿ, ತಾಲೂಕುಗಳು ಸಂಪೂರ್ಣ ಬಂದ್.



ಪುಟ 12 ಕ್ಕೆ



ಬಾಗೇಪಲ್ಲಿಯಲ್ಲಿ ಪ್ರತಿಭಟನಾ ಮೆರವಣಿಗೆ



ರಾಜ್ಯವ್ಯಾಪಿ ಮುಷ್ಕರದ ಉತ್ಸಾಹ

10 ಬೇಡಿಕೆಗಳ ಈಡೇರಿಕೆಗಾಗಿ ಬಾಗೇಪಲ್ಲಿ ತಾಲ್ಲೂಕಿನಾದ್ಯಂತ ಸಂಪೂರ್ಣ ಬಂದ್

ಕೇಂದ್ರ ಮತ್ತು ರಾಜ್ಯ ಸರ್ಕಾರದ ಜನರ ವಿರೋಧಿ ಮತ್ತು ಕಾರ್ಮಿಕ ವಿರೋಧಿ ನೀತಿಗಳನ್ನು ಅಖಿಲ ಭಾರತ ಮಟ್ಟದಲ್ಲಿ ಸಿ.ಐ.ಟಿ.ಯು ಹಾಗೂ ಹನ್ನೊಂದು ಕೇಂದ್ರ ಕಾರ್ಮಿಕ ಸಂಘಟನೆಗಳು ಹಾಗೂ ಬ್ಯಾಂಕ್, ಎಲ್.ಐ.ಸಿ, ಬಿ.ಎಸ್.ಎನ್.ಎಲ್ ಮುಂತಾದ ಎಲ್ಲಾ ಕಾರ್ಮಿಕರು ಒಟ್ಟಾಗಿ ಸೇರಿ ಫೆಬ್ರವರಿ 28 ರಂದು ಸೇರಿ ಅಖಿತ ಭಾರತ ಮುಷ್ಕರಕ್ಕೆ ಕರೆ ನೀಡಿದ ಹಿನ್ನಲೆಯಲ್ಲಿ ಬಾಗೇಪಲ್ಲಿ ಪಟ್ಟಣ ಸೇರಿದಂತೆ ಹೋಬಳಿ ಕೇಂದ್ರಗಳು ಸಂಪೂರ್ಣ ಬಂದ್ ಆಗಿದ್ದವು. ಸರ್ಕಾರಿ ಕಛೇರಿಗಳು, ಶಾಲಾ ಕಾಲೇಜುಗಳು, ಅಂಗಡಿ ಮುಂಗಟ್ಟು ಸೇರಿದಂತೆ ಬೆಳಿಗ್ಗೆ 6–00 ರಿಂದ ಸಂಜೆ 6–00 ರ ತನಕ ಸಂಪೂರ್ಣ ಬಂದ್ ಆಗಿದ್ದವು. ಬಾಗೇಪಲ್ಲಿ ತಾಲ್ಲೂಕಿನ ಸಿ.ಐ.ಟಿ.ಯು ನೇತೃತ್ವದ ಬಂದ್‌ಗೆ ಗ್ರಾಮ ಪಂಚಾಯ್ತಿ, ಅಕ್ಷರದಾಸೋಹ, ಅಂಗನವಾಡಿ ಕಾರ್ಯಕರ್ತರು, ಅಶಾ ಕಾರ್ಯಕರ್ತರು, ಜನವಾದಿ ಮಹಿಳಾ ಸಂಘಟನೆ ಕಾರ್ಯಕರ್ತರು ಒಟ್ಟಾಗಿ ಸೇರಿ ಸುಂದರಯ್ಯ ಭವನದಿಂದ ಗುಳೂರು ವೃತ್ತದ ವರೆಗೂ ಮೆರವಣಿಗೆ ನಡೆಸಿ ಬಂದ್‌ನಲ್ಲಿ ಪಾಲ್ಗೊಂಡಿದ್ದರು. ನಂತರ ಟೋಲ್‌ಗೇಟ್ ವರ್ಕಸ್ಸ್ ಯೂನಿಯನ್‌ನಿಂದಲೂ ಟಿ.ಬಿ ಕ್ರಾಸ್‌ನಿಂದ ಗೂಳೂರು ವೃತ್ತದ ವರೆಗು ಮೇರವಣಿಗೆ ನಡೆಸಿ ಬಂದ್‌ನಲ್ಲಿ ಭಾಗವಹಿಸಿದರು. ಕಡೆಯದಾಗಿ ಸಿ.ಪಿ.ಐ(ಎಂ), ಡಿ.ವೈ.ಎಫ್.ಐ, ಕೆ.ಪಿ.ಆರ್.ಎಸ್, ಎಸ್.ಎಫ್.ಐ ಹಾಗೂ ಕೃಷಿ ಕೂಲಿಕಾರ್ಮಿಕ ಸಂಘದ ಕಾರ್ಯಕರ್ತರು ಸಿ.ಐ.ಟಿ.ಯು.ಗೆ ಬೆಂಬಲ ಸೂಚಿಸಿ ಭಾರಿ ಮೆರವಣಿಗೆ ನಡೆಸಿ ಬಂದ್‌ಗೆ ಬೆಂಬಲ ವ್ಯಕ್ತಪಡಿಸಿದರು. ಸಿ.ಐ.ಟಿ.ಯು. ನೇತೃತ್ವದಲ್ಲಿ ನಡೆದ ಬಂದ್ ಸಂಪೂರ್ಣ ಯಶಸ್ವಿಯಾಯಿತು. ಬಂದ್ ನೇತೃತ್ವ ವಹಿಸಿದ ಸಿ.ಐ.ಟಿ.ಯು. ತಾಲ್ಲೂಕು ಕಾರ್ಯದರ್ಶಿ ವೈ.ಆರ್.ವೆಂಕಟೇಶ್ ಬಾಬು, ಸಂಚಾಲಕರಾದ ಜಿ.ಮುಸ್ತಾಫ, ಗ್ರಾಮ ಪಂಚಾಯ್ತಿ ನೌಕರ ಸಂಘದ ಅಧ್ಯಕ್ಷರಾದ ವೆಂಕಟರಾಮಯ್ಯ, ಬಾಬುರೆಡ್ಡಿ, ಅಂಗನವಾಡಿ ನೌಕರ ಸಂಘದ ಅಧ್ಯಕ್ಷೆ ವೆಂಕಟಲಕ್ಷ್ಮಮ್ಮ, ಕಾರ್ಯದರ್ಶಿ ರತ್ನಮ್ಮ, ಬಿಸಿಯೂಟ ನೌಕರ ಸಂಘದ ಅಧ್ಯಕ್ಷರಾದ ಮುನಿಗೋವಿಂದಮ್ಮ, ಕಾರ್ಯದರ್ಶಿ ಬಿ.ಸುದಮ್ಮ, ವರಲಕ್ಷ್ಮೀ, ಟೋಲ್‌ಗೇಟ್ ವರ್ಕಸ್ಸ್ ಯೂನಿಯನ್ ಗೌರವಾಧ್ಯಕ್ಷರಾದ ರಾಜು, ಅಧ್ಯಕ್ಷರಾದ ಶಿವಾರೆಡ್ಡಿ, ಕಾರ್ಯದರ್ಶಿ ನಂಜುಂಡ ಹಾಗೂ ಸಿ.ಪಿ.(ಐ)ಎಂ ತಾಲ್ಲೂಕು ಕಾರ್ಯದರ್ಶಿ ರಘುರಾಮರೆಡ್ಡಿ, ಮಂಜುನಾಥರೆಡ್ಡಿ, ಮೊಹಮದ್ ಆಕ್ರಂ, ಗೋವರ್ಧನಚಾರಿ, ರಾಮಲಿಂಗಪ್ಪ, ಅಶ್ವತ್ಥಪ್ಪ, ಜಿ.ಕೃಷ್ಣಪ್ಪ ಹಾಗೂ ಟೆಂಪೋ ಮಾಲೀಕರ ಸಂಘದ ಅಧ್ಯಕ್ಷರಾದ ಆಂಜನೇಯರೆಡ್ಡಿ, ಮೇಕಾನಿಕ್ ಬಾಬು, ಕಂಚ್ಚುಕೋಟೆ ಮೂರ್ತಿ, ಸುಬ್ಬರಾಯಪ್ಪ ಮುಂತಾದವರು ಬಂದ್‌ನಲ್ಲಿ ಪಾಲ್ಗೊಂಡಿದ್ದರು.

★

ಹಗರಿಬೊಮ್ಮನಹಳ್ಳಿ ಬಂದ್ ಸಂಪೂರ್ಣ ಯಶಸ್ವಿ

ಹಗರಿಬೊಮ್ಮನಹಳ್ಳಿ ಅಖಿಲ ಕರ್ನಾಟಕ ರಾಜ್ಯ ಸರಕಾರಿ ನೌಕರರ ಒಕ್ಕೂಟ ತಾಲೂಕ ಘಟಕ ಹಾಗೂ ಸಿ.ಪಿ.ಐ.ಎಂ. ಮತ್ತು ಇತರ ಕಾರ್ಮಿಕ ಸಂಘಟನೆಗಳು ಬೆಂಬಲ ಸೂಚಿಸಿದ್ದರು. ತಾಲೂಕಿನಲ್ಲಿ ಬಂದ್ ಸಂಪೂರ್ಣ ಯಶಸ್ವಿಯಾಗಿದೆ.

ಬಸವೇಶ್ವರ ವೃತ್ತದಲ್ಲಿ ಬಹಿರಂಗ ಸಭೆ ನಡೆಯಿತು. ಮುಂದಾಳತ್ವವಹಿಸಿದ್ದ ಅಖಿಲ ಕರ್ನಾಟಕ ರಾಜ್ಯ ಸರಕಾರಿ ನೌಕರರ ಒಕ್ಕೂಟ ತಾಲೂಕ ಅಧ್ಯಕ್ಷರಾದ ಈ.ಕೆ.ಮೂರ್ತಿ ಮಾತನಾಡಿ ಗ್ರಾ.ಪಂ. ಕಾರ್ಯದರ್ಶಿಗಳ ಹಾಗೂ ಪಿಡಿಓಗಳ ಮೇಲಿಂದ ಮೇಲೆ ನಡೆಯುತ್ತಿರುವ ದೌರ್ಜನ್ಯ ಮಾಡಿದವರ ಮೇಲೆ ಕ್ರಮ ಜರುಗಿಸಬೇಕು, ಖಾಲಿ ಹುದ್ದೆಗಳ ರದ್ದತಿ ನಿಲ್ಲಬೇಕು, ರಾಜ್ಯದಲ್ಲಿ ಮಂಜೂರಾಗಿ ಖಾಲಿ ಇರುವ 1,50,000 ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕು, 6ನೇ ವೇತನ ಆಯೋಗವನ್ನು ರಾಜ್ಯದಲ್ಲಿ ಜಾರಿಗೆ ತರಬೇಕು ಎಂದು ಒತ್ತಾಯಿಸಿದರು.

ವಿವಿಧ ಸಂಘಟನೆಗಳ ಮುಖಂಡರು ಹಾಗೂ ಕಾರ್ಯಕರ್ತರು ಸುಮಾರು 2 ಸಾವಿರಕಿಂತಲೂ ಹೆಚ್ಚು ಬೆಂಬಲಿಗರೊಂದಿಗೆ ಇಲ್ಲಿಯ ಈಶ್ವರ ದೇವಸ್ಥಾನದಿಂದ ಮೆರವಣಿಗೆ ಸಾಗಿ ಪಟ್ಟಣದ ರಾಮನಗರ, ಕೂಡ್ಲಿಗಿ ಸರ್ಕಲ್, ಚಿತ್ರ ಮಂದಿರದ ರಸ್ತೆ ಸೇರಿದಂತೆ ಬಸವೇಶ್ವರ ಬಜಾರದ ಮೂಲಕ ಅನೇಕ ಪ್ರಮುಖ ರಸ್ತೆಗಳಲ್ಲಿ ಬೇಡಿಕೆಗಳ ಘೋಷಣೆಗಳನ್ನು ಕೂಗುತ್ತ ಮೆರವಣಿಗೆ ಸಾಗಿತ್ತು.

ಕೆ.ಎಂ.ಸ್ವಾಮಿ, ಅಂಗನವಾಡಿ ನೌಕರರ ಸಂಘದ ಅಧ್ಯಕ್ಷೆ ಉಮಾದೇವಿ, ಎಸ್.ಆರ್.ಗೀತಾ, ಸೌಭಾಗ್ಯಮ್ಮ, ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದ ಸುನಿತಾ, ಮಂಜುಳ, ಲಲಿತಮ್ಮ, ಗ್ರಾ.ಪಂ.ನೌಕರರ ಸಂಘದ ಕೊಟ್ರೇಶ್, ಕನಕಪ್ಪ, ಉಮೇಶ್. ಹೂವು ಹಣ್ಣು ಟೀ ಇತರೆ ಮಾರಾಟಗಾರರ ಸಂಘದ ಟಿ.ಕಾಸಿಂಸಾಬ್, ಯು.ಮಂಜುನಾಥ್, ರೋಷನ್, ನಾಗರಾಜ್. ಆಟೋ ಚಾಲಕರ ಮತ್ತು ಮಾಲಿಕರ ಸಂಘದ ಕೈಲಾಸ್, ಮಂಜುನಾಥ್, ಶ್ರೀನಿವಾಸ್ ಅಬ್ದುಲ್ ರಜಾಕ್. ಆಶಾ ಕಾರ್ಯಕರ್ತೆಯರ ಸಂಘದ ಎಂ.ಸರೋಜ, ಜಿ.ಸರೋಜ. ಅಂಗಡಿ ಗುಮಾಸ್ತರ ಸಂಘದ ಹುಲುಗಪ್ಪ, ರಾಮಣ್ಣ. ರಾಜ್ಯ ಕಟ್ಟಡ ಕಾರ್ಮಿಕರ ಸಂಘದವರು, ಜೈ ಭೀಮಾ ಹಮಾಲರ ಸಂಘ, ಪೌರ ಕಾರ್ಮಿಕರ ಸಂಘ, ಬೈಲ್ ಪತ್ತಾರ್ ಕಾರ್ಮಿಕರ ಸಂಘ ಸೇರಿದಂತೆ ಇನ್ನು ಅನೇಕ ಸಂಘಟನೆಗಳು ಮುಖಂಡರು ಭಾಗವಹಿಸಿದ್ದರು.

★

ಉತ್ತರ ಕನ್ನಡ ಜಿಲ್ಲೆ.

ಅಂಕೋಲಾ : ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ವತಿಯಿಂದ ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ನಗರದಲ್ಲಿ ಮೆರವಣಿಗೆಯನ್ನು ನಡೆಸಿ ನಂತರ ತಹಶೀಲ್ದಾರ ಕಛೇರಿ ಎದುರಿನ ರಸ್ತೆಯನ್ನು ತಡೆಹಿಡಿದು ಪ್ರತಿಭಟನೆ ಸಭೆಯನ್ನು ನಡೆಸಿದರು.

ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಶಾಂತಾರಾಮ ನಾಯಕ ಮಾತನಾಡಿದರು.

ಸಿ.ಐ.ಟಿ.ಯು. ಜಿಲ್ಲಾ ಸಮಿತಿ ಸದಸ್ಯ ಎಚ್.ಬಿ. ನಾಯಕ, ಕಾರ್ಮಿಕ ಸಂಘಟನೆಗಳ ಪ್ರಮುಖರಾದ ಲಲಿತಾ ಶೆಡಗೇರಿ, ಕಲ್ಪನಾ ನಾಯ್ಕ, ಶ್ಯಾಮಲಾ ನಾಯಕ, ಭರತ ಗೌಡ, ಪ್ರಕಾಶ ನಾಯ್ಕ, ಸುನೀಲ ನಾಯ್ಕ ಹೊನ್ನೆಕೇರಿ, ನಾಗೇಶ ಗೌಡ, ಲಕ್ಷ್ಮಿ ನಾಯ್ಕ, ಮಂಗಲಾ ಬಾನಾವಳಿಕರ, ವಿಠ್ಠಲ ನಾಯ್ಕ, ಗೌರೀಶ ನಾಯಕ, ದೇವರಾಯ ನಾಯಕ, ಮುರ್ಕುಂಡಿ ನಾಯ್ಕ, ಸಂದೀಪ ಬಂಟ ಮುಂತಾದವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಅಂಕೋಲಾ



★

ಸಿ.ಐ.ಟಿ.ಯು ನೇತೃತ್ವದಲ್ಲಿ ಕೊಪ್ಪಳ ಬಂದ್ ಯಶಸ್ವಿ

ಕೊಪ್ಪಳ ಜಿಲ್ಲೆಯಲ್ಲಿ ವ್ಯಾಪಕ ಬೆಂಬಲ ವ್ಯಕ್ತವಾಗಿದೆ. ಸಿ.ಐ.ಟಿ.ಯು ನೇತೃತ್ವದಲ್ಲಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿಯು ಬಂದ ಯಶಸ್ವಿಯಾಗಿ ನಡೆದಿದೆ. ಶಾಲಾ–ಕಾಲೇಜ್ ಸೇರಿದಂತೆ ಎಲ್ಲಾ ವ್ಯಾಪಾರ ವಹಿವಾಟು, ಬಸ್ ಸಂಚಾರ ಸ್ಥಗಿತಗೊಂಡಿತ್ತು. ಬೆಳಗ್ಗೆ 6 ಗಂಟೆಯಿಂದಲೇ ಕಾರ್ಯಕರ್ತರು ವ್ಯಾಪಾರಸ್ಥರಲ್ಲಿ, ಶಾಲಾ–ಕಾಲೇಜು ಸಂಸ್ಥೆಗಳ, ಸಾರ್ವಜನಿಕರ ಹತ್ತಿರ ಮುಷ್ಕರಕ್ಕೆ ಬೆಂಬಲಿಸುವಂತೆ ಮನವಿ ಮಾಡಿದರು. ಕೊಪ್ಪಳದಲ್ಲಿ ಬೆಳಗ್ಗೆ ಬಸ್ ನಿಲ್ಲಿಸುವಂತೆ ಚಾಲಕರಲ್ಲಿ ಮತ್ತು ಅಧಿಕಾರಿಗಳಲ್ಲಿ ಮನವಿ ಮಾಡುತ್ತಿದ್ದಾಗ ಪೋಲಿಸರು ಹೋರಾಟವನ್ನು ಹತ್ತಿಕಲು ಪ್ರಯತ್ನವನ್ನು ನಡೆಸಿದರು. 1 ಗಂಟೆಗೂ ಹೆಚ್ಚು ಕಾಲ ಬಸ್ ನಿಲ್ದಾಣದ ಮುಂದೆ ಕಾರ್ಯಕರ್ತರು ಮತ್ತು ಪೋಲಿಸರ ಮದ್ಯೆ ಮಾತಿನ ಚಕಮಕಿ ನಡೆಯಿತು. ಪೋಲಿಸರ ವಿರುದ್ಧ ಮತ್ತು ಕೆ.ಎಸ್.ಆರ್.ಟಿ.ಸಿ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿದಾಗ ಬಸ್ ಸಂಚಾರ ಸ್ಥಗಿತಗೊಳಿಸಿರುವುದಾಗಿ ಅಧಿಕಾರಿಗಳು ಮನವಿ ಮಾಡಿದರು. ನಂತರ 12 ಗಂಟೆಗೆ ಬಸ್ ನಿಲ್ದಾಣದ ಮೂಲಕ ಮೆರವಣಿಗೆ ಹೊರಟು ಅಶೋಕ ವೃತ್ತದ ಮಾರ್ಗವಾಗಿ ಸಾಗಿ ಸರಕಾರದ ವಿರುದ್ಧ ಘೋಷಣೆ ಕೂಗಿ, ಭೀಮರಾಯ ವೃತ್ತದಲ್ಲಿ ಸಭೆ ಸೇರಿದರು.

ಕೊಪ್ಪಳ, ಗಂಗಾವತಿ, ಕುಷ್ಟಗಿ, ಯಲಬುರ್ಗಾದಲ್ಲಿ ಸಂಪೂರ್ಣ ಬಂದ್ ಆಗಿದ್ದೆ.

ಪ್ರತಿಭಟನೆಯ ನೇತೃತ್ವವನ್ನು ಸಿ.ಐ.ಟಿ.ಯು ಜಿಲ್ಲಾ ಕಾರ್ಯದರ್ಶಿ ಗೌಸು ಸಾಬ್, ಖಾಸಿಂ ಸರದಾರ, ಹುಲಗಪ್ಪ.ಎ ಗಂಗಾಧರ ಸ್ವಾಮಿ, ಆರ್.ಕೆ.ದೇಸಾಯಿ, ಹುಲಗಪ್ಪ ಗೋಕಾವಿ, ಹನ್ಮಂತ ಕಲ್ಮಂಗಿ ಶೇಕಪ್ಪ ಚೌಡ್ಕಿ, ಬಾಳಪ್ಪ ಹುಲಿಹೈದರ್, ಹನಮಂತ್ ಭಜಂತ್ರಿ ಮಹಾದೇವಿ, ಕಾಶಮ್ಮ, ದೇವಮ್ಮ, ರೇಣುಕಮ್ಮ, ಲಕ್ಷ್ಮಿ, ಅಮರೇಶ್ ಕಡಗದ್, ದುರಗೇಶ್ ಡಗ್ಗಿ, ಗ್ಯಾನೇಶ್ ಕಡಗದ್, ರಾಶೀದ್ ಖಾಜಿ. ಸುಬಾನ್ ಸೈಯ್ಯದ್, ಮಾರುತಿ ಮ್ಯಾಗಳಮನಿ ವಹಿಸಿದ್ದರು. ಮುಷ್ಕರಕ್ಕೆ ಬಿಸಿಯೂಟ, ಗ್ರಾ.ಪಂ ನೌಕರರ ಸಂಘ, ಅಂಗನವಾಡಿ, ಎಸ್.ಎಫ್.ಐ, ಡಿ.ವೈ.ಎಫ್.ಐ. ಕಿರ್ಲೋಸ್ಕರ್ ಕಾರ್ಮಿಕರು, ಕಟ್ಟಡಕಾರ್ಮಿಕರು, ಹಮಾಲಿ ಕಾರ್ಮಿಕರು ಭಾಗವಹಿಸಿ ಬೆಂಬಲ ನೀಡಿದ್ದರು.

★

ತುಮಕೂರು ಜಿಲ್ಲೆ

ಶಿರಾ :– ತಾಲ್ಲೂಕು ಸಿಐಟಿಯು ಸಮಿತಿಯಿಂದ ನಗರದ ಪ್ರವಾಸಿ ಮಂದಿರದಿಂದ ಮೇರವಣಿಗೆ. ತೆರಳಿ ಬಸ್‌ಸ್ಟಾಂಡ್ ಎದುರು ಪ್ರತಿಭಟನಾ ಸಭೆ ನಡೆಸಲಾಯಿತು. ನೂರಾರು ಕಾರ್ಮಿಕರು ಹೋರಾಟದಲ್ಲಿ ಭಾಗವಹಿಸಿದ್ದರು. ಹೋರಾಟದ ನೇತೃತ್ವನ್ನು ಶಿರಾ ಸಿಐಟಿಯು ತಾಲ್ಲೂಕು ಸಮಿತಿಯ ನಿಸಾರ್ ಅಹಮದ್, ಬೀಡಿ ಕಾರ್ಮಿಕರ ಸಂಘಟನೆಯ ಲಕ್ಷ್ಮಮ್ಮ, ಹೊನ್ನಪ್ಪ, ಅಂಗನವಾಡಿ ನೌಕರರ ಸಂಘಟನೆಯ ಮಂಜುಳ, ನಾಗರತ್ನಮ್ಮ, ಹಮಾಲೀ ಕಾರ್ಮಿಕ ಸಂಘಟನೆಯ ಹನೀಫ್ ಮುಂತಾದವರು ಭಾಗವಹಿಸಿದ್ದರು.

ಪಾವಗಡ :– ಮುಷ್ಕರದ ಭಾಗವಾಗಿ ಪಾವಗಡನಗರದ, ಪ್ರವಾಸಿ ಮಂದಿರದಿಂದ ತಹಶೀಲ್ದಾರ್ ಕಛೇರಿವರೆಗೆ ಮೆರವಣಿಗೆ ತೆರಳಿ ರಸ್ತೆ ತಡೆ ಚಳುವಳಿ ನಡೆಸುತ್ತಿದ್ದಾಗ ಸಾವಿರಕ್ಕೂ ಹೆಚ್ಚು ಕಾರ್ಮಿಕರನ್ನು ಬಂದಿಸಿ ನಂತರ ಬಿಡುಗಡೆಗೊಳಿಸಿದರು. ತಾಲ್ಲೂಕು ಸಿಐಟಿಯು ಅಧ್ಯಕ್ಷರಾದ ಸುಶೀಲ ಅಂಗನವಾಡಿ ನೌಕರ ಸಂಘನೆಯ ಗುಲ್ಜಾರ್, ಸುಬ್ಬಮ್ಮ, ಹಮಾಲಿ ಕಾರ್ಮಿಕರ ಫೆಡರೇಷನ್‌ನ ಸುಬ್ಬರಾಯಪ್ಪ, ನಾಗರಾಜ್, ಬಸ್‌ಸ್ಟಾಂಡ್ ಹಮಾಲಿ ಕಾರ್ಮಿಕ ಸಂಘಟನೆಯ ರಾಮಾಂಜಿನಿ, ಮುದ್ದೋಟಪ್ಪ, ಗ್ರಾಮ ಪಂಚಾಯಿತಿ ನೌಕರರ ಸಂಘಟನೆಯ ಮುಖಂಡ ಹನುಮಂತರಾಯಪ್ಪ, ಪೂಜಪ್ಪ, ಅಕ್ಷರ ದಾಸೋಹ ನೌಕರರ ಸಂಘಟನೆಯ ಕೆಂಚಮ್ಮ, ಆಶಾ ಕಾರ್ಮಿಕ ಸಂಘಟನೆಯ ಕಮಲ, ಮುಂತಾದವರು ಭಾಗವಹಿಸಿದ್ದರು.

ಮಧುಗಿರಿ :– ತಾಲ್ಲೂಕು ಸಿಐಟಿಯು ಸಮಿತಿ ನೇತೃತ್ವದಲ್ಲಿ ಪಟ್ಟಣದ ಬಸ್‌ಸ್ಟಾಂಡ್‌ನಿಂದ ತುಮಕೂರು ಸರ್ಕಲ್‌ವರೆಗೆ ಪ್ರತಿಭಟನಾ

ಪುಟ 12 ಕ್ಕೆ



ಹಗರಣವ ಮಾಡುವುದ ಕಂಡು... ನಗೆಯು ಬರುತಿದೆ...

!! ಕರ್ನಾಟಕ ರಾಜ್ಯದ ಬಿಜೆಪಿ ರ್‌ನ ಅಡಿರುಲ್ಲಿ ಜನರ ಸೌಭಾಗ್ಯಕ್ಕೆ ಮೊದಲೇ ಇಲ್ಲ !!! ದೇಶದ ಇನ್ನೆಲ್ಲೂ ಹ ಭರಪೂರ ಮನರಂಜನೆ ವರಿಂದ ಜನರಿಗೆ ಸಿಗುವುದು ಇಲ್ಲವೇನೋ!!.. ಯಡಿಯೂರಪ್ಪನವರು ತ್ತರವು ಮಾಡಿ ಸದಾನಂದಗೌಡರನ್ನು ಮ ಕುರ್ಚಿಯ ಮೇಲೆ ಕೂರಿಸಿದಾಗ ರಾಜ್ಯದಲ್ಲಿ ಇಲ್ಲಿಯವರೆಗಿನ ಆಡಳಿತವೇ ಮುವರಿಯಲಿದೆ ಎಂದಿದ್ದರು. ಆಹಾ !! ಕೊಟ್ಟ ಮಾತಿನಂತೆ ಹಾಗೇ ನಡೆಯುತ್ತಿದೆ ಎಂದರ ಸರ್ಕಾರ.

ನ ನಿತ್ಯವೂ ಒಂದಲ್ಲ ಒಂದು ಕ್ಷಮಿಸಿ ಲ್ಲ ಹಲವು ನೀಚ, ಭ್ರಷ್ಟ ಹಗರಣಗಳ ... ಭಿನ್ನಮತ ಕಿತ್ತಾಟ... ಜಾತಿವಾದಿ ಧೀಶರ ಪಾದಚರಣಗಳಿಗೆ ಬೀಳಾಟ... ... ಕುರ್ಚಿಗಾಗಿ ಗೋಳಾಟ... ರಂಪಾಟ... ತ್ತೆಯ ಲಜ್ಜೆಯ ಲವಲೇಶವೂ ಇಲ್ಲದ ಗ್ರೇಡಿ ಮಂತ್ರಿವರ್ಯರು, ಬಿಜೆಪಿ ರಿಗಳ ಮೆರೆದಾಟ... ಈ ಎಲ್ಲವುಗಳ ಹೆಚ್ಚುತ್ತಲೇ ಇರುವ ಜನಗಳ ಸಂಕಟ.... ಮಾತುಗಳಿಗೆ ಆಧಾರ ಬೇಕಲ್ಲವೇ ? ಇಗೋ ತಿ.

ಯೂಪ್ಪನವರ ಪುತ್ರಿಗೆ
ರ್ತರ ಕೋಟಾದಲ್ಲಿ ನಾಲ್ಕು ಸೈಟು

ವಮೊಗ್ಗ ನಗರದ ಹಾಗೂ ಶಿಕಾರಿಪುರದ ಈಗಿನ ಅತ್ಯಂತ ಕುತೂಹಲಭರಿತ ವಿಷಯ ಏನೆಂದರೆ ಬಿಜೆಪಿಯ ಘಟಾನುಘಟಿ ನೇತಾರರಾದ ಯಡಿಯೂರಪ್ಪ ಮತ್ತು ಅವರ ಬಂಧುಗಳಿಗೆ ಸೇರಿದ ಹಾಗೂ ಮತ್ತೊಬ್ಬ ಧುರೀಣ ಈಶ್ವರಪ್ಪನವರಿಗೆ ಸೈಟು, ಜಮೀನುಗಳು, ಅವರ ಶಿಕ್ಷಣ ಸಂಸ್ಥೆಗಳು, ವಾಣಿಜ್ಯ ಸಂಕೀರ್ಣಗಳು ಇತ್ಯಾದಿ ಸಾಮ್ರಾಜ್ಯ ಎಲ್ಲೆಲ್ಲಿಗೆಲ್ಲಾ ವಿಸ್ತರಿಸುತ್ತಿದೆ ಎಂಬುದು. ಇರಲಿ. ಇದು ಜನ ಹೇಳುವ ಮಾತು. ಈಗ ದಾಖಲೆ ಸಹಿತವಾದ ಪ್ರಕರಣಗಳ ವಿಷಯಕ್ಕೆ ಬರೋಣ.



ಕೃಪೆ : ಪ್ರಜಾವಾಣಿ

ಅವರ ಹೆಸರು ಎಸ್.ವೈ. ಅರುಣಾದೇವಿ. ತಂದೆ ಡಾ.ಬಿಎಸ್. ಯಡಿಯೂರಪ್ಪ. ತಂದೆ, ಮಗಳು ಮತ್ತು ಇತರ ಯಡಿಯೂರಪ್ಪನವರ ಸಹಾಯಕರಾಗಿದ್ದ ನಾಲ್ಕು ಜನ ಸೇರಿದಂತೆ ಒಟ್ಟಾರೆ ಎಂಟು ಜನರ ಮೇಲೆ ಲೋಕಾಯುಕ್ತ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿದೆ. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಅವರ ಸಹಾಯಕರಾದ ನಾಲ್ವರಿಗೆ ಪತ್ರಕರ್ತರ ಕೋಟಾದ ಅಡಿ ಕೆಎಚ್‌ಬಿ ನಿವೇಶನ ನೀಡಲು ಶಿಫಾರಸ್ಸು ಮಾಡುತ್ತಾರೆ. ಅವರಿಗೆ ಸೈಟು ಮಂಜೂರಾಗುತ್ತದೆ. ಆ ನಾಲ್ವರು ನಿವೇಶನವನ್ನು ಕ್ರಯ ಮಾಡಿಕೊಳ್ಳುವ ಮುಂಚೆಯೇ ಅವನ್ನು ಅರುಣಾದೇವಿಯವರಿಗೆ ಮಾರಾಟ ಮಾಡಿ ಬಿಡುತ್ತಾರೆ !!!

ಹೀಗೂ ನಡೆಯಲು ಸಾಧ್ಯವೇ ಎನ್ನಬೇಡಿ, ನಡೆಯಲು ಸಾಧ್ಯ. ಏಕೆಂದರೆ ಇದು ಬಿಜೆಪಿ ದರ್ಬಾರ್ ಸ್ವಾಮಿ. ದೇಶಭಕ್ತರ ಬಿಜೆಪಿ ದರ್ಬಾರ್. ಇದು ವೃಥಾ ಆರೋಪ ಏನಲ್ಲ. ಲೋಕಾಯುಕ್ತ ಪೋಲಿಸರು ಪ್ರಾಥಮಿಕ ವಿಚಾರಣೆ ನಡೆಸಿ ಸಲ್ಲಿಸಿರುವ ವರದಿ ಆಧರಿಸಿ ಪ್ರಕರಣ ದಾಖಲಾಗಿದೆ. ಯಡಿಯೂರಪ್ಪನವರು ಮತ್ತೆ ಮುಖ್ಯಮಂತ್ರಿ ಆಗುತ್ತಾರೋ... ಇಲ್ಲ ತುಮಕೂರಿನ ನಡೆದಾಡುವ ದೇವರು ಮತ್ತೊಮ್ಮೆ ವಿಕ್ಟೋರಿಯಾ ಆಸ್ಪತ್ರೆಗೆ ಅಥವಾ ಪರಪ್ಪನ ಅಗ್ರಹಾರದ ಪುಣ್ಯ ಕ್ಷೇತ್ರಕ್ಕೆ ಭೇಟಿ ಕೊಡಬೇಕಾಗುತ್ತದೋ ಏನೋ ಕಾದು, ನೋಡಬೇಕಿದೆ.

ಆಸ್ನೋಟಿಕರ್ ಹುಡುಗಾಟ

ರಾಜ್ಯದ ಬಿಜೆಪಿ ಸರ್ಕಾರದ ಸಚಿವ ಸಂಪುಟದೊಳಗೆ 'ಹುಡುಗಾಟದ ಹುಡುಗರು' ತುಂಬಾ ಜನ ಇದ್ದಾರೆಂಬುದು ಎಲ್ಲರಿಗೂ ಗೊತ್ತಿರುವುದೇ. ಜನರ ಜೀವದ ಜೊತೆ ಚೆಲ್ಲಾಟವಾಡುವ ತುಡುಗರೂ ಇದ್ದಾರೆಂಬುದು ನಿಮಗೆ ಗೊತ್ತೆ ? ಇಲ್ಲಿ ನೋಡಿ. ಫೆಬ್ರವರಿ,27 ರಂದು ಕಾರವಾರದಲ್ಲಿ ಸಾರಿಗೆ ಸಂಸ್ಥೆಯ ನೂತನ ಬಸ್ಸಿನ ಪ್ರಯಾಣಾರಂಭದ ಸಮಾರಂಭ. ಜಿಲ್ಲಾ ಉಸ್ತುವಾರಿ ಸಚಿವ ಅಸ್ನೋಟಿಕರ್ ಬಸ್ ಪ್ರಯಾಣ ಉದ್ಘಾಟನೆ ಮಾಡಬೇಕಿತ್ತು. ನೋಡ ನೋಡುತ್ತಿದ್ದಂತೆ ಅವರು ಬಸ್ ಏರಿ ಬಸ್ ಚಾಲನೆ ಮಾಡಿಯೇ ಬಿಟ್ಟರು. ಜನಭರಿತ ಕಾರವಾರದ ರಸ್ತೆಯಲ್ಲಿ ಅಡ್ಡಾದಿಡ್ಡಿಯಾಗಿ ಎರ್ರಾಬಿರ್ರಿ ಸು. 500 ಮೀಟರ್ ಓಡಿದ ಬಸ್ಸನ್ನು ನಂತರ ಪಕ್ಕದಲ್ಲಿದ್ದ ಡ್ರೈವರ್ ಹತೋಟಿಗೆ ತರಬೇಕಾಯಿತಂತೆ. ವಾಹನ ಒಂದಕ್ಕೆ ಬಸ್ ಉಜ್ಜಿ ಹೊಸ ವಾಹನದ ಬಣ್ಣವೆಲ್ಲ ಕಿತ್ತು ಹೋಯಿತು. ಅದೃಷ್ಟವಶಾತ್ ಯಾವುದೇ ಪ್ರಾಣ ಹಾನಿ ಸಂಭವಿಸಲಿಲ್ಲ. ಪ್ರಯಾಣ ಮಾರ್ಗದ ಉದ್ಘಾಟನೆ ಎಂದರೆ ಸಚಿವರು ಬಸ್ಸನ್ನೇ ಓಡಿಸಬೇಕೆ ? ಚಿತಾಗಾರದ ಉದ್ಘಾಟನೆ ಎಂದರೆ ಏನು ಮಾಡುತ್ತಾರೆ ಈ ಬಿಜೆಪಿ ಸಚಿವರು ? ಜನರ ಪ್ರಾಣ, ಜೀವನಗಳ ಎಷ್ಟು ಕಾಳಜಿ ಈ ಸಚಿವರುಗಳಿಗೆ !!

ದೇಶ ಭಕ್ತರ ಪಕ್ಷದ ಸಚಿವರ ಅರ್ಹತೆಗಳ ಪಟ್ಟಿ

25 ಲಕ್ಷ ಸುಳ್ಳು ನಷ್ಟದ ಲೆಕ್ಕ....., 3.6 ಕೋಟಿ ರೂಪಾಯಿಗಳ ಮೊತ್ತ ಕಾನೂನುಬಾಹಿರ ಉದ್ದೇಶಕ್ಕೆ ವಿನಿಯೋಗ..... 37 ಕೋಟಿ ರೂಪಾಯಿಗಳ ದುರ್ಬಳಕೆ.... ಕಾರ್ಪೋರೇಟ್ ಸಚಿವಾಲಯಕ್ಕೆ ತಪ್ಪು ಮಾಹಿತಿ..., ಸುಳ್ಳು ದಾಖಲೆ ಸೃಷ್ಟಿ...., ಲೆಕ್ಕಪತ್ರದಲ್ಲಿ ವಂಚನೆ..., ಇವೆಲ್ಲಾ ಏನು ಅಂತ ಕೇಳ್ತ ಇದ್ದೀರಾ ? ನಮ್ಮ ರಾಜ್ಯದ ಸನ್ಮಾನ್ಯ ಅರಣ್ಯ ಸಚಿವ ಸಿ.ಪಿ.ಯೋಗೀಶ್ವರ ಮೇಲೆ ದಾಖಲಾಗಿರುವ ಮೊಕದ್ದಮೆಗಳ ಮಾಹಿತಿಗಳು. ಹೌದು 'ಮೆಗಾ ಸಿಟಿ' ಎಂಬ ಮೇಲೇಳದ ಸಿಟಿ ಯೋಜನೆಯ ರೂವಾರಿಯಾದ ಈ ಬಿಜೆಪಿ ಸಚಿವರ ವಿರುದ್ಧ ಈಗ ಲೋಕಾಯುಕ್ತ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣಗಳು ಇವು. ಇಷ್ಟೆಲ್ಲ ಆರೋಪಗಳು ಇನ್ನೂ ಇವೆ ಇವು ಕೇವಲ ಸ್ಯಾಂಪಲ್ ಅಷ್ಟೆ. ... ಬಿಜೆಪಿ ಸರ್ಕಾರದ ಸಚಿವರಲ್ಲವೇ ? ದೇಶಪ್ರೇಮ ... ಅರ್ಹತೆ. ... ?

ಕೋಟಿ ಲಿಂಗ ಪ್ರತಿಷ್ಟಾಪನೆ ನಿರ್ಧಾರವೂ ಮತ್ತು ಅದರ ರದ್ದತಿ ಎಂಬ ರಾಜಕೀಯವೂ


ಮಕೂರಿನ ಸಿದ್ಧಗಂಗಾ ಮಠದ ಣದಲ್ಲಿ ಜಗತ್ತಿನ ಅತಿ ಎತ್ತರದ ಶಿವಲಿಂಗ ನೆಗಾಗಿ ಶಂಕು ಸ್ಥಾಪನೆ ನಡೆಯುವುದು ಳಿಗೆಯಲ್ಲಿ ರದ್ದಾಗಿದೆ. ಈ ಯೋಜನೆಯ ಹತ್ತು ಕೋಟಿ ರೂಪಾಯಿಗಳಿಗೂ ದ್ದು ಎಂದು ಹೇಳಲಾಗಿದೆ.

ಜ್ಯದ ಮುಖ್ಯಮಂತ್ರಿ ಸದಾನಂದ ಗೌಡ, ರಾಜ್ಯಾಧ್ಯಕ್ಷ ಕೆ.ಎಸ್.ಈಶ್ವರಪ್ಪ ಮುಂತಾದ ಾಯಿತೇತರರನ್ನು ಸಂಬಂಧಿಸಿದ ಯಲ್ಲಿ ಸೇರಿಸಿಕೊಂಡು ಇದು ಎಲ್ಲ ಯ ಜನರ ಕಾರ್ಯಕ್ರಮ ಎಂಬ ಸು ಕೊಟ್ಟು ಈ ಕೆಲಸದ ಹಿಂದಿರುವ ಹಸಿ ಜಾತಿ ರಾಜಕಾರಣವನ್ನು ಮರೆ ಪ ಯತ್ನ ಕೂಡ ಇತ್ತು. ತಮ್ಮನ್ನು ...ಸದೇ ಕಾರ್ಯಕ್ರಮ ...ದ್ದರಿಂದ ಯಡಿಯೂರಪ್ಪ ... ತಂದು ಕಾರ್ಯಕ್ರಮ ರದ್ದು ...ಸಿದ್ದಾರೆ ಎನ್ನುತ್ತಿವೆ ಗಳು. ಈ ಘಟನಾವಳಿಗಳ ರಾಜ್ಯದ ಸದ್ಯ ರಾಜಕೀಯದ ... ಗೊಂದಲಗಳೆಲ್ಲಾ ...ವೆ.

...ರು ಶಿವಾಲಯ... ...ವರು ನಾನೇನ ಮಾಡಲಿ ಬಡವನಯ್ಯ ಎನ್ನ ಕಾಲೇ ಕಂಬ.. ದೇಹವೇ ದೇಗುಲ, ಶಿರ ಹೊನ್ನ ಕಳಸವಯ್ಯ..." ಎಂದ ಬಸವಣ್ಣನವರ ಹೆಸರು ಹೇಳುತ್ತಾ ಈ ನಾಡಿನಲ್ಲಿ ನಡೆಯುತ್ತಿರುವುದು ನೋಡಿ ನಮಗೆ ಪುರಂದರ ದಾಸರ" ನಗೆಯು ಬರುತಿದೆ ಎನಗೆ ನಗೆಯು ಬರುತಿದೆ ಜಗದೊಳಿರುವ ಮನುಜರೆಲ್ಲ ಹಗರಣವ ಮಾಡುವುದ ಕಂಡು" ಎಂಬ ಕೀರ್ತನೆ ನೆನಪಿಗೆ ಬರುತ್ತಿದೆ.

ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶ ಒಂದಿದೆ. ಈ ಶಿವ ಲಿಂಗ ಸ್ಥಾಪನೆಗೆ ರಾಜ್ಯ ಸರ್ಕಾರದ ವತಿಯಿಂದ ಮೂರು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವುದಾಗಿ ಸದಾನಂದಗೌಡ ಘೋಷಿಸಿದ್ದಾರೆ. ಅಗತ್ಯವಿದ್ದರೆ ಇನ್ನೂ ಹೆಚ್ಚಿನ ಹಣ ನೀಡುವರಂತೆ.

ಬಿಕ್ಕಟ್ಟಿನಲ್ಲಿರುವ ರೈತರಿಗೆ ನೀಡಲು ಸರ್ಕಾರದಲ್ಲಿ ದುಡ್ಡಿಲ್ಲ. ದುಡಿಯುವ ಕಾರ್ಮಿಕರ ಕಲ್ಯಾಣಕ್ಕಾಗಲಿ, ನೌಕರರ ಸೇವಾಭದ್ರತೆ ಖಾತ್ರಿ ಪಡಿಸಲು, ಇಲ್ಲ ಗುತ್ತಿಗೆ ಆಧಾರಿತ ನೌಕರರನ್ನು ಖಾಯಂ ಮಾಡಲು ಖಜಾನೆಯಲ್ಲಿ ದುಡ್ಡಿಲ್ಲ. ಲಿಂಗ ರಾಜಕೀಯಕ್ಕೆ ನೀಡಲು ಧಾರಾಳ ದುಡ್ಡಿದೆ. ತೋಗಟವೀರರ ಕಲ್ಯಾಣ ಮಂಟಪದಲ್ಲಿ ಹಿಂದುಳಿದ ಸಮುದಾಯದ ವೇದಿಕೆ ಬಳಸಿ ಕೊಂಡು ಯಡಿಯೂರಪ್ಪ ಮತ್ತು ಬಂಟರು ತಾವು ಮಾಡುತ್ತಿರುವ ಹಸಿ ಹಸಿ ಲಿಂಗಾಯತ ಜಾತಿ ರಾಜಕಾರಣ ವನ್ನು ಮರೆ ಮಾಡಿದ್ದೇವೆ ಎಂದುಕೊಂಡರೆ ಹೇಗೋ ಹಾಗೇ ಇದು. ಕೋಟಿ ಶಿವಲಿಂಗ ಯೋಜನೆಯಲ್ಲಿ ರಾಜ್ಯದಲ್ಲಿ ದೊಡ್ಡ ಸಂಖ್ಯೆಯಲ್ಲಿರುವ ಒಂದು ಜಾತಿಯ ಜನರಿಗೆ ಮಂಕು ಬೂದಿ ಎರಚಿ ಓಟು ಗಳಿಸುವ ತಂತ್ರವಿದೆಯೇ ಹೊರತು ಅದರಲ್ಲಿ ಭಕ್ತಿಯ ಲವಲೇಶವೂ ಇಲ್ಲ. ಅದು ಜನರಿಗೆ ಕೂಡ ಚೆನ್ನಾಗಿ ಅರ್ಥವಾಗುತ್ತದೆ. ಜನ ದಡ್ಡರಲ್ಲ.



ರಾಜ್ಯವ್ಯಾಪಿ ಮುಷ್ಕರದ ಉತ್ಸಾಹ......

ಪುಟ 10 ರಿಂದ

ಮೆರವಣಿಗೆಯಲ್ಲಿ ತೆರಳಿದ ಅಂಗನವಾಡಿ ನೌಕರರು, ಬೀಡಿ ಕಾರ್ಮಿಕರು, ಹಮಾಲಿ ಕಾರ್ಮಿಕರು, ಬಿಸಿಯೂಟ ನೌಕರರು, ಕಟ್ಟಡ ಕಾರ್ಮಿಕರು, ಆಶಾ ನೌಕರರು, ಗ್ರಾಮ ಪಂಚಾಯಿತಿ ನೌಕರರು ಮತ್ತು ಬ್ಯಾಂಕ್ ಮತ್ತು ಎಲ್.ಐ.ಸಿ ನೌಕರರು ತುಮಕೂರು ಸರ್ಕಲ್ ಬಳಿ ರಸ್ತೆ ತಡೆ ಚಳುವಳಿ ನಡೆಸಿದರು. ಪ್ರತಿಭಟನೆ ಉದ್ದೇಶಿಸಿ ಸಿಐಟಿಯುನ ಜಿಲ್ಲಾ ಉಪಾಧ್ಯಕ್ಷರಾದ ಎಸ್.ಡಿ.ಪಾರ್ವತಮ್ಮ, ಅಂಗನವಾಡಿ ನೌಕರರ ಸಂಘದ ಕಮಲ, ಮಲ್ಲಮ್ಮ, ಕಟ್ಟಡ ಕಾರ್ಮಿಕರ ಫೆಡರೇಷನ್‌ನ ಬೆಟ್ಟಯ್ಯ, ಹಮಾಲಿ ಕಾರ್ಮಿಕ ಫೆಡರೇಷನ್ ಅಶ್ವತ್ತಪ್ಪ, ಪೊತರಾಜು, ಶಂಕರಪ್ಪ, ಆಶಾ ನೌಕರರ ಸಂಘಟನೆಯ ಮಮತ, ಗ್ರಾಮ ಪಂಚಾಯಿತಿ ನೌಕರರ ಸಂಘಟನೆಯ ತಿಮ್ಮರಾಜು, ಮೊದಲಾದವರು ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದರು.

ಗುಬ್ಬಿ:- ಮುಷ್ಕರದ ಭಾಗವಾಗಿ ಗುಬ್ಬಿ ಪಟ್ಟಣದ ಸರ್ಕಾರಿ ಕಾಲೇಜು ಮೈದಾನದಿಂದ ಮೆರವಣಿಗೆಯಲ್ಲಿ ಹೊರಟ ನೂರಾರು ಅಂಗನವಾಡಿ ನೌಕರರು ಪೌರ ಕಾರ್ಮಿಕರು, ಅಕ್ಷರ ದಾಸೋಹ, ಆಶಾ ಕಾರ್ಯಕರ್ತರು, ಬೀಡಿ ಕಾರ್ಮಿಕರು, ಕಟ್ಟಡ ಕಾರ್ಮಿಕರು, ಸಿಐಟಿಯು ನೇತೃತ್ವದಲ್ಲಿ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದ ಎದುರು ರಸ್ತೆ ತಡೆ ಚಳುವಳಿ ನಡೆಸಿದರು. ಇದೇ ಸಂದರ್ಭದಲ್ಲಿ ಹಾದು ಹೋಗುತ್ತಿದ್ದ ಸಂಸತ್ ಸದಸ್ಯರಾದ ಜಿ.ಎಸ್.ಬಸವರಾಜುರವರ ಕಾರನ್ನು ಸುಮಾರು ಅರ್ಧಗಂಟೆ ಕಾಲ ತಡೆದು ದುಡಿಯುವ ಜನರ ಪರವಾದ ನೀತಿಗಳನ್ನು ಜಾರಿಗೆ ತರುವಂತೆ ಆಗ್ರಹಿಸಿದರು. ಈ ಪ್ರತಿಭಟನಾ ಮೆರವಣಿಗೆಯನ್ನು ಉದ್ದೇಶಿಸಿ ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಲೋಕೇಶ್, ಸ್ವಾಮಿ, ತಾಲೂಕು ಮುಖಂಡರಾದ ಅನಸೂಯ, ಅಂಗನವಾಡಿ ನೌಕರರ ಸಂಘದ ತಾಲೂಕು ಕಾರ್ಯದರ್ಶಿ ಸರೋಜ, ಲಲಿತಪ್ರಭು, ಪೌರಕಾರ್ಮಿಕ ಸಂಘಟನೆಯ ಮುಖಂಡರಾದ ನಾಗರಾಜು, ಕೃಷ್ಣಮೂರ್ತಿ, ನರಸಿಂಹರಾಜು ಅಕ್ಷರದಾಸೋಹ ನೌಕರರ ಸಂಘಟನೆಯ ಗೌರಾಭಾಯಿ, ಆಶಾ ಕಾರ್ಯಕರ್ತೆಯರ ಶಿವಮ್ಮ, ಪಂಚಾಯಿತಿ ನೌಕರರ ಸಂಘಟನೆ ಆನಂದ್, ನರಸಿಂಹಮೂರ್ತಿ ಇವರು ಮಾತನಾಡಿದರು.


ಚಿಕ್ಕನಾಯಕನಹಳ್ಳಿ :- ತಾಲೂಕು ಸಿಐಟಿಯು ನೇತೃತ್ವದಲ್ಲಿ ಅಂಗನವಾಡಿ ನೌಕರರು, ಪಂಚಾಯತ್ ನೌಕರರು, ಪೌರ ಕಾರ್ಮಿಕರು, ಬೀಡಿ ಕಾರ್ಮಿಕರು ಒಳಗೊಂಡು ಪ್ರವಾಸಿ ಮಂದಿರದಿಂದ ಮೆರವಣಿಗೆ ಹೊರಟು ನಗರದ ಪ್ರಮುಖ ರಸ್ತೆಗಳಲ್ಲಿ ಬೆಲೆ ಏರಿಕೆಯನ್ನು ವಿರೋಧಿಸಿ ಘೋಷಣೆ ಕೂಗುತ್ತಾ ಸಾಗಿದರು. ನಂತರ ಪಟ್ಟಣದ ಶೆಟ್ಟಿಕೆರೆ ಸರ್ಕಲ್ ಬಳಿ ರಸ್ತೆ ತಡೆ ಚಳುವಳಿ ನಡೆಸಿದರು. ಈ ಪ್ರತಿಭಟನೆಯನ್ನು ಉದ್ದೇಶಿಸಿ ಡಿವೈಎಫ್ಐನ ಜಿಲ್ಲಾ ಕಾರ್ಯದರ್ಶಿ ಎಸ್.ರಾಘವೇಂದ್ರ, ಅಂಗನವಾಡಿ ನೌಕರರ ಸಂಘಟನೆಯ ಶಾರದ, ಪಂಚಾಯತಿ ನೌಕರರ ಸಂಘದ ಮುಖಂಡರಾದ ಶಂಕರಪ್ಪ, ಚಂದ್ರಪ್ಪ ಪೌರ ಕಾರ್ಮಿಕರ ಸಂಘಟನೆಯ ಪ್ರಕಾಶ್ ಸಿದ್ದಲಿಂಗಯ್ಯ, ಪರಮೇಶ್ವರವರು ಮಾತನಾಡಿದರು.

ತುರುವೇಕರೆ :- ತಾಲೂಕು ಸಿಐಟಿಯುವಿನ ಅಂಗನವಾಡಿ ನೌಕರರು, ಪಂಚಾಯತ್ ನೌಕರರು, ಪೌರಕಾರ್ಮಿಕರು, ಆಶಾ ಕಾರ್ಯಕರ್ತರು, ಬಂಯಲು ರಂಗಮಂದಿರದಿಂದ ಮೆರವಣಿಗೆ ತೆರಳಿ ಪಟ್ಟಣದ ಕಿತ್ತೂರು ರಾಣಿ ಚನ್ನಮ್ಮ ಸರ್ಕಲ್ ಬಳಿ 'ಮಾನವ ಸರಪಳಿ' ರಚಿಸಿ ರಸ್ತೆ ತಡೆ ನಡೆಸುವ ಮುಖಾಂತರ ಪ್ರತಿಭಟನೆ ನಡೆಸಿದರು. ಈ ಪ್ರತಿಭಟನಾ ಮೆರವಣಿಗೆಯನ್ನು ಉದ್ದೇಶಿಸಿ ನೌಕರ ಸಂಘಟನೆಯ ತಾಲೂಕು ಅಧ್ಯಕ್ಷರಾದ ಮಂಜುಳಮ್ಮ, ಕಾರ್ಯದರ್ಶಿ ರಂಗನಾಥ್, ಖಜಾಂಚಿ ಪ್ರಸನ್ನ, ಅಂಗನವಾಡಿ ನೌಕರರ ಸಂಘಟನೆಯ ತಾಲೂಕು ಮುಖಂಡರಾದ ರಂಗಮಣಿ, ಅಕ್ಷರ ದಾಸೋಹ ನೌಕರ ಸಂಘಟನೆಯ ಭಾಗ್ಯಮ್ಮ, ತಾಲೂಕಿನ ಯುವ ಜನ ಸಂಘಟನೆಯ ಸತೀಶ್ ಮಾತನಾಡಿದರು.

★

ಹರಪನಹಳ್ಳಿ

ಹರಪನಹಳ್ಳಿ ತಾಲೂಕು ಬರ ಪೀಡಿತ ತಾಲೂಕು ಎಂದು ಘೋಷಣೆಯಾಗಿದ್ದು ಸುಮಾರು 5 ತಿಂಗಳು ಕಳೆದು ಹೋಗಿವೆ. ಈ ಸಂದರ್ಭದಲ್ಲಿ ಜನ ಸಾಮಾನ್ಯರಿಗೆ ಕುಡಿಯಲು ನೀರು, ವಿದ್ಯುತ್, ದನ ಕರುಗಳಿಗೆ ಮೇವು, ಆಹಾರ ಧಾನ್ಯ, ಸುರು ಇಲ್ಲದವರಿಗೆ ವಸತಿ ಸೌಲಭ್ಯ, ದುಡಿಯುವ ಜನರಿಗೆ ಉದ್ಯೋಗ, ಸರಿಯಾದ ಶಿಕ್ಷಣ ವ್ಯವಸ್ಥೆ ಇಲ್ಲದೆ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಈ ತಾಲೂಕಿನ ಶಾಸಕರು ಜನರ ಜ್ವಲಂತ ಸಮಸ್ಯೆಗಳ ಬಗ್ಗೆ ಕಿಂಚಿತ್ತು ಕಾಳಜಿವಹಿಸದೆ, ಸಂಪೂರ್ಣವಾಗಿ ಕಡೆಗಣಿಸುತ್ತಿದ್ದಾರೆ. ಅಲ್ಲದೆ ಗ್ರಾಮೀಣ ಪ್ರದೇಶಗಳಲ್ಲಿ ಜನರು ಮೂಲಭೂತ ಸೌಕರ್ಯಗಳಿಂದ ಸಂಪೂರ್ಣ ವಂಚಿತರಾಗಿದ್ದಾರೆ. ಈ ನಿಟ್ಟಿನಲ್ಲಿ ಹರಪನಹಳ್ಳಿ ತಾಲೂಕಿನ ಸಮಗ್ರ ಅಭಿವೃದ್ಧಿಗೆ ಹಾಗೂ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಮಾನ್ಯ ತಹಶೀಲ್ದಾರರಿಗೆ ಮತ್ತು ಸಂಬಂಧಿಸಿದ ಎಲ್ಲಾ ಅಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಲಾಯಿತು.



ಸುಮಾರು 300-500 ಜನ ಪ್ರತಿಭಟನೆಯಲ್ಲಿ ಭಾಗವಹಿಸಿದ್ದು, ಹರಪನಹಳ್ಳಿಯ ಅಂಗಡಿ ಮುಗ್ಗಟ್ಟುಗಳು ಸ್ವಯಂ ಪ್ರೇರಿತರಾಗಿ ಬಂದ್ ಆಗಿದ್ದವು.

* ತಾಲೂಕಿನ ಎಲ್ಲಾ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯವನ್ನು ಕಲ್ಪಿಸಬೇಕು.* ಅರ್ಜಿ ಹಾಕಿದ ಎಲ್ಲ ನಿವೇಶನ ರಹಿತರಿಗೆ ನಿವೇಶನವನ್ನು ತಕ್ಷಣ ಒದಗಿಸಬೇಕು ಹಾಗೂ ಅರ್ಹ ಫಲಾನುಭವಿಗಳಿಗೆ ಆಶ್ರಯ ಮನೆಯ ಹಕ್ಕುಪತ್ರವನ್ನು ಕೂಡಲೇ ವಿತರಿಸಬೇಕು.

* ಎಲ್ಲ ಸ್ತ್ರೀಶಕ್ತಿ ಸ್ವಸಹಾಯ ಸಂಘಗಳಿಗೆ ಸುತ್ತುನಿಧಿ, ಕಡಿಮೆ ಬಡ್ಡಿ ಸಾಲ ಸೌಲಭ್ಯ ನೀಡಬೇಕು.

* ಭಾಗ್ಯ ಲಕ್ಷ್ಮಿ ಬಾಂಡನ್ನು ತಕ್ಷಣವೇ ವಿತರಿಸಬೇಕು. * ದೇವದಾಸಿ ಮಹಿಳೆಯರಿಗೆ ಮಾಶಾಸನ 1000/-ರೂ.ಗಳಿಗೆ ಹೆಚ್ಚಿಸಬೇಕು.

* ಸರ್ವೇ ಪಟ್ಟಿಯಲ್ಲಿರುವ ಎಲ್ಲಾ ದೇವಧಾಸಿ ಮಹಿಳೆಯರಿಗೆ ವಯಸ್ಸಿನ ವಯೋಮಿತಿಯನ್ನು ಕೈಬಿಡಬೇಕು. ಸ್ವಯಂ ಸೇವಕಿಯರ ಪ್ರಯಾಣ ಭತ್ಯೆ ಮತ್ತು ವೇತನವನ್ನು 3,000/-ರೂ.ಹೆಚ್ಚಿಸಬೇಕು.

* ನೆನೆಗುದಿಗೆ ಬಿದ್ದಿರುವ ನೀರಾವರಿ ಯೋಜನೆಯನ್ನು ತುರ್ತಾಗಿ ಪೂರ್ಣಗೊಳಿಸಬೇಕು. ಬರ ಪೀಡಿತ ಪ್ರದೇಶಗಳಿಗೆ ಶಾಶ್ವತ ನೀರಾವರಿ ಯೋಜನೆಯನ್ನು ರೂಪಿಸಿ ಜಾರಿಗೊಳಿಸಬೇಕು.

* ಉದ್ಯೋಗ ಖಾತ್ರಿ ಯೋಜನೆಯ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಸಮ[ಪ]ವಾಗಿ ಮತ್ತು ಭ್ರಷ್ಟಾಚಾರ ಮುಕ್ತವಾಗಿ ಜಾ[ರಿಗೆ] ತರಲು ತಾಲೂಕು ಆಡಳಿತ ಬದ್ಧತೆಯ ಘೋಷಿಸಬೇಕು. ಕೂಲಿಕಾರರಿಗೆ ಕೆ[ಲಸ] ಕೊಡುವ ಬದಲು ಯಂತ್ರಗಳ ಮೂಲಕ ಮಾಡಿಸಿ, ಸುಳ್ಳು ದಾಖಲೆಗಳನ್ನು ಸೃ[ಷ್ಟಿಸಿ] ಹಣವನ್ನು ಲಪಟಾಯಿಸುವ ಜನಪ್ರತಿನಿಧಿ[ಗಳು] ಗುತ್ತಿಗೆದಾರರು ಮತ್ತು ಭ್ರಷ್ಟ ಅಧಿಕಾರಿಗಳ[ವಿರುದ್ಧ] ಕಠಿಣ ಕಾನೂನು ಕ್ರಮ ಜರುಗಿಸಬೇಕು.

ಜೆಸಿಟಿಯು ಸಂಘಟನೆಯ ಬೇಡಿಕೆ ಒಳಗೊಂಡಂತೆ ಸ್ಥಳೀಯವಾದ ಬೇಡಿಕೆಗ[ಳನ್ನು] ಇಟ್ಟುಕೊಂಡು ಮುಷ್ಕರದಂದು ಪ್ರತಿಭಟನೆ ಮನವಿ ನೀಡಲಾಗಿದೆ. ಪ್ರತಿಭಟನೆಯ ದೇವದಾಸಿ ಮಹಿಳಾ ಸಂಘದ ಟಿ.ವಿ.ರೇಣು[ಕಾ] ಡಿವೈಎಫ್ಐನ ಬೆವಿನಹಳ್ಳಿ ವೆಂಕಟೇ[ಶ್] ಜನವಾದಿ ಮಹಿಳಾ ಸಂಘಟನೆಯ ಪದಾ[ಧಿಕಾರಿ] ಪ್ರಾಂತ ರೈತ ಸಂಘದ ಹೆಚ್.ವೆಂಕಟೇಶ್, ಕಾರ್ಮಿಕ ಸಂಘದ ಮುಜುಬಾಬೀ, ಕ.ಪ್ರಾ ಕೃಷಿ ಕೂಲಿಕಾರರ ಸಂಘದ ಹಾಲೇಶ್ ನಾ[ಯ್ಕ] ಎಸ್.ಎಫ್.ಐ ಸಂಘಟನೆಯ ಕಲ್ಲು ಮಂಜುನಾಥ, ಡಿವೈಎಫ್ಐ ಸಂಘಟನೆ ಚ[...] ರಾಜ, ಬೀರಪ್ಪ ಬೇಲೂರು ಮುಂತಾದ[ವರು] ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ರಾಜ್ಯದಲ್ಲಿ ಯಶಸ್ಸು

ಪುಟ 9ರಿಂದ.......

ಆಗಿದೆ. ಮೈಸೂರಿನ ನಂಜನಗೂಡು, ಹುಣಸೂರು ನಗರಗಳು, ಮಂಡ್ಯ ಜಿಲ್ಲೆಯ ಮಂಡ್ಯ, ಮಳವಳ್ಳಿ, ಮದ್ದೂರು, ಬಿಜಾಪುರ, ಇಂಡಿ, ಸಿಂಧಗಿ ಬಂದ್ ಆಗಿದೆ. ನಂಜನಗೂಡಿನ ಸಂಪೂರ್ಣ ಕೈಗಾರಿಕೆಗಳು ಬಂದ್ ಆಗಿದೆ. ನೂರಾರು ಎಪಿಎಂಸಿ ಮಾರುಕಟ್ಟೆಗಳು ಬಂದ್ ಆಗಿದೆ. ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ, ದಾಂಡೇಲಿಗಳಲ್ಲಿ ಬಂದ್ ನಡೆದಿದೆ. ಉಳಿದಂತೆ ಜಿಲ್ಲೆಯ ಹನ್ನೊಂದು ತಾಲ್ಲೂಕುಗಳಲ್ಲಿ ಪ್ರತಿಭಟನೆ ನಡೆದಿದೆ.ಬಳ್ಳಾರಿ ಜಿಲ್ಲೆಯಲ್ಲಿ ಹೊಸಪೇಟೆ, ಕುರಗೋಡು, ಸಿರುಗುಪ್ಪ, ಹಗರಿ ಬೊಮ್ಮನ ಹಳ್ಳಿ, ಮುಂತಾದ ಕಡೆಗಳಲ್ಲಿ ಬಂದ್ ನಡೆದಿದೆ. ದಾವಣಗೆರೆಯ ಹರಪನಹಳ್ಳಿಯಲ್ಲಿ ಭಾಗಶ್ ಬಂದ್ ನಡೆದಿದೆ. ಕೊಡಜು ಜಿಲ್ಲೆಯಲ್ಲಿ ಜಿಲ್ಲಾ ಕೇಂದ್ರವಾದ ಮಡಿಕೇರಿಯಲ್ಲಿ ಸುಮೂರು ಸಾವಿರಕ್ಕೂ ಅಧಿಕ ಕಾರ್ಮಿಕರು ಮತ್ತು ವಿವಿಧ ಜನ ಸಮುದಾಯದ ಜನ ಪ್ರತಿಭಟನೆ ನಡೆಸಿದ್ದಾರೆ. ಜಿಲ್ಲೆಯ ಪ್ಲಾಂಟೇಶನ್‌ಗಳು, ಬ್ಯಾಂಕ್, ವಿಮಾ, ದೂರವಾಣಿ ಇಲಾಖೆ ಅಂಗನವಾಡಿ ಕೇಂದ್ರಗಳಲ್ಲಿ ಮುಷ್ಕರ ನಡೆಸಲಾಗಿದೆ ಅವಿಭಜಿತ ಗುಲ್ಬರ್ಗಾ ಜಿಲ್ಲೆಯಲ್ಲಿ 9 ತಾಲ್ಲೂಕುಗಳಲ್ಲಿ ಪ್ರತಿಭಟನೆಗಳು ನಡೆದಿವೆ. ಬೀದರ್ ಜಿಲ್ಲೆಯಲ್ಲಿ ಒಟ್ಟು 5 ಕಡೆಗಳಲ್ಲಿ ಪ್ರತಿಭಟನೆಗಳು ನಡೆದಿವೆ. ಶಿವಮೊಗ್ಗ 6ಕಡೆ, ಕೊಡಗಿನಲ್ಲಿ 3 ಕಡೆ ಬೆ[...] ಜಿಲ್ಲೆಯಲ್ಲಿ ಒಟ್ಟಾರೆ 9 ಕಡೆಗಳಲ್ಲಿ ಧಾರವಾ[ಡ] ಜಿಲ್ಲೆಯಲ್ಲಿ 5 ಕಡೆಗಳಲ್ಲಿ, ಹಾವೇರಿ ಜಿಲ್ಲೆ[ಯ] 6 ಕಡೆಗಳಲ್ಲಿ ಚಿತ್ರದುರ್ಗದಲ್ಲಿ 3 ಪ್ರತಿಭಟನೆಗಳು ನಡೆದಿವೆ.

ಇಲ್ಲಿಯವರೆಗೆ ದೊರೆತಿರುವ ಪ್ರಾಥ[ಮಿಕ] ವರದಿಯಂತೆ ರಾಜ್ಯದಲ್ಲಿ ಸು[...] ತಾಲ್ಲೂಕುಗಳಲ್ಲಿ ಬಂದ್ ಯಶಸ್ವಿಯಾ[ಗಿದೆ]. ರಾಜ್ಯದ 10 ರಿಂದ 15 ತಾಲ್ಲೂಕುಗ[ಳಲ್ಲಿ] ಭಾಗಶ್ ಬಂದ್ ಆಗಿರುವ ವರದಿ[...] ರಾಜ್ಯದ ಸುಮಾರು150-[...] ತಾಲ್ಲೂಕುಗಳಲ್ಲಿ ಬೆಂಗಳೂರಿ[...] ಆಟೋಗಳು ಸಂಪೂರ್ಣ ಬಂದ್ ಆ[...] ರಾಜ್ಯದ ಎಲ್ಲಾ ಅಂಗನವಾಡಿ ಕೇಂದ್ರ ಬಂದ್ ಆಗಿದೆ. ರಾಜ್ಯಾದ್ಯಂತ ಎಸ್.ಎಫ್[.ಐ] ಮುಂತಾದ ವಿದ್ಯಾರ್ಥಿ ಸಂಘಟನೆಗಳು ನೀಡಿದ್ದ ಆಧಾರದಲ್ಲಿ ಪಠ್ಯ ಪುಸ್ತ[ಕ] ಕೇಸರೀಕರಣ, ಶಿಕ್ಷಣದ ವ್ಯಾಪಾರೀಕ[ರಣ] ನೀತಿಗಳ ವಿರುದ್ಧ ರಾಜ್ಯವ್ಯಾಪಿ [...] ಕಾಲೇಜು ಬಂದ್‌ಗೆ ವ್ಯಾಪಕವಾದ [...] ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಅಖಿಲ ಭಾರತ ಸಾರ್ವತ್ರಿಕ ಮುಷ್ಕರ[ವನ್ನು] ಯಶಸ್ಸು ಮಾಡಿದ ಲಕ್ಷಗಟ್ಟಲೆ ಕಾರ್ಮಿ[ಕರು] ಮತ್ತು ಇತರ ನೌಕರರ ಸಂಘಟನೆ[ಗಳು] ಹಾಗೂ ನಾಗರೀಕರಿಗೆ ಸಿಐಟಿಯು [...] ಸಮಿತಿ ಅಭಿನಂದನೆ ಸಲ್ಲಿಸಿದೆ. ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾ[ದಿ]) ರಾಜ್ಯ ಸಮಿತಿಯ ಸಹ ಮುಷ್ಕರವನ್ನು [...] ಮಾಡಿದ ಜನತೆಯನ್ನು ಅಭಿನಂದಿಸಿ[...]

2ಜಿ: ಜೂಜುಕೋರ ವ್ಯಾಪಾರದ ಅರಿವಿದ್ದರೂ ಕೈಕಟ್ಟಿ ಕುಳಿತಿದ್ದ ಯುಪಿಎ-2 ಸರಕಾರ!




ವೇದರಾಜ ಎನ್.ಕೆ.

ತರಂಗಾಂತರ ಹಂಚಿಕೆಯ 122 ಾನಿಗೆಗಳನ್ನು ನೀಡಿದ್ದು ಹರಾಜಿನ ಲಕವಲ್ಲ, ಬಹಳ ಕಡಿಮೆ ಪ್ರಮಾಣದ ಶುಲ್ಕ'ದ ಮೂಲಕವಾದ್ದರಿಂದ, ಈ ಗಾಂತರ' ತಮ್ಮ ಮಾಲಿಕತ್ವದಲ್ಲಿ ಇದೆ ಎಂಬ ಕ್ಕೇ ಕೆಲವು ಕಂಪನಿಗಳ 'ಮೌಲ್ಯ' ಹೆಚ್ಚಿ ಕಟ್ಟೆಯಲ್ಲಿ ಅದನ್ನು ಮಾರಿ ಅಪಾರ ಲಾಭ ಕೊಳ್ಳುವ ಸಟ್ಟಾ ವ್ಯಾಪಾರಕ್ಕಾಗಿಯೇ ಪರವಾನಿಗೆಗಳನ್ನು ುಕೊಂಡಿರುವ ಸಾಧ್ಯತೆ ಇದೆ ದು ಈ ಪರವಾನಿಗೆಗಳನ್ನು ಕ್ತವಾಗಿ ಕೊಡುವ ಮೊದಲೇ ಿಎ ಸರಕಾರದ ಮುಖ್ಯಸ್ಥರಿಗೆ ತ್ತು. ಆದರೂ ಅವರು ಏನೂ ದೆ ಕೈಕಟ್ಟಿ ಕುಳಿತಿದ್ದರೇ ಎಂಬ ಇತ್ತೀಚಿನ ಸುಪ್ರಿಂಕೋರ್ಟ್ ನ ಹಿನ್ನೆಲೆಯಲ್ಲಿ ಎದ್ದಿದೆ.

ಜಿ ಪರವಾನಿಗೆಗಳನ್ನು ಪಡೆದಿದ್ದ ಟೆಲಿಕಾಂ ಮತ್ತು ಯುನಿಟೆಕ್ ನಿಗಳು ತಮ್ಮ ಶೇರುಗಳನ್ನು ವಿದೇಶಿ ನಿಗಳಾದ ಎಟಿಸಲಾಟ್, ೋರ್ ಗಳಿಗೆ ಮಾರಿಕೊಂಡಿವೆ ಸುಪ್ರಿಂ ಕೋರ್ಟ್ ಗಮನಿಸಿದೆ. ಆದ್ದರಿಂದ ಮುಸುಕಿನ ಖರೀದಿಯಲ್ಲವೇ, 'ವಿಲೀನ ಖರೀದಿ' (ಮರ್ಜರ್ಸ್ ಅಂಡ್ ಅಕ್ವಿಸಿಶನ್ಸ್) ಾನಿನ ವ್ಯಾಪ್ತಿಗೆ ಬರುವುದಿಲ್ಲವೇ, ಈ ಬಗ್ಗೆ ರ ತಾನು ಕೈಗೊಳ್ಳಬೇಕಾದ ಕ್ರಮಗಳನ್ನು ವಹಿಸಿಲ್ಲ ಎಂಬಿತ್ಯಾದಿ ಪ್ರಶ್ನೆಗಳನ್ನು ಾಗುತ್ತಿದೆ.

ಾಸ್ತವವಾಗಿ ಈ ಪ್ರಶ್ನೆಗಳನ್ನು ಆಗಿನ ಕಾಸು ಮಂತ್ರಿಗಳು(ಚಿದಂಬರಂ), ಸಂಪರ್ಕ ಮಂತ್ರಿಗಳು(ಎ.ರಾಜ) ಮತ್ತು ಾಸು ಹಾಗೂ ದೂರಸಂಪರ್ಕ ಇಲಾಖೆಗಳ ಅಧಿಕಾರಿಗಳು (ಸೆಕ್ರೆಟರಿಗಳು) ವಹಿಸಿದ್ದ ಜನವರಿ 30, 1998ರ ಸಭೆಯಲ್ಲಿ, ರೆ ಪರವಾನಿಗೆಗಳನ್ನು ನೀಡಲಾಗುವುದು ಪತ್ರಗಳನ್ನು ಸಂಬಂಧಪಟ್ಟ ಕಂಪನಿಗಳಿಗೆ ದ 20 ದಿನಗಳ ಅಂತರದಲ್ಲೇ ವಾಗಿ ಪರವಾನಿಗೆಗಳನ್ನು ನೀಡಿದ್ದು ದ ಒಂದು ತಿಂಗಳ ನಂತರ) ಇಂತಹ ಕೋರ ವ್ಯಾಪಾರದ' ಸಾಧ್ಯತೆಯ ಬಗ್ಗೆ ಸಲಾಯಿತು ಎಂದು ಈ ಸಭೆಯ ಕಲಾಪದ ಯಿಂದ ತಿಳಿದು ಬಂದಿದೆ. ಸಿಬಿಐ ಯ ಸಮಯದಲ್ಲಿ ಆಗಿನ ದೂರಸಂಪರ್ಕ ದರ್ಶಿಗಳು ಈ ಟಿಪ್ಪಣಿಯ ಬಗ್ಗೆ ದ್ದಾರೆ. ಇದು ಅಪೇಕ್ಷಣೀಯವಲ್ಲ, ಇದನ್ನು ಂತ್ರಿಸಬೇಕು ಎಂಬ ಅಭಿಪ್ರಾಯವೂ ಆ ುಲ್ಲಿ ಬಂದಿತ್ತಂತೆ. ಈ ಬಗ್ಗೆ ವಿವರವಾದ ನಿರ್ದೇಶನಗಳನ್ನು' ರೂಪಿಸಬೇಕು. ಈ ರೀತಿ ಖರೀದಿಸಿದ 2ಜಿ ತರಂಗಾಂತರದ ಮೌಲ್ಯಮಾಪನ ನಡೆಸಿ ಅದರ ಒಂದು ಭಾಗ ಕಾನೂನಿನ ಪ್ರಕಾರ 'ಪ್ರೀಮಿಯಂ' ಆಗಿ ಸರಕಾರಕ್ಕೆ ಬರಬೇಕು ಎಂಬಿತ್ಯಾದಿಯಾಗಿ ಚರ್ಚೆ ನಡೆದಿತ್ತಂತೆ.

ಆದರೆ ಪರವಾನಿಗೆ ಪಡೆದ ಸ್ವಲ್ಪವೇ ದಿನಗಳಲ್ಲಿ ಯಾವುದೇ ರೀತಿಯ ಸ್ವಂತ ಮೂಲರಚನೆಗಳಿಲ್ಲದ ಸ್ವಾನ್ ಟೆಲಿಕಾಂ ಮತ್ತು ಯುನಿಟೆಕ್ ಕಂಪನಿಗಳ ಕಂಪನಿಗಳ 45ರಿಂದ 60ಶೇ. ಶೇರುಗಳನ್ನು ಎಟಿಸಲಾಟ್ ಮತ್ತು ಟೆಲಿನೋರ್ ಎಂಬ ವಿದೇಶಿ ಕಂಪನಿಗಳು ಭಾರೀ ಬೆಲೆ ತೆತ್ತು ಪಡೆದಾಗ ಈ 'ಪ್ರೀಮಿಯಂ'ಯ ಗಳಲ್ಲಿ ಸರಕಾರದ ಪಾಲನ್ನು ಈ ಮೇಲೆ ಹೇಳಿದ ಸಭೆಯಲ್ಲಿ ಯೋಚಿಸಿದಂತೆ ಏಕೆ ಪಡೆಯಲಿಲ್ಲ ಎಂದು ಈ ಟಿಪ್ಪಣಿಯ ಒಂದು ಪ್ರತಿ ತನ್ನ ಬಳಿಯಿದೆ ಎಂದಿರುವ 'ದಿ ಹಿಂದೂ' ದೈನಿಕ ಚಿದಂಬರಂ ಅವರಿಗೆ ಕೇಳಿದೆ. ಅದಕ್ಕೆ ಚಿದಂಬರಂ – ಇಲ್ಲಿ ವಿಲೀನ ಅಥವ ಖರೀದಿಯ ನಿಯಮಗಳು ಲಾಗೂ ಆಗುವುದಿಲ್ಲ, ಏಕೆಂದರೆ ಪರವಾನಿಗೆ ಪಡೆದ ಕಂಪನಿಗಳು ವಿದೇಶಿ ಹೂಡಿಕೆದಾರರಿಗೆ ಹೊಸ ಶೇರುಗಳನ್ನು ಪ್ರಕಟಿಸಿದವು, ಆದ್ದರಿಂದ ಅವು ಎಫ್‌ಡಿಐ ನ ವ್ಯಾಪ್ತಿಗೆ ಬರುತ್ತವೆ, ಇದಕ್ಕೆ ಸರಕಾರದ ಅನುಮತಿಯ ಅಗತ್ಯವಿಲ್ಲ ಎಂದುತ್ತರಿಸಿದ್ದಾರಂತೆ. ಮೇಲೆ ಹೇಳಿದ ಟಿಪ್ಪಣಿ 'ವಿಲೀನ ಮತ್ತು ಖರೀದಿ'ಯ ಬಗ್ಗೆ ಈ ಬೆಳಕಿನಲ್ಲಿ ಹೆಚ್ಚಿನ ಅಧ್ಯಯನದ ಅಗತ್ಯವಿದೆ ಎಂದಷ್ಟೇ ದಾಖಲು ಮಾಡಿತ್ತು ಎಂದೂ ಅವರು ಹೇಳಿದರಂತೆ.



ಇದಾಗಿ ನಾಲ್ಕು ವರ್ಷಗಳಾಗಿವೆ, ಈ ಅಧ್ಯಯನ ಇನ್ನೂ ನಡೆಯುತ್ತಿದೆಯೇ ಎಂಬುದು ತಿಳಿದಿಲ್ಲ; ಇಂತಹ ಸಟ್ಟಾಕೋರ ವ್ಯವಹಾರಗಳನ್ನು ತಡೆಯಲು, ಸರಕಾರದ ಬೊಕ್ಕಸಕ್ಕೆ ಇದರಿಂದಾಗುವ ನಷ್ಟಗಳನ್ನು ತಡೆಯಲು ಕ್ರಮ ವಹಿಸಬೇಡವೇ ಎಂದು ನಿರ್ಧರಿಸಲು ಈ ಯುಪಿಎ-2 ಸರಕಾರಕ್ಕೆ ಆಗಿಲ್ಲ. ಈ ಹಿನ್ನೆಲೆಯಲ್ಲಿ, 2ಜಿ ಹಗರಣದಲ್ಲಿ ಆಗಿನ ಹಣಕಾಸು ಮಂತ್ರಿ ಚಿದಂಬರಂ ಅವರ ಪಾತ್ರವೇನೂ ಇಲ್ಲ ಎಂಬ ಸಿಬಿಐ ಹೇಳಿಕೆಯ ಮುಂದೆಯೂ ಮತ್ತೆ ಪ್ರಶ್ನೆ ಚಿಹ್ನೆ ಬಿದ್ದಿದೆ.

ಈ ನಡುವೆ, 2ಜಿ ಹಂಚಿಕೆಯಲ್ಲಿ ಹಗರಣವೇ ಇರಲಿಲ್ಲ, ಸರಕಾರೀ ಬೊಕ್ಕಸಕ್ಕೆ ಒಂದು ಪೈಸೆಯೂ ನಷ್ಟವಾಗಿಲ್ಲ ಎಂದು ಸಾರುತ್ತಿದ್ದ ಹಾಲಿ ದೂರಸಂಪರ್ಕ ಮಂತ್ರಿ ಸುಪ್ರಿಂ ಕೋರ್ಟ್ ಈ ಪರವಾನಿಗೆಗಳನ್ನು ಅವೇ ಕಾರಣಗಳಿಗೆ ರದ್ದು ಮಾಡಿದ ನಂತರ ರಾಗ ಬದಲಿಸಿ, ವಿದೇಶಿ ಹೂಡಿಕೆದಾರರಿಗೆ ಏನೂ ಬೇಸರವಾಗಿಲ್ಲ ಎಂದು ಸಮಜಾಯಿಷಿ ಕೊಡಲಾರಂಭಿಸಿದ್ದರು. ಆದರೆ ಇದೂ ಸುಳ್ಳಾಗುತ್ತಿದೆ. ಕೊಲ್ಲಿದೇಶದ ಎಟಿಸಲಾಟ್ ಕಂಪನಿ ತನಗೆ 2ಜಿ ತರಂಗಾಂತರವನ್ನು ಮಾರಿದ್ದ ಸ್ವಾನ್ ಟೆಲಿಕಾಂ ವಿರುದ್ಧ ಕೋರ್ಟಿನ ಬಾಗಿಲು ತಟ್ಟಿದೆ. ಅತ್ತ ಪರವಾನಿಗೆ ರದ್ದತಿಯಿಂದ ಬಾಧಿತವಾದ ರಶ್ಯಾದ ಕಂಪನಿ 'ಸಿಸ್ಟೆಮಾ' ತನ್ನ '3.1 ಬಿಲಿಯ ಡಾಲರುಗಳಷ್ಟು ಹೂಡಿಕೆಯನ್ನು ರಕ್ಷಿಸಲು' ಭಾರತ ಸರಕಾರ 'ದ್ವಿಪಕ್ಷೀಯ ಹೂಡಿಕೆ ಸಂಧಿ'ಯನ್ನು ಗೌರವಿಸಬೇಕೆಂದು ಕೇಳಿದೆ. ಇನ್ನೊಂದೆಡೆ ಯುನಿಟೆಕ್ ಮತ್ತು ನಾರ್ವೆ ದೇಶದ ಟೆಲಿನೋರ್ ಪರಸ್ಪರ ದೂಷಿಸುತ್ತಾ ಕಂಪನಿ ಲಾ ಬೋರ್ಡ್‌ಗೆ ದೂರಿತ್ತಿವೆ. ಮತ್ತೊಂದೆಡೆ ಟಾಟಾ ಕಂಪನಿ ಪರವಾನಿಗೆ ರದ್ದತಿಯ ತೀರ್ಪಿನ ಮರು ಪರಿಶೀಲನೆ ನಡೆಸಬೇಕೆಂದು ಸುಪ್ರಿಂ ಕೋರ್ಟಿಗೆ ಅರ್ಜಿ ಸಲ್ಲಿಸಿದೆ.

ಪೆಟ್ರೋಲ್ ಬೆಲೆಯೇರಿಕೆಯ ಮಗದೊಂದು ಸುತ್ತು?



ಐದು ರಾಜ್ಯಗಳಲ್ಲಿ ಚುನಾವಣೆಗಳು ಮುಗಿಯುತ್ತಿದ್ದಂತೆಯೇ ಪೆಟ್ರೋಲಿಯಂ ದರಗಳಲ್ಲಿ ಮತ್ತೊಂದು ಸುತ್ತಿನ ಏರಿಕೆಗಳಿಗೆ ಸಿದ್ಧತೆಗಳು ನಡೆಯುತ್ತಿವೆಯಂತೆ. ಕಳೆದ ಡಿಸೆಂಬರಿನಲ್ಲಿ ಬೆಲೆಯೇರಿಕೆ ಮಾಡಿದಾಗ ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿದ್ದ ಬೆಲೆ ಬ್ಯಾರಲ್ಲಿಗೆ 109 ಡಾಲರ್, ಈಗ 125 ಡಾಲರ್, ಅಲ್ಲದೆ ಮಧ್ಯಪೂರ್ವ ಪ್ರದೇಶದಲ್ಲಿ ಇರುವ ಬಿಗುವಿನ ವಾತಾವರಣದಿಂದಾಗಿ ಯುಪಿಎ-2 ಸರಕಾರ ಪೆಟ್ರೋಲಿಯಂ ದರಗಳಲ್ಲಿ ಕನಿಷ್ಟ 10ರಿಂದ 15 ಶೇ. ಏರಿಕೆ ಮಾಡಲೇ ಬೇಕಾಗುತ್ತದೆ ಎಂದು ಕಂಪನಿಗಳ ಶೇರುಗಳ ಮೌಲ್ಯಮಾಪನ ಮಾಡುವ ಸಂಸ್ಥೆ ಕ್ರೈಸಿಲ್‌ನ ಒಂದು ವರದಿ ಹೇಳಿದೆ. ಇದು ಸರಕಾರಕ್ಕೆ ಅದು ಮಾಡಿರುವ ಶಿಫಾರಸೋ ಅಥವ ಸರಕಾರ ಅದರಿಂದ ಬಯಸಿರುವ ಶಿಫಾರಸೋ ತಿಳಿದಿಲ್ಲ. ತೈಲ ಕಂಪನಿಗಳ ವಕ್ತಾರರ ಪ್ರಕಾರವಂತೂ ಈ ಕಂಪನಿಗಳು ಚುನಾವಣೆ ಮುಗಿಯುವುದನ್ನೇ ಕಾಯುತ್ತಿವೆ.

ಈ ಬಾರಿ ಡೀಸೆಲ್ ದರಗಳನ್ನೂ ಏರಿಸಲಾಗುವುದಂತೆ. ಮತ್ತೆ ಅದೇ 'ಕಡಿಮೆ ವಸೂಲಾತಿ'ಯ, ಈಗಲೂ ದಿನಕ್ಕೆ 410 ಕೋಟಿ ರೂ.'ಕಳಕೊಳ್ಳುತ್ತಿರುವ' ಹಳಸಲು ರಾಗ ಹಾಡುತ್ತಾ ದರ ಏರಿಕೆಗಳಿಗೆ ರಂಗ ಸಿದ್ಧತೆ ನಡೆಯುತ್ತಿದೆ. ಜೂನ್ 2010ರಲ್ಲಿ ಪೆಟ್ರೋಲ್ ದರಗಳ ಮೇಲಿನ ಸರಕಾರದ ಹತೋಟಿಯನ್ನು ವಿಧ್ಯುಕ್ತವಾಗಿ ತೆಗೆಯಲಾಗಿತ್ತು. ಆದರೂ, ನಿಜವಾಗಿಯೂ 'ನಷ್ಟ' ಆಗುತ್ತಿದ್ದರೆ, ಚುನಾವಣೆ ಮುಗಿಯುವವರೆಗೆ ಕಾಯುವ ಈ ಗೋಸುಂಬೆತನವೇಕೋ ತಿಳಿಯದು.

ಇದೊಂದು ಜನ-ವಿರೋಧಿ ಕ್ರಮ ಎಂದು ಈ ಯುಪಿಎ-2 ಸರಕಾರಕ್ಕೂ ಗೊತ್ತಿದೆ ಎಂಬುದನ್ನೇ ಇದು ಜಾಹೀರು ಮಾಡುವುದಿಲ್ಲವೇ? ಇದು ಜನ-ವಿರೋಧಿ ಕ್ರಮ ಎಂದು ಅದಕ್ಕೆ ತಿಳಿದಿದ್ದರೆ, ಈ 'ತೈಲ ಕಂಪನಗಳಿಗಾಗುವ ನಷ್ಟ'ವನ್ನು ತುಂಬಲು ಅದು ಜನಗಳಿಗೆ ಹೊರೆಯಾಗದ ಬೇರೆ ಕ್ರಮಗಳ ಬಗ್ಗೆ ಯೋಚಿಸುವುದಿಲ್ಲವೇಕೆ? ಉದಾಹರಣೆಗೆ, ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಹಾಕಿರುವ ತೆರಿಗೆಗಳಲ್ಲಿ ಕಡಿತ ಇತ್ಯಾದಿ.

ಬಿಜೆಪಿಯ 'ಚಿಂತನ-ಮಂಥನ'ವೆಂಬ ಪ್ರಹಸನ.....

ಪುಟ 5 ರಿಂದ.....

ಯಡಿಯೂರಪ್ಪನವರು "ಬ್ಲೂ ಫಿಲಂ ನೋಡಿದರೆ ತಪ್ಪೇನು ? ನೀವು ನಿಮ್ಮ ಮನೆಗಳಲ್ಲಿ ನೋಡುವುದಿಲ್ಲವೇ ?" ಎಂದು ಪತ್ರಿಕಾ ಮಾಧ್ಯಮದವರನ್ನೇ ಪ್ರಶ್ನೆ ಕೇಳಿಬಿಟ್ಟರು. ಅದು ಕ್ರಿಮಿನಲ್ ಅಪರಾಧ. ಅವರ ಶಾಸಕತ್ವವನ್ನು ರದ್ದುಮಾಡಿ ಎಂದು ಇಡೀ ರಾಜ್ಯದ ಜನತೆ ಬಾಯಿ ಬಡಿದು ಕೊಂಡರೂ ತನಿಖೆಯ ಹೆಸರಿನ ತಂತ್ರ ಹೂಡಿ ಬಚಾವ್ ಮಾಡಿಸಲಿಕ್ಕೆ ನಿಂತಿರುವ ಭಂಡರಿಗೆ ಏನು ಹೇಳಿದ್ದು ಇವರು?

ಅಂಗೈ ಹುಣ್ಣಿಗೆ ಕನ್ನಡಿ ಬೇಕೇ ?

ಏನಿದೆ ಅದರಲ್ಲಿ ತನಿಖೆ ಮಾಡಲಿಕ್ಕೆ ? ಅಂಗೈ ಹುಣ್ಣಿಗೆ ಕನ್ನಡಿ ಬೇಕೆ ? ಇವುಗಳ ಬಗ್ಗೆ ಚಿಂತನೆ ಮಾಡಲಿಕ್ಕೆ ತಾನೆ ನೀವು ಬೆಂಗಳೂರಿಗೆ ಬಂದಿದ್ದು. ಏನು 'ಚಿಂತನೆ-ಮಂಥನ' ಮಾಡಿದಿರಿ? ಯಾವ ನೀತಿ ಪಾಠ ಹೇಳಿದಿರಿ? ಗಡ್ಕರಿಯವರೇ ನಿಮ್ಮ ಬಿಜೆಪಿ ಎಂಬ ಫ್ಯಾಸಿಸ್ಟ್ ಪಕ್ಷಕ್ಕೆ ದೇಶದ ನೈಜ ಸಮಸ್ಯೆಗಳ ಪರಿಹಾರದ ನಿಟ್ಟಿನಿಂದ ನೋಡಿದಲ್ಲಿ ಆ ಬಗ್ಗೆ ಗಂಭೀರ ಚಿಂತನೆ ಎಂಬುದು ಇದೆಯೇ ? ನಿಮ್ಮದೇನಾದರೂ ಚಿಂತನೆ ಎಂಬುದು ಇದ್ದರೆ ಮಾನವ ಜನಾಂಗ ಹುಟ್ಟಿ ಹಾಕಿದ ಎಲ್ಲಾ ಜೀವಪರ ಚಿಂತನೆಗಳನ್ನು ಹೊಸಕಿಹಾಕಿ ಅದರ ಹುಟ್ಟು ಅಡಗಿಸುವುದೇ ನಿಮ್ಮ 'ಚಿಂತನೆ'. ಯಾವುದೇ ವಿಷಯವನ್ನು ಮಂಥನ ಮಾಡುವ ಸಂಸ್ಕೃತಿಯನ್ನೇ ನಾಶ ಮಾಡಿದ ಕ್ರೂರ ಫ್ಯಾಸಿಸ್ಟರು ನೀವು. ಇನ್ನೊಬ್ಬರ ಧರ್ಮವನ್ನು ಇನ್ನೊಬ್ಬರ ಹಕ್ಕನ್ನು ಸಹಿಸಲಾರದ ಸರ್ವಾಧಿಕಾರಿಗಳು ನೀವು?. ರಾಜಕೀಯ ಅಧಿಕಾರವನ್ನು ಪಡೆಯಲು ಯಾವುದಕ್ಕೂ ಹೇಸದ ಕ್ರೂರಿಗಳು ನೀವು. ತನ್ನ ಆರ್ಯ ದುರಹಾಂಕಾರದಿಂದ ಇಡೀ ಜಗತ್ತನ್ನೇ ತನ್ನ ಅಪಾಯಕಾರಿ ಫ್ಯಾಸಿಸ್ಟ್ ಕೂಪಕ್ಕೆ ತಳ್ಳಿ ರಾಜಕೀಯ ಅಧಿಕಾರವನ್ನು ಪಡೆಯಲು ಕೋಟಿಗಟ್ಟಲೇ ಯಹೂದಿಗಳನ್ನು, ಕಮ್ಯೂನಿಸ್ಟರನ್ನು ಕೊಲೆಗೈದ ಫ್ಯಾಸಿಸ್ಟ್ ಸರ್ವಾಧಿಕಾರಿ ಹಿಟ್ಲರಿನ ಚಿಂತನೆಗಳಲ್ಲವೇ ನಿಮ್ಮವು? ಅವನ ತದ್ರೂಪಿಗಳಾದ ನೀವು ಅಯೋಧ್ಯೆಯಲ್ಲಿ ರಾಮಮಂದಿರವನ್ನು ಕಟ್ಟುತ್ತೇವೆಂದು ಹೇಳಿ ರಥಯಾತ್ರೆಯನ್ನು ನಡೆಸಿ ಸಾವಿರಾರು ಮುಗ್ಧ ಜೀವಗಳನ್ನು ನೀವು ಬಲಿತೆಗೆದುಕೊಳ್ಳಲಿಲ್ಲವೇ? ಅದೂ ಈ ದೇಶದಲ್ಲಿ ರಾಜಕೀಯ ಅಧಿಕಾರವನ್ನು ಪಡೆಯಲು ನೀವು ಹೂಡಿದ ಮಹಾನ್ ಷಡ್ಯಂತ್ರವಲ್ಲವೇ? ಅದರಿಂದಾಗಿ ಅಲ್ಲವೆ 1980ರ ಲೋಕಸಭಾ ಚುನಾವಣೆಯಲ್ಲಿ 2 ಸ್ಥಾನ ಗೆದ್ದಿದ್ದ ನಿಮ್ಮ ಜನಸಂಘದಿಂದ ಮರುನಾಮಕರಣಮಾಡಿಕೊಂಡ ಭಾರತೀಯ ಜನತಾಪಕ್ಷ 1997ಕ್ಕೆ ಕೇಂದ್ರದಲ್ಲಿ ಮತ್ತು ಕೆಲವು ರಾಜ್ಯಗಳಲ್ಲಿ ಅಧಿಕಾರವನ್ನು ಪಡೆದುಕೊಂಡಿದ್ದು. ರಾಮಮಂದಿರವನ್ನು ನೀವು ಮತ್ತು ನಿಮ್ಮ ಸಂಘಪರಿವಾರದವರು ಅಯೋಧ್ಯೆಯಲ್ಲಿ ಖಂಡಿತವಾಗಿಯೂ ರಾಮಮಂದಿರ ಕಟ್ಟುವುದಿಲ್ಲ. ಯಾಕೆ ಗೊತ್ತಾ ?. ನೀವು ರಾಮಮಂದಿರ ಕಟ್ಟಿದರೆ ಮಾರನೇಯ ದಿವಸವೆ



ನಿಮ್ಮ ರಾಜಕೀಯ ಅಕಾಂಕ್ಷೆಗಳಿಗೆ ಸಮಾಧಿ ಕಟ್ಟಬೇಕಾಗುತ್ತದೆ. ರಾಜಕೀಯಕ್ಕಾಗಿ ದೇವರನ್ನು ಬಳಸಿಕೊಂಡ ನಿಮ್ಮ ಚಿಂತನೆಗಳು ಎಷ್ಟು ಕ್ರೂರ ಮತ್ತು ವಂಚನೆಗಳಿಂದ ಕೂಡಿವೆ ನೋಡಿ.

ಅನಾಗರೀಕ ತಂತ್ರ

ರಾಜಕೀಯ ಲಾಭಕ್ಕಾಗಿ ದೇವರನ್ನು ಉಪಯೋಗಿಸಿದ ಹಾಗೆ ಧರ್ಮವನ್ನು ಉಪಯೋಗಿಸುವ ತಂತ್ರ ನಿಮ್ಮ ಅನಾಗರೀಕ 'ಚಿಂತನೆ'ಯ ಕೂಸು ಅಲ್ಲವೆ? ಧರ್ಮದ್ವೇಷವನ್ನು ಬಿಟ್ಟರೆ ನೀವು ರಾಜಕೀಯ ಬಿಕ್ಷುಕರಾಗಬೇಕಾಗುತ್ತದೆ. ಆ ಭಯದಿಂದಲೇ ನಿರಂತರ ಅನ್ಯ ಧರ್ಮೀಯರ ವಿರುದ್ಧ ದ್ವೇಷ. ಇದಕ್ಕಾಗಿ ನಿರಂತರ ಕೋಮುಗಲಭೆಗಳನ್ನು ಸಂಘಟಿಸುವುದು, ಅಲ್ಪಸಂಖ್ಯಾತರ ಮೇಲೆ ಗೂಬೆಕೂರಿಸಿ ಅವರಿಗೆ ಉಗ್ರಗಾಮಿಗಳ ಪಟ್ಟ ಕಟ್ಟುವುದು. ಹೈದರಾಬಾದಿನ ಮೆಕ್ಕಾ ಮಸೀದಿ ಸಮೀಪದ ಬಾಂಬ್ ಸ್ಫೋಟ ಪ್ರಕರಣದಿಂದ ಹಿಡಿದು ಸಂಜೋತಾ ರೈಲು ಸ್ಫೋಟದ ರೂವಾರಿಗಳು ನಿಮ್ಮ ಸಂಘ ಪರಿವಾರದ ಉಗ್ರಗಾಮಿಗಳಲ್ಲವೇ? ಆದರೆ ಹೈದರಾಬಾದಿನ ಮೆಕ್ಕಾ ಮಸೀದಿ ಬಾಂಬ್ ಸ್ಫೋಟವನ್ನು ಮುಸ್ಲಿಂ ಯುವಕರ ಮೇಲೆ ಹಾಕಿ 4 ವರ್ಷಗಳು ಮುಗ್ಧ ಮುಸ್ಲೀಮ್ ಯುವಕರನ್ನು ಜೈಲು ವಾಸಕ್ಕೆ ಕಳುಹಿಸಿದ್ದ ನಿಮ್ಮ ಅಮೋಘ 'ಚಿಂತನೆ'ಯಲ್ಲವೇ? ಅದಕ್ಕಿಂದ ಮುಖ್ಯ ಕರ್ನಾಟಕದ ಸಿಂಧಿಗಿಯಲ್ಲಿನ ತಹಸೀಲ್ದಾರ್ ಕಛೇರಿಯ ಮುಂದೆ ಪಾಕಿಸ್ತಾನ ಧ್ವಜವನ್ನು ಹಾರಿಸಿದ್ದು ಯಾರು? ಮುಸ್ಲಿಮರೇ? ಸಂಘ ಪರಿವಾರದ ಗುಂಪಿನ ಯುವಕರೇ ಅಲ್ಲವೇ ಅವರು ?. ಈ ರೀತಿಯಲ್ಲಿ ಅಲ್ಲವೆ ಈ ದೇಶದಲ್ಲಿ ಕೋಮುಗಲಭೆಗಳನ್ನು ಸೃಷ್ಟಿಸಿ ಮುಗ್ಧ ಜೀವಿಗಳನ್ನು ಸಾಯಿಸುವುದು. 2002 ರಲ್ಲಿ ಗುಜರಾತ್‌ನಲ್ಲಿ ನಡೆದ 2000 ಜನರ ಮಾರಣಹೋಮಕ್ಕೆ ಪ್ರೇರಣೆಯಾಗಿದ್ದು ನರಭಕ್ಷಕ ಮನಸ್ಥಿತಿಯ 'ಕಿರಾತಕ ಚಿಂತನೆ'ಯಲ್ಲವೆ? ಇಂತಹ ಚಿಂತನೆಗಳನ್ನು ಹೊಂದಿರುವ, ಇಂತಹ ಪಾತಕಿ ಕೃತ್ಯಗಳ ಇತಿಹಾಸ ಹೊಂದಿರುವ ಬಿಜೆಪಿ ಕೇಂದ್ರ ಮುಖಂಡರುಗಳು ಕರ್ನಾಟಕದ ಬಿಜೆಪಿಯವರಿಗೆ ಏನು ಬುದ್ಧಿವಾದ ಹೇಳ ಬಲ್ಲಿರಿ?

ಈ ರಾಜ್ಯದಲ್ಲಿ ಎಲ್ಲವನ್ನು ಭ್ರಷ್ಟಗೊಳಿಸಿದ ನೀವು ಮಠಗಳನ್ನು, ಮಠಾಧೀಶರನ್ನು ಭ್ರಷ್ಟಗೊಳಿಸಿದ್ದೀರಿ. ಆ ಮಠಾದೀಶರು ಯಾವ ಸ್ಥಿತಿಗೆ ಅಧ:ಪತನ ಹೊಂದಿದ್ದಾರೆಂದರೆ ನಡೆದಾಡುವ ದೇವರು ಎಂದು ಕರೆಯಲಾಗುವ ಸಿದ್ದಗಂಗಾ ಮಠಾಧೀಶರಾದ ಶ್ರೀ ಶ್ರೀ ಶ್ರೀ ಡಾ॥ ಶಿವಕುಮಾರ ಸ್ವಾಮಿಗಳು ಯಡಿಯೂರಪ್ಪ ಸಿಟ್ಟು ಮಾಡಿಕೊಂಡರು ಎಂಬ ಕಾರಣಕ್ಕೆ ಅದರ ಹಿಂದಿನ ದಿವಸವೇ ತೀರ್ಮಾನ ಮಾಡಿದ್ದ ಕೋಟಿಲಿಂಗೇಶ್ವರನನ್ನು ಸ್ಥಾಪಿಸುವ ವಿಚಾರವೇ ನನಗೆ ಗೊತ್ತಿಲ್ಲಾ ಎಂದು ಹೇಳಿಬಿಟ್ಟರು. ನೋಡಿ ಹೇಗಿದೆ ನಡೆದಾಡುವ ದೇವರ ಜಾತಿ ಪ್ರೇಮ? ಇನ್ನು ನಿತಿನ್ ಗಡ್ಕರಿ ಬಿಜೆಪಿಗೆ ಯಾವುದೇ ಜಾತಿ ಬೆಂಬಲದಿಂದ ಅಧಿಕಾರಕ್ಕೆ ಬಂದಿಲ್ಲ ಅಂದ ತಕ್ಷಣ ಪಂಚಪೀಠಗಳ ಸ್ವಾಮಿಗಳು ಸೇರಿದಂತೆ ರಾಜ್ಯದ ಬಹುತೇಕ ಮಠಾಧಿಪತಿಗಳು ಯಡಿಯೂರಪ್ಪನ ಹ... ಹಬ್ಬಕ್ಕೆ ಶುಭ ಕೋರುವ ಹೆಸರಿನಲ್ಲಿ ಅ... ಮನೆಗೆ ಧಾವಿಸಿ ಜಾತಿ ಪ್ರೇಮವ... ಪ್ರದರ್ಶಿಸಿದರು. ಇನ್ನು ಪ್ರಗತಿಪರ ಸ... ಎಂದು ನಾಮಫಲಕ ಹಾಕಿಕೊಂಡಿ... ಚಿತ್ರದುರ್ಗದ ಮುರಗ ರಾಜೇಂದ್ರಸ್ವಾ... ಬೆಂಗಳೂರಿನ ತೋಟದಪ್ಪ ಛತ್ರದಲ್ಲಿ ನ... ಸಮಾರಂಭದಲ್ಲಿ "20 ಶಾಸಕರನ್ನು ಜೊತೆ... ಇಟ್ಟು ಕೊಂಡಿರುವ ನಾಯಕರು ಏನೇ... ಮಾಡುತಾರೆ. 60 ಶಾಸಕರ ಬೆಂಬಲ... ಯಡಿಯೂರಪ್ಪ ಮತ್ತೆ ಯಾಕೆ ಮುಖ್ಯ... ಆಗಬಾರದು ?" ಎಂದು ಥೇಟ್ 3ನೇ... ರಾಜಕಾರಣಿ ರೀತಿ ಮಾತನಾಡಿದರು. ಇ... ನಿಮ್ಮ ಬಿಜೆಪಿ ಎಂಬ ಫ್ಯಾಸಿಸ್ಟ್ ಪಕ್ಷದ ಅ... 'ಚಿಂತನೆ'ಗಳ ಕ್ರೂರಮುಖಗಳಲ್ಲವೇ?

ಉಳಿಗಮಾನ್ಯ ವ್ಯವಸ್ಥೆಯ ಮ... ಗುಲಾಮಗಿರಿ ವ್ಯವಸ್ಥೆ ಚಿಂತನ... ಆಲೋಚನೆಗಳ ವಾರುಸುದಾರರಾದ ... ಶೀಲ, ನೈತಿಕತೆ ಮತ್ತು ಮಾನವೀಯ ಮೌ... ಚಿಂತನೆಗಳನ್ನು ಹೇಗೆ ಮೈಗೂಡಿಸಿ... ಸಾಧ್ಯ? ಹೆಣ್ಣನ್ನ ಒಂದು ಭೋಗ ವಸ್ತು... ಬಿಂಬಿಸಿದ ಸಾಂಸ್ಕೃತಿಕ ಚಿಂತನ... ವಾರುಸುದಾರರಾದ ನೀವು ಹೆಣ್ಣಿನ ... ಚಿತ್ರಗಳನ್ನು ಸದನದಲ್ಲಿ ನೋಡಿದರೆ ತ... ಎಂದು ಸಮರ್ಥಿಸಿಕೊಳ್ಳದೆ ಅದು ತ... ಹೇಗೆ ಬುದ್ಧಿವಾದ ಹೇಳಿ ... ತೆಗೆದುಕೊಳ್ಳುತ್ತೀರಿ? ಹೆಣ್ಣು ಪಾಪಯೋನಿ... ಹುಟ್ಟಿದವಳಾದ್ದರಿಂದ ಅವಳು ಸ್ವಾತ... ಅರ್ಹಳಲ್ಲ ಎಂದು ಹೇಳಿದ ಚಿಂತನೆ... ಮೈಗೂಡಿಸಿಕೊಂಡ ನೀವು ತನ್ನ ಹೆಂಡತಿ... ಕೊಲೆ ಮಾಡಿದವರ ಮೇಲೆ ಏನು ... ತೆಗೆದುಕೊಳ್ಳುತ್ತೀರಿ?.

ಯಶಸ್ವಿ ಮುಷ್ಕರ : ಸಿಪಿಐ(ಎಂ) ಅಭಿನಂದ...

ಬೆಲೆ ಏರಿಕೆ ನಿಯಂತ್ರಣ, ಉದ್ಯೋಗದ ಸೃಷ್ಟಿ ಹಾಗೂ ಸಂರಕ್ಷಣೆ, ಕಾರ್ಮಿಕ ಕಾನೂನ... ಬಿಗಿ ಅನುಷ್ಠಾನ ಸಾಮಾಜಿಕ ಭದ್ರತೆ, ಕನಿಷ್ಠ ಕೂಲಿ ಹೆಚ್ಚಳ, ಚಿಲ್ಲರೆ ಮಾರಾಟದಲ್ಲಿ ವಿ... ಬಂಡವಾಳ ಹೂಡಿಕೆ ವಿರೋಧಿಸಿ ಮುಂತಾದ ಪ್ರಮುಖ ಬೇಡಿಕೆಗಳ ಆಧಾರದಲ್ಲಿ ದೇ... ಎಲ್ಲಾ ಕಾರ್ಮಿಕ ಸಂಘಟನೆಗಳು ಕರೆ ನೀಡಿದ ಸಾರ್ವತ್ರಿಕ ಮಹಾ ಮುಷ್ಕರ... ಯಶಸ್ವಿಗೊಳಿಸಿದ ಎಲ್ಲಾ ದುಡಿಯುವ ಜನತೆ ಹಾಗೂ ಜನ ಸಾಮಾನ್ಯರು ... ವ್ಯಾಪಾರೋದ್ಯಮಿಗಳನ್ನು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ತುಂಬು ಹೃದಯ... ಅಭಿನಂದಿಸುತ್ತದೆ.

ಮುಷ್ಕರದಲ್ಲಿ ತೊಡಗಿದ ರೈತರು-ಕಾರ್ಮಿಕರು-ವಿದ್ಯಾರ್ಥಿ-ಯುವಜನರಿಗೆ, ... ಕಾಲೇಜ್ ಬಂದ್ ಮಾಡಿದ ವಿದ್ಯಾರ್ಥಿಗಳು, ಆಟೋಗಳನ್ನು ಬಂದ್ ಮಾಡಿದ ಕಾರ್ಮಿ... ಅಸಂಘಟಿತ ಕಾರ್ಮಿಕರಿಗೆ ಸಿಪಿಐ(ಎಂ) ಅಭಿನಂದಿಸುತ್ತದೆ.

ಇದು ಚಾರಿತ್ರಿಕ ಮುಷ್ಕರ ಆಗಿದ್ದು, ಕರ್ನಾಟಕ ರಾಜ್ಯದ ಎಲ್ಲಾ ಕಡೆಗಳಲ್ಲಿ ಮ... ಯಶಸ್ವಿಯಾಗಿದೆ. ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಮುಷ್ಕರವು ಬಂದ್‌ನ ಸ್ವರೂಪಕ್ಕೆ ತಿರು... ದೇಶಾದ್ಯಂತ ಇಂತಹ ಅಭೂತ ಪೂರ್ವ ಪ್ರತಿಕ್ರಿಯೆ ದೊರೆತಿದೆ. ಈ ಪ್ರತಿಕ್ರಿಯೆ... ಗಮನಿಸಿ ಕೇಂದ್ರದ ಯುಪಿಎ ಮತ್ತು ರಾಜ್ಯದ ಬಿಜೆಪಿ ಸರ್ಕಾರಗಳು ತಮ್ಮ ಧೋರಣೆ... ಕೈಬಿಡಬೇಕೆಂಬ ಎಚ್ಚರಿಕೆಯ ಗಂಟೆ ಇದಾಗಿದೆ. ತನ್ನ ಧೋರಣೆಗಳನ್ನು ಕೈಬಿಡದಿದ್ದಲ್ಲಿ ಮುಂ... ದಿನಗಳಲ್ಲಿ ಅತ್ಯಂತ ಪ್ರಬಲ ಪ್ರತಿರೋಧವನ್ನು ಎದುರಿಸಬೇಕಾಗುತ್ತದೆ ಮತ್ತು ಅದಕ್ಕೆ... ರಾಜಕೀಯ ಪ್ರತಿಫಲವನ್ನು ಉಣ್ಣಬೇಕಾಗುತ್ತದೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯ... ಮಂಡಳಿಯು ಎಚ್ಚರಿಸುತ್ತದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ನೆರೆ ಹೊರೆ

ರಾಜಸ್ತಾನದಲ್ಲಿ ತೃತೀಯ ರಂಗವನ್ನು ಬಲಗೊಳಿಸುವತ್ತ ದಿಟ್ಟ ಹೆಜ್ಜೆ

ಕಾಂಗ್ರೆಸ್‌ನ್ನು ಸೋಲಿಸಿ, ಬಿಜೆಪಿಯನ್ನು ತಿರಸ್ಕರಿಸಿ, ಎಡ ಮತ್ತು ಪ್ರಜಾಸತ್ತಾತ್ಮಕ ರಂಗವನ್ನು ಬಲಪಡಿಸಿ. ಇದು ರಾಜಸ್ತಾನದ 20ನೇ ರಾಜ್ಯ ಸಮ್ಮೇಳದ ಕರೆ. ಮೂರು ದಿನಗಳ ಪಕ್ಷದ ಈ ಉತ್ಸವ ಕೊನೆಗೊಂಡದ್ದು ಸಿಕಾರ್‌ನಲ್ಲಿ ನಡೆದ ಬೃಹತ್ ರ್‍ಯಾಲಿಯ ಮೂಲಕ. ಸಿಕಾರ್‌ನ ರಾಮಲೀಲಾ ಮೈದಾನದಲ್ಲಿ ಅಂದು ಕಂಡದ್ದು ನಿಜಕ್ಕೂ ವಿಸ್ಮಯ. ಎಲ್ಲೆಲ್ಲೂ ಕೆಂಪು ಸೇನೆ. ಪಕ್ಷದ ರಾಜಕೀಯ ಮತ್ತು ಸಂಘಟನಾತ್ಮಕ ಬಲ ಇಲ್ಲಿ ಎದ್ದುಕಂಡಿತು. ಕುಡುಗೋಲು ಸುತ್ತಿಗೆಯ ಚಿಹ್ನೆ ಹೊತ್ತು ಕೆಂಪು ಪತಾಕೆಯನ್ನು ಹೊತ್ತ ಸಾವಿರಾರು ಪುರುಷರು ಮಹಿಳೆಯರು ರ್‍ಯಾಲಿಯಲ್ಲಿ ದಿಟ್ಟ ಘೋಷಣೆಗಳೊಂದಿಗೆ ಹೆಜ್ಜೆ ಹಾಕಿದ್ದರು. ಮುಸ್ಲಿಂ ಮಹಿಳೆಯರು ರ್‍ಯಾಲಿಯಲ್ಲಿ ಗಣನೀಯ ಸಂಖ್ಯೆಯಲ್ಲಿದ್ದರು.

ಇತಿಹಾಸದಲ್ಲಿ ಮೊಟ್ಟಮೊದಲ ಬಾರಿಗೆ ಇಂತಹ ಜನಸ್ತೋಮವನ್ನು ಕಂಡ ಪತ್ರಿಕೆಗಳೂ ಮೆಚ್ಚುಗೆಯ ವರದಿಯನ್ನು ಪ್ರಕಟಿಸಿದವು. ಶೇಖಾವತಿ ಪ್ರಾಂತ್ಯದಲ್ಲಿ ತೃತೀಯ ರಂಗದ ಬಲಪ್ರದರ್ಶನ ಎಂಬ ಹೆಡ್ಡಿಂಗ್‌ಗಳು ಪತ್ರಿಕೆಯಲ್ಲಿ ರಾರಾಜಿಸಿದವು. ರಾಜ್ಯದ ಪ್ರಮುಖ ಪತ್ರಿಕೆಗಳಾದ ರಾಜಸ್ತಾನ ಪತ್ರಿಕಾ, ದೈನಿಕ್ ಭಾಸ್ಕರ್, ದೈನಿಕ್ ಅಂಬರ್ ಮತ್ತು ದೈನಿಕ ಪಂಜಾಬ್ ಕೇಸರಿ ಪತ್ರಿಕೆಗಳು ಕಾಂಗ್ರೆಸ್-ಬಿಜೆಪಿಗೆ ಪರ್ಯಾಯ ಶಕ್ತಿಯಾಗಿ ಸಿಪಿಐಎಂನ ಉದಯ, ಸಿಕಾರ್ ಮೈದಾನದಲ್ಲಿ ಹರಿದ ಕೆಂಪು ಸಮುದ್ರ ಎಂಬ ತಲೆಬರಹಗಳನ್ನು ನೀಡಿತ್ತು.

ಉತ್ಸಾಹ ಭರಿತ ರ್‍ಯಾಲಿಗೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್ ಚಾಲನೆ ನೀಡಿದರು. ಪಕ್ಷದ ಉಸ್ತುವಾರಿ ಹೊತ್ತ ಕೇಂದ್ರ ಸಮಿತಿ ಸದಸ್ಯ ಹನನ್ ಮೊಲ್ಲಾ, ಸ್ಥಳೀಯ ಜನಪ್ರಿಯ ಶಾಸಕ ಅಮ್ರಾ ರಾಮ್ ರ್‍ಯಾಲಿಯ ವೇದಿಕೆಯನ್ನು ಅಲಂಕರಿಸಿದ್ದರು.

ಕೋಯಿಕ್ಕೋಡ್ ಮಹಾಧಿವೇಶನದ ಸಂದರ್ಭದಲ್ಲಿ ಪಕ್ಷ ಎದುರಿಸುತ್ತಿರುವ ರಾಜಕೀಯ ಪರಿಸ್ಥಿತಿಯನ್ನು ಕಾರಟ್ ವಿವರಿಸಿದರು. ಸದ್ಯದ ಪರಿಸ್ಥಿತಿಯನ್ನು ಎದುರಿಸಲು ಕಾರ್ಯತಂತ್ರಗಳನ್ನು ಮಹಾಧಿವೇಶನ ರೂಪಿಸಲಿದೆ ಎಂದು ಅವರು ಭರವಸೆ ವ್ಯಕ್ತಪಡಿಸಿದರು.

ಪಕ್ಷದ ರಾಜ್ಯ ಕಾರ್ಯದರ್ಶಿ ಪ್ರೊಫೆಸರ್ ವಾಸುದೇವ್ ವಿವರವಾದ ವರದಿಯನ್ನು ಮಂಡಿಸಿದರು. ರಾಜ್ಯ ಕಂಡ ಸಮರಧೀರ ಚಳವಳಿಗೆ ನೇತೃತ್ವ ನೀಡಿದ ಪಕ್ಷದ ಜಿಲ್ಲಾ ಘಟಕಗಳನ್ನು ಈ ಸಂದರ್ಭದಲ್ಲಿ ಅಭಿನಂದಿಸಲಾಯಿತು. ಕಳೆದ ಅವಧಿಯಲ್ಲಿ ರಾಜ್ಯದಲ್ಲಿ ಪಕ್ಷದ ಪ್ರಭಾವ ಮತ್ತು ಸಂಘಟನಾ ಸಾಮರ್ಥ್ಯ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿರುವುದನ್ನು ವರದಿಯಲ್ಲಿ ಉಲ್ಲೇಖಿಸಲಾಗಿತ್ತು.

ಕಳೆದ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಪಕ್ಷ 34 ಸ್ಥಾನಗಳಲ್ಲಿ ಸ್ಪರ್ಧಿಸಿತ್ತು. ಮೂರು ಸ್ಥಾನಗಳಲ್ಲಿ ಜಯಗಳಿಸಿತ್ತು. ನಾಲ್ಕು ಸ್ಥಾನಗಳಲ್ಲಿ 20 ಸಾವಿರಕ್ಕೂ ಅಧಿಕ ಮತ, ಇತರ ನಾಲ್ಕು ಕ್ಷೇತ್ರಗಳಲ್ಲಿ 15 ಸಾವಿರಕ್ಕೂ ಅಧಿಕ ಮತಗಳನ್ನು ಪಡೆದಿತ್ತು. ಒಟ್ಟು 3.91 ಲಕ್ಷ ಮತ ಗಳಿಕೆ ಮೂಲಕ ಸಿಪಿಐಎಂ ರಾಜ್ಯದಲ್ಲಿ ಮಹತ್ವದ ಸ್ಥಾನ ಪಡೆದಿತ್ತು. ಲೋಕಸಭಾ ಚುನಾವಣೆಯಲ್ಲೂ ಸಿಕಾರ್ ಕ್ಷೇತ್ರದಲ್ಲಿ 1.61 ಲಕ್ಷ ಮತಗಳನ್ನು ಪಡೆದು ತ್ರಿಕೋನ ಸ್ಪರ್ಧೆ ನೀಡಿತ್ತು.

ಸ್ಥಳೀಯ ಸಂಸ್ಥೆ ಚುನಾವಣೆಯಲ್ಲೂ ಉತ್ತಮ ಪ್ರದರ್ಶನ ನೀಡಿರುವ ಸಿಪಿಐ(ಎಂ) ಅಭ್ಯರ್ಥಿಗಳು, ಸಿಕಾರ್, ಸುರತ್‌ಗಢ್, ಉದಯ್‌ಪುರದಲ್ಲಿ ಗಣನೀಯ ಸಂಖ್ಯೆಯಲ್ಲಿ ಆರಿಸಿ ಬಂದಿದ್ದರು. ಪಂಚಾಯತ್ ಸಮಿತಿಗಳಲ್ಲಿ ಸಿಪಿಐ(ಎಂ)ನ ಪ್ರಾತಿನಿಧ್ಯ 41ರಿಂದ 51ಕ್ಕೇರಿದ್ದರೆ, ಜಿಲ್ಲಾ ಪರಿಷತ್‌ನಲ್ಲಿ 9 ಸ್ಥಾನಗಳ ಗಳಿಕೆ ಮತ್ತು ಜುನ್‌ಜುನು ಜಿ.ಪಂ.ನಲ್ಲಿ ಉಪಾಧ್ಯಕ್ಷ ಸ್ಥಾನ ಹಾಗೂ ದೋಂಡ್‌ನಲ್ಲಿ ಅಧ್ಯಕ್ಷ ಸ್ಥಾನ ಪಕ್ಷಕ್ಕೆ ಒಲಿದಿತ್ತು.

ಇಷ್ಟೇ ಅಲ್ಲದೆ, ಗ್ರಾಮೀಣ ಸಹಕಾರಿ ವಲಯದಲ್ಲಿ ಡಜನ್‌ಗಟ್ಟಲೆ ಅಧ್ಯಕ್ಷ ಸ್ಥಾನ ಸಿಪಿಐ(ಎಂ) ಪಾಲಾಗಿತ್ತು. ರೈತರ ಮಂಡಿ ಸಮಿತಿಗಳಲ್ಲಿ ಜಯ ಗಳಿಸಿದ್ದರೆ, 60 ಸರಪಂಚ್ ಮತ್ತು ನೂರಕ್ಕೂ ಅಧಿಕ ಪಂಚರ ಸ್ಥಾನಗಳಲ್ಲಿ ಪಕ್ಷದ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದರು.

ಇದೇ ವೇಳೆ, ಪಕ್ಷದ ಸದಸ್ಯತ್ವ 4167ರಿಂದ 4821ಕ್ಕೇರಿದೆ. ನಾಲ್ಕು ವರ್ಷಗಳ ಅವಧಿಯಲ್ಲಿ ಸುಮಾರು 16 ಶೇಕಡಾ ಹೆಚ್ಚಳ ಸಾಧಿಸಲಾಗಿದೆ.

ಸಾಮೂಹಿಕ ಸದಸ್ಯತ್ವದಲ್ಲಿ ವಿದ್ಯಾರ್ಥಿ ರಂಗದ ಪ್ರಗತಿ ಮಹತ್ವದ್ದು, ನಾಲ್ಕು ವರ್ಷಗಳಲ್ಲಿ 39 ಸಾವಿರದಿಂದ 66 ಸಾವಿರಕ್ಕೆ ಸದಸ್ಯತ್ವದ ನೆಗೆತ ಕಂಡಿದೆ. ಅಂದರೆ ಸುಮಾರು ಶೇಕಡಾ 66 ಪ್ರಗತಿ ಕಂಡುಬಂದಿದೆ. ಇದು ಪಕ್ಷದಲ್ಲಿ ಯುವ ರಕ್ತ ಹರಿಯುತ್ತಿದೆ ಎಂಬುದರ ಸೂಚನೆ. ಯುವ ಹಾಗೂ ಮಹಿಳಾ ಸಂಘಟನೆಗಳಲ್ಲೂ ಗಮನಾರ್ಹ ಹೆಚ್ಚಳ ಕಂಡುಬಂದಿದೆ.

ಪಕ್ಷದ ಶಾಸಕರು ವಿಧಾನಸಭೆಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಸಮ್ಮೇಳನ ತೃಪ್ತಿ ವ್ಯಕ್ತಪಡಿಸಿತು.

ಅಂತಿಮವಾಗಿ ಸಮ್ಮೇಳನ 31 ಸದಸ್ಯರ ಹೊಸ ರಾಜ್ಯ ಸಮಿತಿಯನ್ನು ಆರಿಸಿತು. 10 ಸದಸ್ಯರ ಕಾರ್ಯದರ್ಶಿ ಮಂಡಳಿ ಹಾಗೂ ಪ್ರೊಫೆಸರ್ ವಾಸುದೇವ್ ಅವರನ್ನು ಪಕ್ಷದ ರಾಜ ಕಾರ್ಯದರ್ಶಿಯಾಗಿ ಚುನಾಯಿಸಲಾಯಿತು. ಇದೇ ಸಂದರ್ಭದಲ್ಲಿ ರಾಜ್ಯ ಸಮಿತಿಯಿಂದ ಹೊರ ಹೋಗುತ್ತಿರುವ ಸದಸ್ಯರಿಗೆ ಗೌರವಪೂರ್ವಕ ಸನ್ಮಾನ ಮಾಡಲಾಯಿತು.

ಆಶ್ವಾಸನೆ

ಅಂಬಾನಿ ಅಂತವರ ಒಡಲೆಂಬ ಕಡಲು
ತುಂಬಿಸಲು ಹೆಣಗುವೆವು ಆದಷ್ಟು ಮೊದಲು
ಅದುವರೆಗೂ ಮಾತ್ರವೇ ಬಡಜನರು ಗಾಳಿ
ನುಂಗುವುದು
ಆಮೇಲೆ ದಿನಕ್ಕೊಂದು ಕೋಳಿ

– ವಿಡಂಬಾರಿ

ಪಂಜಾಬ್ ಚುನಾವಣೆ 2012, ಜನತೆಯಲ್ಲಿ ಹೊಸ ನಿರೀಕ್ಷೆ ಹುಟ್ಟಿಸುತ್ತಿರುವ "ಸಂಜಾ ಮೋರ್ಚಾ"

ಪಂಜಾಬ್‌ನಲ್ಲಿ ಕೇವಲ ಜನರ ಭಾವನಾತ್ಮಕ ವಿಚಾರಗಳ ಮೇಲೆ ನಡೆಯುತ್ತಿದ್ದ ಚುನಾವಣೆಗಳು ಮೊದಲ ಬಾರಿಗೆ ಜನರ ಸಮಸ್ಯೆಗಳಾದ ಭ್ರಷ್ಟಾಚಾರ, ಬೆಲೆ ಏರಿಕೆ, ನಿರುದ್ಯೋಗ ಮತ್ತು ಅಭಿವೃದ್ಧಿಯ ಕುರಿತು ಚರ್ಚೆಗಳು ಆರಭಿಸಿವೆ. ರಾಜ್ಯದಲ್ಲಿ ಪ್ರಮುಖ ಪಕ್ಷಗಳಾಗಿರುವ ಅಕಾಲಿದಳ-ಬಿಜೆಪಿ, ಕಾಂಗ್ರೆಸ್‌ಗಳು ರಾಜ್ಯದ ಜನರ ನೈಜ ಪ್ರಶ್ನೆಗಳನ್ನು ಮಾತಾನಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದಕ್ಕೆ ಮುಖ್ಯ ಕಾರಣ "ಸಂಜಹಾ ಮೋರ್ಚಾ". ರಾಜ್ಯದ ಪೀಪಲ್ಸ್ ಪಾರ್ಟಿ ಆಫ್ ಪಂಜಾಬ್(ಪಿಪಿಪಿ), ಸಿಪಿಐಎಂ, ಸಿಪಿಐ ಮತ್ತು ಎಸ್‌ಡಿಎ(ಲಂಗೋಲ್) ಮತ್ತಿತರೆ ಜಾತ್ಯಾತೀತ – ಪರ್ಯಾಯ ರಾಜಕೀಯ ಶಕ್ತಿಗಳು ಒಂದೆಡೆ ಸೇರಿ ಸಂಜಹಾ ಮೋರ್ಚಾವನ್ನು ಸ್ಥಾಪಿಸಿಕೊಂಡು ಬಿಜೆಪಿ-ಎಸ್‌ಎಡಿ ಮತ್ತು ಕಾಂಗ್ರೆಸ್‌ಗೆ ಪರ್ಯಾಯವಾಗಿ ಜನರ ಸಮಸ್ಯೆಗಳ ಆಧಾರದಲ್ಲಿ ಚುನಾವಣೆಗಳನ್ನು ಎದುರಿಸುತ್ತಿವೆ. ಇದುವರೆಗು ರಾಜ್ಯದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಕೂಟಗಳು ನಿರಂತರವಾಗಿ ಅಧಿಕಾರವನ್ನು ನಡೆಸಿಕೊಂಡು ಬಂದಿದ್ದು ಇವುಗಳಿಗೆ ಪರ್ಯಾಯವಾಗಿ ಪಿಪಿಪಿ ಮತ್ತು ಎಡಪಕ್ಷಗಳು ಮೂರನೇ ಪರ್ಯಾಯವೊಂದನ್ನು ಕಟ್ಟಿರುವುದು ನೊಂದ, ಬೇಸತ್ತ ಜನರಿಗೆ ಆಶಾಕಿರಣವಾಗಿದೆ.

ಸಂಜಾ ಮೋರ್ಚಾ ಪ್ರಸ್ತುತ ಚುನಾವಣೆಯಲ್ಲಿ ಎತ್ತಿರುವ ಭ್ರಷ್ಟಾಚಾರ, ಬೆಲೆ ಏರಿಕೆ, ನಿರುದ್ಯೋಗ, ಕೃಷಿ ಬಿಕ್ಕಟ್ಟು, ರೈತರ ಆತ್ಮಹತ್ಯೆಗಳು, ಆರ್ಥಿಕ ಬಿಕ್ಕಟ್ಟು, ದುರ್ಬಲ ಆರೋಗ್ಯ ವ್ಯವಸ್ಥೆ, ಉದ್ಯೋಗಗಳಿಲ್ಲದೆ ದುಷ್ಚಟಗಳಿಗೆ ಬಲಿಯಾಗುತ್ತಿರುವ ಯುವಜನತೆ, ಚೇತರಿಸಿಕೊಳ್ಳದ ಕೈಗಾರಿಕೆಗಳು ಇಂತಹ ವಿಚಾರಗಳ ಕುರಿತು ಎಲ್ಲಾ ರಾಜಕೀಯ ಪಕ್ಷಗಳು ತಮ್ಮ ಚುನಾವಣಾ ವಿಷಯವನ್ನಾಗಿಸಿ ಕೊಳ್ಳಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸಿದೆ. ಪ್ರತಿ ಚುನಾವಣೆಗಳಲ್ಲೂ ಧಾರ್ಮಿಕ ವಿಚಾರಗಳನ್ನೇ ಮುಂದುಮಾಡಿ ಚುನಾವಣೆಗಳನ್ನು ಎದುರಿಸುತ್ತಿದ್ದ ಅಖಾಲಿದಳವು ಈ ಬಾರಿ ಜನತೆಯ ಸಮಸ್ಯೆಗಳ ಕುರಿತು ಮಾತನಾಡಲು ಪ್ರಾರಂಬಿಸಿದೆ ಇದು ಒಳ್ಳೆಯ ಬೆಳವಣಿಗೆಯಾಗಿದೆ.

ಕಾಂಗ್ರೆಸ್ ಆಡಳಿತ ವಿರೋಧಿ ಮತಗಳನ್ನು ಸೆಳೆಯಲು ಪ್ರಯತಿಸಿದರೂ ಕಾಂಗ್ರೆಸ್ ಮತ್ತು ಬಿಜೆಪಿಯ ಆರ್ಥಿಕ ನೀತಿಗಳು ಒಂದೆಯಾಗಿದು ಇವು ನವ ಉದಾರೀಕರಣ ನೀತಿಗಳಿಗೆ ಪೂರಕವಾಗಿವೆ ಎಂಬುದನ್ನು ಈಗಾಗಲೆ ದೇಶ ಕಂಡುಕೊಂಡಿದೆ.

ಸಿಪಿಐಎಂ 9 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದು ಸಿಪಿಐಎಂ ನ ಪೊಲಿಟ್ ಬ್ಯೂರೋ ಸದಸ್ಯರುಗಳಾದ ಕಾಂ॥ಸೀತಾರಮ್ ಯೆಚೂರಿ, ಕಾಂ॥ಬೃಂದಾ ಕಾರಟ್ ಮತ್ತು ಕೇಂದ್ರ ಸಮಿತಿ ಸದಸ್ಯರುಗಳಾದ ಕಾಂ॥ನಿಲೋತ್ಪಲ್ ಬಸು ಕಾಂ॥ಮೊಹಮದ್ ಸಲೀಮ್ ಇವರುಗಳು ಪಕ್ಷದ ಮತ್ತು ಸಂಜಾ ಮೋರ್ಚಾದ ಅಭ್ಯರ್ಥಿಗಳ ಪರ ರಾಜ್ಯಾದ್ಯಂತ ಪ್ರಚಾರ ಕೈಗೊಂಡಿದ್ದಾರೆ. ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಮೂಲಕ ಜನರ ಬಳಿ ಹೊರಟಿರುವ ಸಂಜಾ ಮೋರ್ಚಾ ಈ ಬಾರಿಯ ಚುನಾವಣೆಯಲ್ಲಿ ಉತ್ತಮ ಫಲಿತಾಂಶವನ್ನು ನಿರೀಕ್ಷಿಸಿದೆ.

ಹೆಚ್.ಆರ್.ನವೀನ್‌ಕುಮಾರ್

RNI No. KARKAN /2006/17926 Posted on every Satuarday
Postal Reg. No. RNP/KA/BGS/2078/2010-12 Posted at MBC Bangalore GPO

ಮಾರ್ಚ್ 8 : ಅಂತರ್ರಾಷ್ಟ್ರೀಯ ಮಹಿಳಾ ದಿನಾಚರಣೆ ಶತಮಾನೋತ್ಸವ

ಹೋರಾಟದ ಸಂಕಲ್ಪ ಗಟ್ಟಿಗೊಳಿಸಬೇಕಾದ ದಿನ

ನೂರು ವರ್ಷ ತುಂಬಿದರೂ ಮುಂದುವರಿದ ಹೋರಾಟ

'ಪ್ರಕಾಶಿಸುತ್ತಿರುವ ಭಾರತ' ದಲ್ಲಿ ರಾಜಕೀಯಹಾಗೂ ಆರ್ಥಿಕ ಕ್ಷೇತ್ರದಲ್ಲಿ ಸಿಕ್ಕಿರುವ ಒಂದಷ್ಟು ಮಹಿಳಾ ಪ್ರಾತಿನಿಧ್ಯವನ್ನು ನೋಡಿ ಮಹಿಳಾ ಸಮಾನತೆ ಸಿಕ್ಕೇಬಿಟ್ಟಿದೆ ಎಂದು ಭಾವಿಸಬಹುದೇ?

ಜಿ.ಮಮತಾ

ಪ್ರತಿದಿನ ಮಹಿಳೆಯರು ಭೀಕರ ಸನ್ನಿವೇಶಗಳನ್ನು ಎದುರಿಸಿದ ವಿಚಾರಗಳನ್ನು ಕೇಳಿದಾಗೆಲ್ಲ ನಾವು ಛೇ ಹೀಗಾಗಬಾರದಿತ್ತು ಎಂದು ನೊಂದು ನುಡಿಯುತ್ತೇವೆ. ಇಮೇಲ್ ಮಾಡುತ್ತೇವೆ. ಮೊಂಬತ್ತಿಗಳನ್ನು ಹಚ್ಚುತ್ತೇವೆ. ಸೌಹಾರ್ದ ಸಂದೇಶಗಳನ್ನು ಎದುರಿಸುತ್ತೇವೆ. ಈ ರೀತಿಯ ಪ್ರತಿಕ್ರಿಯೆ ಬರುವುದು ಕೆಲವೇ ಜನರಿಂದ ಮಾತ್ರವೇ ಎಂಬುದು ನಮಗೆ ಗೊತ್ತು. ಮಹಿಳೆಯರು ಬಹಳ ಒಳ್ಳೆಯ ಸ್ಥಿತಿಯಲ್ಲಿದ್ದಾರೆ ಎಂಬ ಭ್ರಮೆಯಲ್ಲಿ ಬಹುತೇಕ ಜನರು ಇದ್ದಾರೆ. ರಾಷ್ಟ್ರಪತಿ ಪ್ರತಿಭಾ ಪಾಟೀಲ್, ಲೋಕಸಭೆ ಸ್ಪೀಕರ್ ಮೀರಾಕುಮಾರ್, ಯುಪಿಎ ಅಧ್ಯಕ್ಷೆ ಸೋನಿಯಾ ಗಾಂಧಿ ಮತ್ತು ಲೋಕ ಸಭೆಯಲ್ಲಿ ಪ್ರತಿಪಕ್ಷ ನಾಯಕಿ ಸುಷ್ಮಾ ಸ್ವರಾಜ್ ಇವರನ್ನು ಕಂಡು ಒಹ್ ನಾವು ಅದೆಷ್ಟು ಮುಂದೆ ಸಾಗಿಬಂದಿದ್ದೇವೆ ನೋಡಿ ಎಂದು ಹೆಮ್ಮೆಯಿಂದ ಬೀಗುತ್ತೇವೆ.

ಮಹಿಳೆಯರು ಪ್ರಕಾಶಿಸುತ್ತಿದ್ದಾರೆ?!

ರಾಜಕೀಯ ಮಾತ್ರವಲ್ಲ, ಆರ್ಥಿಕ ಕ್ಷೇತ್ರವನ್ನೂ ಗಮನಿಸಿ. ಕಾರ್ಪೊರೇಟ್ ವಲಯದಲ್ಲಿ ಅತ್ಯುನ್ನತ ಸ್ಥಾನ ಪಡೆಯಲು ಹಲವು ದಶಕಗಳಿಂದ ಹೋರಾಟ ನಡೆಸುತ್ತಿದ್ದರೂ ನ್ಯೂಯಾರ್ಕ್ ಮತ್ತು ಲಂಡನ್‌ನಲ್ಲಿ ಮಹಿಳಾ ಬ್ಯಾಂಕರ್‌ಗಳು ತೀರಾ ಕಡಿಮೆ. ಆದರೆ ಭಾರತದಲ್ಲಿ ಹಾಗಿಲ್ಲ. ಅಮೇರಿಕ, ಬ್ರಿಟನ್‌ಗೆ ಹೋಲಿಸಿದರೆ ಇನ್ನೂ ತಾರುಣ್ಯದಲ್ಲಿರುವ ಭಾರತದ ಆರ್ಥಿಕ ಉದ್ಯಮದಲ್ಲಿ ಅನೇಕ ಮಹಿಳೆಯರು ಉನ್ನತ ನೀತಿ ನಿರೂಪಣೆ ಮಾಡುವ ಸ್ಥಾನದಲ್ಲಿರುವುದು ಮಾತ್ರವೇ ಅಲ್ಲ. ಅನೇಕ ಮಹಿಳೆಯರು ಪ್ರಮುಖ ಸ್ಥಾನಗಳನ್ನು ನಿರ್ವಹಿಸುತ್ತಿದ್ದಾರೆ.

ಭಾರತದಲ್ಲಿ ಎಚ್.ಎಸ್.ಬಿ.ಸಿ. ಜೆಪಿ ಮಾರ್ಗನ್‌ಚೇಸ್, ರಾಯಲ್ ಬ್ಯಾಂಕ್ ಆಫ್ ಸ್ಕಾಟ್‌ಲ್ಯಾಂಡ್, ಯುಬಿಎಸ್ ಮತ್ತು ಫಿಡೆಲಿಟಿ ಇಂಟರ್‌ನ್ಯಾಷನಲ್ ಆರ್ಥಿಕ ಸಂಸ್ಥೆಗಳನ್ನು ಮಹಿಳೆಯರೇ ನಡೆಸುತ್ತಿದ್ದಾರೆ. ಅದೇ ರೀತಿ, ದೇಶದ ಅತಿದೊಡ್ಡ ಎರಡನೇ ಬ್ಯಾಂಕ್ ಐಸಿಐಸಿಐ, ಅತಿದೊಡ್ಡ ಮೂರನೇ ಬ್ಯಾಂಕ್ ಆಕ್ಸಿಸ್ ಬ್ಯಾಂಕ್‌ಗಳನ್ನು ಕೂಡ ಮಹಿಳೆಯರೇ ಮುನ್ನಡೆಸುತ್ತಿದ್ದಾರೆ. ಕೊಟಕ್ ಮಹೀಂದ್ರ ಮತ್ತು ಜೆಪಿ ಮಾರ್ಗನ್ ಚೇಸನ್ ಬಂಡವಾಳ ಹೂಡಿಕೆ ಕಾರ್ಯಾಚರಣೆಗಳನ್ನು ಹಾಗೂ ಐಸಿಐಸಿಐನ ಇಕ್ವಿಟಿ ವಿಭಾಗಗಳಿಗೆ ಮಹಿಳೆಯರದ್ದೇ ಸಾರಥ್ಯ. ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಅರ್ಧದಷ್ಟು ಗವರ್ನರ್‌ಗಳು ಮಹಿಳೆಯರೇ. ಅಂದರೆ ಭಾರತೀಯ ಮಹಿಳೆಯರು 'ಪ್ರಕಾಶಿಸುತ್ತಿದ್ದಾರೆ'!.



ಆದರೆ ಅದು ವಾಸ್ತವತೆಯೋ? ಅಥವಾ ಮಾಧ್ಯಮಗಳು ಮತ್ತು ಸಮಾಜದ ಆಳುವ ವರ್ಗಗಳು ಮಹಿಳಾ ಸಮಾನತೆಯಿದೆ ಎಂದು ನಂಬುವಂತೆ ಹುಟ್ಟಿಸಿದ ಭ್ರಮೆಗೆ ನಾವು ಒಳಗಾಗಿದ್ದೇವೆಯೇ? 'ಮಹಿಳಾ ಶಕ್ತಿ' ಹಾಗೂ ಸಮಾನತೆ ಎಂಬ ಬಿಸಿಲು ಕುದುರೆಯನ್ನು ನಮ್ಮ ಮುಂದೆ ಸೃಷ್ಟಿಸಲಾಗಿದೆಯೇ?

ಈ ರೀತಿಯ ಪ್ರಶ್ನೆಗಳನ್ನು ಮುಂದಿಡಲು ಕಾರಣಗಳಿವೆ. ಯಾಕೆಂದರೆ, ಹಲವಾರು ವರ್ಷಗಳಿಂದ ಮಹಿಳೆಯರು ನಿಸ್ಸಂಶಯವಾಗಿಯೂ ಅನೇಕ ಸಾಧನೆಗಳನ್ನು ಮಾಡಿರುವವರಾದರೂ ಮಹಿಳೆ ಈಗಲೂ ಅನ್ಯಾಯ, ದೌರ್ಜನ್ಯಗಳಿಗೆ ಒಳಗಾಗುತ್ತಿದ್ದಾರೆ. ಅವರ ಮೇಲೆ ಅತ್ಯಾಚಾರವಾಗುತ್ತಿದೆ. ಅವರನ್ನು ಮಾರಾಟ ಮಾಡಲಾಗುತ್ತಿದೆ. ಅವರ ಹಕ್ಕುಗಳನ್ನು ಉಲ್ಲಂಘಿಸಲಾಗುತ್ತಿದೆ. ಲಿಂಗತಾರತಮ್ಯಗಳ ವಿರುದ್ಧ ಮಹಿಳಾ ಆಂದೋಲನ ಮುಂದುವರೆಯುತ್ತಿದ್ದರೂ . ಕೆಲವು ಹೋರಾಟಗಳನ್ನು ಹೊರತುಪಡಿಸಿದರೆ ಉಳಿದಂತೆ ಮಹಿಳಾ ಚಳುವಳಿಯ ಗುರಿ ಸಾಧನೆಯಾಗಿದೆ ಎಂದು ಬಹಳಷ್ಟು ಜನರು ಭಾವಿಸಿದ್ದಾರೆ. ನಮ್ಮನ್ನು ನಾವು ಮೂರ್ಖರನ್ನಾಗಿಸಿಕೊಳ್ಳುವುದನ್ನು ನಿಲ್ಲಿಸಲು ಇದು ಸಕಾಲವಾಗಿದೆ. ಸಾಧಿಸಿದ್ದು ಅಲ್ಪ, ಸವೆಸಬೇಕಾದ ಹಾದಿ ಬಲುದೂರದ್ದು ಎಂಬುದನ್ನು ಅರಿತು ಕಾರ್ಯೋನ್ಮುಖವಾಗಬೇಕಿದೆ.

ಮಹಿಳೆಯರ ಸ್ಥಿತಿಗತಿ : ಕೆಲವು ಅಂಕಿ ಅಂಶಗಳು

2008ರ ಲಿಂಗ ಅಸಮಾನತೆ (ಇಂಡೆಕ್ಸ್) (gender gap index) ವಿಚಾರದಲ್ಲಿ 130 ದೇಶಗಳ ಪೈಕಿ ಭಾರತ 113ನೇ ಸ್ಥಾನದಲ್ಲಿದೆ. ಅನೇಕ ದೇಶಗಳಲ್ಲಿ ದುಡಿಯುವ ಜನರ ಪೈಕಿ ಮಹಿಳೆಯರು ಅರ್ಧದಷ್ಟು ಅಥವಾ ಅದಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಇದ್ದರೂ ಯುರೋಪಿಯನ್ ಒಕ್ಕೂಟದಲ್ಲಿ 2008 ರಲ್ಲಿ 300 ಅತಿ ದೊಡ್ಡ ಕಂಪನಿಗಳ ಆಡಳಿತ ಮಂಡಳಿಗಳಲ್ಲಿ ಇದ್ದ ಮಹಿಳೆಯರ ಪಾಲು ಕೇವಲ ಶೇ.9.7 ಅಮೇರಿಕದಲ್ಲಿ ಇಂಥ 500 ಕಂಪನಿಗಳ ಆಡಳಿತಗಳಲ್ಲಿ ಮಹಿಳೆಯರ ಪ್ರಾತಿನಿಧ್ಯ ಸುಮಾರು ಶೇ.15 ಅಷ್ಟೆ. ಏಷ್ಯಾ ದೇಶಗಳ ವಿಚಾರದಲ್ಲಂತೂ ಇದು ಇನ್ನೂ ದಯನೀಯ. ಭಾರತದಲ್ಲಿ ಆಡಳಿತ ಮಂಡಳಿಗಳಲ್ಲಿ ಮಹಿಳೆಯರ ಪಾಲುಗಾರಿಕೆ ಕೇವಲ ಶೇಕಡ ಐದರಷ್ಟು ಆಗಿದೆ.

ರಾಷ್ಟ್ರೀಯ ಅಪರಾಧ ದಾಖಲೆಗಳ ಸಂಸ್ಥೆ (ಎನ್‌ಸಿಆರ್‌ಬಿ) ಯಿಂದ ಲಭ್ಯವಾದ ತೀರಾ ಇತ್ತೀಚಿನ, ಅಂದರೆ 2007 ರ ಅಂಕಿ ಸಂಖ್ಯೆಗಳ ಪ್ರಕಾರ ದೇಶದಲ್ಲಿ ಕ್ಷಿಪ್ರಗತಿಯಲ್ಲಿ ಹೆಚ್ಚುತ್ತಿರುವ 10 ಅಪರಾಧಗಳ ಪೈಕಿ ಏಳು ಮಹಿಳೆಯರ ವಿರುದ್ಧ ಅಪರಾಧಗಳಾಗಿವೆ. ಭಾರತೀಯ ದಂಡಸಂಹಿತೆ (ಐಪಿಸಿ) ಯನ್ವಯ ಶಿಕ್ಷಾರ್ಹವಾದ ಎಲ್ಲಾ ಅಪರಾಧಗಳಲ್ಲಿ ಹಿಂದಿನ ವರ್ಷಕ್ಕಿಂತ ಶೇಕಡ 5 ರಷ್ಟು ಏರಿಕೆಯಾಗಿದೆ. ವರದಕ್ಷಿಣೆ ಸಾವುಗಳ ಪ್ರಮಾಣ ಶೇಕಡ 15ರಷ್ಟು ಹೆಚ್ಚಿದೆ. ಗಂಡಂದಿರು ಮತ್ತು ಸಂಬಂಧಿಕರ ಹಿಂಸೆಯಲ್ಲಿ ಶೇ.14 ಹೆಚ್ಚಳವಾಗಿದೆ. ಮಹಿಳೆಯರ ಅಪಹರಣದಲ್ಲಿ ಶೇ.13 ಏರಿಕೆಯಾಗಿದೆ. ಲೈಂಗಿಕ ಕಿರುಕುಳದಲ್ಲಿ ಶೇ.11 ಏರಿಕೆಯಾಗಿದೆ. ಅತ್ಯಾಚಾರ ಮತ್ತು ಲೈಂಗಿಕ ಪೀಡನೆಯ ಪ್ರಕರಣಗಳಲ್ಲಿ ಶೇ.6 ರಿಂದ 7 ರಷ್ಟು ಏರಿಕೆಯಾಗಿದೆ. ಲೈಂಗಿಕಾರ್ಥ ಬರುವಂತೆ ಹುಡುಗಿಯರ ಜೊತೆ ವರ್ತಿಸುವ ಪ್ರಮಾಣದಲ್ಲಿ ಶೇ.12 ಏರಿಕೆಯಾಗಿದೆ.

ಅತ್ಯಾಚಾರ ಒಂದು ಸಾಮಾಜಿಕ ಕಳಂಕವಾಗಿರುವುದರಿಂದ ವರದಿಯಾಗುವ ಪ್ರಕರಣಗಳು ಕಡಿಮೆ. ಹೀಗಾಗಿ ಶೇಕಡಾವಾರು ಹೆಚ್ಚಳದಲ್ಲಿ ಅತಿಯಾದ ಏರಿಕೆ ದಾಖಲಾಗಿಲ್ಲ. ಆದರೂ ಇದು (ಶೇ.6 ರಿಂದ 7) ಸರಾಸರಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಇದೆ ಎನ್ನುವುದು ಆತಂಕದ ಸಂಗತಿಯಾಗಿದೆ.

ಮಹಿಳೆಯರ ವಿರುದ್ಧದ ಅಪರಾಧ ಕೃತ್ಯಗಳು ಹೆಚ್ಚುತ್ತಿದ್ದರೂ ತನಿಖಾ ಸಂಸ್ಥೆಗಳ ಆದ್ಯತಾ ಪಟ್ಟಿಯಲ್ಲಿ ಅವು ಇದ್ದಂತೆ ಕಾಣುವುದಿಲ್ಲ ಎಸ್‌ಸಿಆರ್‌ಬಿಯಿಂದ ಲಭ್ಯ ಮಾಹಿತಿ ಹೇಳುವಂತೆ, ಲೈಂಗಿಕ ಕಿರುಕುಳದ 10 ಪ್ರಕರಣಗಳಲ್ಲಿ ಒಂದನ್ನು ಮಾತ್ರವೇ ಘಟನೆ ನಡೆದ ವರ್ಷವೇ ತನಿಖೆಗೆ ಕೈಗೆತ್ತಿಕೊಳ್ಳಲಾಗುತ್ತದೆ. ಲೈಂಗಿಕ ಪೀಡನೆ ಅಥವಾ ಗಂಡ, ಸಂಬಂಧಿಕರ ಹಿಂಸೆಯ 10 ಪ್ರಕರಣಗಳಲ್ಲಿ ಎರಡನ್ನು ಮಾತ್ರವೇ ಆಯಾ ವರ್ಷ ವಿಚಾರಿಸಲಾಗುತ್ತದೆ. ಅದೇ ರೀತಿ ಅತ್ಯಾಚಾರ ಮತ್ತು ವರದಕ್ಷಿಣೆ ಸಾವಿನ 10 ಪ್ರಕರಣಗಳಲ್ಲಿ ಮೂರನ್ನು ಮಾತ್ರವೇ ಆಯಾ

ಪುಟ 4 ಕ್ಕೆ.........



JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE No 12. 18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH